# ಕರ್ನಾಟಕ ವಿಧಾನಮಂಡಲ

**ಕರ್ನಾಟಕ ಶಾಸಕಾಂಗ ಪತ್ರಿಕೆ**

**(ತ್ರೈಮಾಸಿಕ ಪತ್ರಿಕೆ)**

**ಏಪ್ರಿಲ್, ಮೇ, ಜೂನ್ –2024**

**ಸಂಪುಟ–VI ಸಂಖ್ಯೆ– 2**

**ಪ್ರಕಟಣೆ:**
**ಸಂಶೋಧನಾ ಮತ್ತು ಉಲ್ಲೇಖನಾ ಶಾಖೆ,**
**ಕರ್ನಾಟಕ ವಿಧಾನ ಸಭೆ ಸಚಿವಾಲಯ,**
**ಕೊಠಡಿ ಸಂಖ್ಯೆ: 28, ನೆಲಮಹಡಿ, ವಿಧಾನಸೌಧ,**
**ಬೆಂಗಳೂರು – 560 233**

## ವಿಶೇಷ ಸೂಚನೆ

ಕರ್ನಾಟಕ ಶಾಸಕಾಂಗ ಪತ್ರಿಕೆಯು ಕರ್ನಾಟಕ ವಿಧಾನ ಸಭೆ/ವಿಧಾನ ಪರಿಷತ್ತಿನ ಸದಸ್ಯರುಗಳ ಪರಾಮರ್ಶೆಗಾಗಿ ಪ್ರಕಟಿಸಲಾಗುತ್ತಿದ್ದು, ಇದು ಆಂತರಿಕ ಪ್ರಕಟಣೆಗೆ ಮಾತ್ರ ಸೀಮಿತವಾಗಿರುತ್ತದೆ.

ಈ ಪತ್ರಿಕೆಯಲ್ಲಿ ಅಳವಡಿಸಲಾಗಿರುವ ಮಾಹಿತಿಗಳು ವಿವಿಧ ದಿನ ಪತ್ರಿಕೆಗಳಲ್ಲಿ ಪ್ರಕಟವಾಗಿರುವ ಸುದ್ದಿಗಳ ಆಧಾರಿತವಾಗಿದ್ದು, ಇದರಲ್ಲಿ ನ್ಯೂನತೆ, ವ್ಯತ್ಯಾಸಗಳಿಂದ ಅಥವಾ ನಿಖರತೆಯ ಕೊರತೆಯಿಂದ ಯಾವುದೇ ವ್ಯಕ್ತಿಗೆ ಉಂಟಾಗಬಹುದಾದ ನಷ್ಟ/ಹಾನಿಗೆ ವಿಧಾನ ಸಭಾ ಸಚಿವಾಲಯವು ಯಾವುದೇ ರೀತಿ ಜವಾಬ್ದಾರವಾಗುವುದಿಲ್ಲ.

**ಸೂಚನೆ:–** ಪತ್ರಿಕೆಯು ವಿಧಾನ ಮಂಡಲದ ಅಂತರ್ಜಾಲ **http://kla.kar.nic.in** ನಲ್ಲೂ ಲಭ್ಯವಿದೆ

# ಮುನ್ನುಡಿ

ಕರ್ನಾಟಕ ವಿಧಾನಮಂಡಲದ ಸಂಶೋಧನಾ ಮತ್ತು ಉಲ್ಲೇಖನಾ ಶಾಖೆಯು ಉಭಯ ಸದನಗಳ ಮಾನ್ಯ ಸದಸ್ಯರುಗಳ ಉಪಯೋಗಕ್ಕಾಗಿ ಕರ್ನಾಟಕ ಶಾಸಕಾಂಗ ತ್ರೈಮಾಸಿಕ ಪತ್ರಿಕೆಯ ಸಂಪುಟ–**VI** ರ **ಎರಡ**ನೇಯ ಸಂಚಿಕೆಯನ್ನು ಪ್ರಕಟಪಡಿಸುತ್ತಿದೆ.

ತ್ರೈಮಾಸಿಕ ಶಾಸಕಾಂಗ ಪತ್ರಿಕೆಯು ಮುಖ್ಯವಾಗಿ ಕರ್ನಾಟಕ ವಿಧಾನಮಂಡಲದ ಎರಡೂ ಸದನಗಳ ಶಾಸಕಾಂಗದ ಸುದ್ದಿಗಳು, ಲೋಕಸಭೆ, ರಾಜ್ಯಸಭೆಗಳ, ಸಂಸದೀಯ ವ್ಯವಹಾರಗಳಿಗೆ ಸಂಬಂಧಿಸಿದ ಪ್ರಮುಖ ಸುದ್ದಿಗಳು, ರಾಜ್ಯಗಳ, ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಹಾಗೂ ಇತರೆ ವಿಷಯಗಳನ್ನೊಳಗೊಂಡಿರುತ್ತದೆ.

ಈ ಸಂಚಿಕೆಯಲ್ಲಿ 2024ನೇ ಸಾಲಿನ ಏಪ್ರಿಲ್, ಮೇ ಮತ್ತು ಜೂನ್ ತಿಂಗಳ ಅವಧಿಯಲ್ಲಿನ ಪ್ರಮುಖ ಸುದ್ದಿ, ಮಾಧ್ಯಮಗಳಲ್ಲಿ ಪ್ರಕಟವಾದ ದೈನಂದಿನ ಸುದ್ದಿಗಳನ್ನು ಸಂಗ್ರಹಿಸಿ ಪ್ರಕಟಿಸಲಾಗಿದೆ.

ಸಂಶೋಧನಾ ಮತ್ತು ಉಲ್ಲೇಖನಾ ವಿಭಾಗವು ಸಿದ್ಧಪಡಿಸಿ ಹೊರತರುತ್ತಿರುವ ಈ ಪತ್ರಿಕೆಯ ಗುಣಮಟ್ಟವನ್ನು ಉನ್ನತೀಕರಿಸಲು ಹಾಗೂ ಹೆಚ್ಚು ವಿಷಯಾಸಕ್ತವಾಗಿಸಲು ಇದರ ಬೆಳವಣಿಗೆಯ ಸುಧಾರಣೆಗೆ ಮಾನ್ಯ ಸದಸ್ಯರುಗಳಿಂದ ಅಮೂಲ್ಯ ಸಲಹೆ ಮತ್ತು ಸೂಚನೆಗಳನ್ನು ಬರಹ ರೂಪದಲ್ಲಿ ಸ್ವೀಕರಿಸಲು ಸದಾ ಸ್ವಾಗತವಿರುತ್ತದೆ.

ಮಾನ್ಯ ಸದಸ್ಯರುಗಳು ತಮ್ಮ ಲೇಖನಗಳನ್ನು ನೀಡಿದಲ್ಲಿ, ಈ ಪತ್ರಿಕೆಯಲ್ಲಿ ಪ್ರಕಟಿಸಲಾಗುವುದು.

**ಎಂ.ಕೆ.ವಿಶಾಲಾಕ್ಷಿ**
ಕಾರ್ಯದರ್ಶಿ,
ಕರ್ನಾಟಕ ವಿಧಾನ ಸಭೆ.

ಬೆಂಗಳೂರು

ದಿನಾಂಕ: 08–11–2024

## ಕರ್ನಾಟಕ ಶಾಸಕಾಂಗ ತ್ರೈಮಾಸಿಕ ಪತ್ರಿಕೆಯ ಸಂಪಾದಕ ವರ್ಗ
## ಕರ್ನಾಟಕ ವಿಧಾನ ಸಭೆ ಸಚಿವಾಲಯ

| | |
|---|---|
| 1. ಶ್ರೀಮತಿ ಎಂ.ಕೆ. ವಿಶಾಲಾಕ್ಷಿ | : ಕಾರ್ಯದರ್ಶಿ |
| 2. ಶ್ರೀ ಬಿ.ಎಸ್. ಮಹಾಲಿಂಗೇಶ್ | : ನಿರ್ದೇಶಕರು |
| 3. ಶ್ರೀ ಬಿ.ಎಂ.ಶಂಭು | : ಜಂಟಿ ನಿರ್ದೇಶಕರು |
| 4. ಶ್ರೀಮತಿ ವಿ.ಭಾಗ್ಯ | : ಉಪ ನಿರ್ದೇಶಕರು |
| 5. ಶ್ರೀ ಬಿ.ಎ.ಸತೀಶ್ | : ಸಹಾಯಕ ನಿರ್ದೇಶಕರು |

## ಕರ್ನಾಟಕ ವಿಧಾನ ಪರಿಷತ್ತಿನ ಸಚಿವಾಲಯ

| | |
|---|---|
| 1. ಶ್ರೀಮತಿ ಕೆ. ಆರ್. ಮಹಾಲಕ್ಷ್ಮಿ | : ಕಾರ್ಯದರ್ಶಿ |
| 2. ಶ್ರೀಮತಿ ಎಸ್. ನಿರ್ಮಲ | : ಕಾರ್ಯದರ್ಶಿ– II |

# ಕರ್ನಾಟಕ ಶಾಸಕಾಂಗ ಪತ್ರಿಕೆ

## (ತ್ರೈಮಾಸಿಕ ಪತ್ರಿಕೆ)

## ಏಪ್ರಿಲ್, ಮೇ ಮತ್ತು ಜೂನ್ – 2024

ಸಂಪುಟ–VI ಸಂಖ್ಯೆ– 2

## ಪರಿವಿಡಿ

### ಭಾಗ–1
### ವಿಧಾನ ಮಂಡಲದ ಸುದ್ದಿಗಳು


| ಕ್ರಮ ಸಂಖ್ಯೆ | ವಿಷಯ | ಪುಟ ಸಂಖ್ಯೆ |
|---|---|---|
| 1 | ಸನ್ಮಾನ್ಯ ಸಭಾಪತಿಗಳು ಹಾಗೂ ಸನ್ಮಾನ್ಯ ಸಭಾಧ್ಯಕ್ಷರ ಕಾರ್ಯಕ್ರಮಗಳು | 3–22 |
| 2 | ಚುನಾವಣೆ ಪ್ರಜಾಪ್ರಭುತ್ವದ ಉತ್ಸವ | 22–23 |
| 3 | ಶಾಸನ ಸಭೆಗಳ ಕಲಾಪ ಅವಧಿ ಸರಾಸರಿ 22 ದಿನ | 23–24 |
| 4 | ಭಾಷಣದಲ್ಲಿ ಮಾತ್ರ ಉಳಿದಿದೆ ಜಾತ್ಯಾತೀತತೆ : ಹೊರಟ್ಟಿ ಬೇಸರ | 24 |
| 5 | ವಚನ ಸಾಹಿತ್ಯದಿಂದ ಮನದೊಳಗಿನ ದ್ವಂದ್ವಗಳ ನಿವಾರಣೆ ಸುತ್ತೂರು ಶ್ರೀ | 24–25 |
| 6 | ಮೇಲ್ಮನೆಯ 11 ಸ್ಥಾನಕ್ಕೆ ಅವಿರೋಧ ಆಯ್ಕೆ | 25 |
| 7 | ವಿಧಾನಸಭೆಯ ಪಶ್ಚಿಮ ದ್ವಾರಕ್ಕೂ ಬಂತು ಕಳೆ | 25–26 |
| 8 | ಸರ್ಕಾರಿ ಕಚೇರಿಗಳಲ್ಲಿ ಒತ್ತಡ ಸಹಜ:ಖಾದರ್ | 26–27 |
| 9 | ಸುರಪುರ ನೂತನ ಶಾಸಕರಾಗಿ ನಾಯಕ ಪ್ರಮಾಣ ವಚನ ಸ್ವೀಕಾರ | 27 |
| 10 | ಬೆಂಗಳೂರು ವಿವಿ ಕ್ಯಾಂಪಸ್‌ನಲ್ಲಿ ವಾಹನ ಸಂಚಾರ ನಿರ್ಬಂಧಿಸಿ: ರಾಜ್ಯ ಸರ್ಕಾರಕ್ಕೆ ಹೊರಟ್ಟಿ ಪತ್ರ | 28 |
| 11 | ಹೋಮಿಯೋಪಥಿ ಸಂಶೋಧನೆ ಅಗತ್ಯ | 28 |
| 12 | ಶಾಸಕರಿಂದ ನಾಟಕ, ಯಕ್ಷಗಾನ, ಮಿಮಿಕ್ರಿ | 29 |
| 13 | ಯತೀಂದ್ರ, ಸಿ.ಟಿ.ರವಿ ಸೇರಿ 17 ಎಂಎಲ್‌ಸಿಗಳು ಪ್ರಮಾಣ | 30 |

| | ಭಾಗ–2<br>ಕರ್ನಾಟಕ ವಿಧಾನಮಂಡಲದ ಕಾರ್ಯಚಟುವಟಿಕೆಗಳು | |
|---|---|---|
| 1 | ವಿಧಾನಮಂಡಲದ/ವಿಧಾನಸಭೆಯ ವಿವಿಧ ಸ್ಥಾಯಿ ಸಮಿತಿಗಳ ಸಭೆಗಳನ್ನು ನಡೆಸಲು ಸನ್ಮಾನ್ಯ ಸಭಾಧ್ಯಕ್ಷರು ಅನುಮತಿ ನೀಡಿರುವ ಬಗ್ಗೆ ಲಘು ಪ್ರಕಟಣೆ | 33 |

| | ಭಾಗ–3<br>ಸಂಸತ್ ಸುದ್ದಿಗಳು | |
|---|---|---|
| 1 | 12 Rajya Sabha members sworn in, Sonia Gandi set to enter House | 37 |
| 2 | ಸ್ಪೀಕರ್ ಪುನರಾಯ್ಕೆ 20 ವರ್ಷಗಳಲ್ಲಿ ಇದೇ ಮೊದಲು | 37–38 |
| 3 | ಹೊಸ ಮುಖಗಳ 18ನೇ ಲೋಕಸಭೆ | 38 |
| 4 | 10 ವರ್ಷದ ಬಳಿಕ ಲೋಕಸಭೆಗೆ ವಿಪಕ್ಷ ನಾಯಕ | 38–39 |
| 5 | Mahtab,7-term MP, is pro-tem Speaker; first session from June 24 | 39–40 |
| 6 | $18^{th}$ Lok Sabha opens with 262 MPs taking oath on the first day | 40 |
| 7 | ಕನ್ನಡ ಭಾಷೆಯಲ್ಲೇ ದೇವರ ಹೆಸರಲ್ಲಿ ಪ್ರಮಾಣ ಸ್ವೀಕರಿಸಿದ ಸಂಸದರು | 41 |
| 8 | ಶಪಥದ ವೇಳೆ ಒವೈಸಿ 'ಜೈ ಪ್ಯಾಲೆಸ್ತೀನ್' ಘೋಷಣೆ | 41 |
| 9 | ಓಂ ಬಿರ್ಲಾ ಮತ್ತೆ ಸ್ಪೀಕರ್ | 41–42 |

| | ಭಾಗ–4<br>ಕೇಂದ್ರ ಸರ್ಕಾರದ ಸುದ್ದಿಗಳು | |
|---|---|---|
| 1 | ಕೇಂದ್ರ ಸಂಪುಟದಲ್ಲಿ ರಾಜ್ಯದ ಪ್ರತಿನಿಧಿಗಳು | 46 |
| 2 | ಜಿಎಸ್‌ಟಿ ಮಂಡಳಿಗೆ ಕೃಷ್ಣ ಬೈರೇಗೌಡ | 47 |
| 3 | ಇಡೀ ವಿಶ್ವ ಗಮನ ಭಾರತದತ್ತ ರಾಷ್ಟ್ರಪತಿ | 47 |

| | ಭಾಗ–5<br>ರಾಜ್ಯ ಸರ್ಕಾರ ಸುದ್ದಿಗಳು | |
|---|---|---|
| 1 | IMD predicts dry spell in B'luru for another week | 50 |
| 2 | BBMP can generate 6 time more revenue: Study | 50–51 |
| 3 | ಹೊರ ಗುತ್ತಿಗೆಗೂ ಮೀಸಲಾತಿ | 51–52 |
| 4 | ವೃಕ್ಷ ಸಂರಕ್ಷಣಾ ಕಾಯ್ದೆಗೆ ತಿದ್ದುಪಡಿ | 52–53 |
| 5 | G7 summit commits to concrete infrastructure | 53 |
| 6 | Karnataka introduces updated compulsory service rules for medicos | 53–54 |
| 7 | ಸರ್ಕಾರಿ ಶಾಲೆಗಳಲ್ಲಿ ಇಂಗ್ಲಿಷ್ ಮಾಧ್ಯಮಕ್ಕೆ ಅಸ್ತು | 54–55 |
| 8 | ವಿಧಾನಸೌಧ ಬಳಿ ಭುವನೇಶ್ವರಿ ಪ್ರತಿಮೆ | 55 |
| 9 | ಗಾಂಧಿ ಜೊತೆ ಅಂಬೇಡ್ಕರ್ ಚಿತ್ರ ಕಡ್ಡಾಯ | 55 |
| 10 | ಕರ್ನಾಟಕ ನಿವಾಸಿಗಳಿಗೆಲ್ಲ ಕನ್ನಡ ಕಡ್ಡಾಯ | 56 |
| 11 | ಇಸ್ರೋ ಸ್ಪೇಸ್‌ಶಿಪ್ 3ನೇ ಪ್ರಯೋಗವೂ ಯಶಸ್ವಿ | 56 |
| 12 | ನಿಗಮ–ಮಂಡಳಿ ಸದಸ್ಯರ ಆಯ್ಕೆಗೆ ಡಾ: ಪರಂ ಸಮಿತಿ | 56–57 |
| 13 | ಪರಿಶಿಷ್ಟರ ಭೂಮಿ ವರ್ಗಾವಣೆ ನಿಯಮ ಬಿಗಿ | 57–58 |

| | ಭಾಗ – 6<br>ನ್ಯಾಯಾಲಯ ಸುದ್ದಿಗಳು | |
|---|---|---|
| 1 | ನಾಡಗೀತೆ ಖಾಸಗಿ ಶಾಲೆಗೂ ಕಡ್ಡಾಯ: ಸರ್ಕಾರ | 62 |
| 2 | Several States are coming to court against Centre:SC | 63 |
| 3 | ನಕಲಿ ಜಾತಿ ಪ್ರಮಾಣಪತ್ರ ಪಶ್ನಿಸಲು ಕಾಲಮಿತಿ ಇಲ್ಲವೆಂದ ಹೈಕೋರ್ಟ್ | 63–64 |
| 4 | ಶಾಸಕ ಉದಯ್ ಗರುಡಾಚಾರ್‌ಗೆ ವಿಧಿಸಿದ್ದ ಶಿಕ್ಷೆ ರದ್ದು | 64–65 |
| 5 | ಸುಳ್ಳು ದೂರು ತಡೆಗೆ ಕ್ರಮಕೈಗೊಳ್ಳಿ | 65 |
| 6 | ಡಿಸಿಆರ್ ಇಡಿಸಿಆರ್‌ಇಗೆ ಪ್ರಕರಣ ದಾಖಲಿಸುವ ಅಧಿಕಾರ ಇಲ್ಲ | 65–66 |
| 7 | Lawyers can’t be held liable under consumer law: SC | 67 |
| 8 | ಅವಿಶ್ವಾಸ ನಿರ್ಣಯಕ್ಕೆ 15 ತಿಂಗಳಾಗಿರಬೇಕು | 67–68 |

| | ಭಾಗ–7<br>ಹೊರ ರಾಜ್ಯ ಸುದ್ದಿಗಳು | |
|---|---|---|
| 1 | ಶಿಕ್ಷಕರ ನೇಮಕ ಅಸಿಂಧು ಆದೇಶಕ್ಕೆ ತಡೆ | 72 |
| **2** | JJP, INLD seek floor test, say BJP govt, lost majority | 72–73 |
| **3** | **TN Guv did not accord sanction to prosecute Annamalai: Raj Bhavan** | 73–74 |
| **4** | **Cong’s Sofia 1st Muslim Women to be elected MLA in Odisha** | 74 |
| **5** | ಸಿಕ್ಕಿಂ ಸಿಎಂ ಆಗಿ ತಮಾಂಗ್ ಪ್ರಮಾಣವಚನ | 75 |
| **6** | ಮೋಹನ್ ಮಾಝಿ ಒಡಿಶಾ ಮುಖ್ಯಮಂತ್ರಿ | 75–76 |
| **7** | ಬಿಹಾರ:ಮೀಸಲು ಶೇ.65ಕ್ಕೆ ಏರಿಕೆ ಹೈಕೋರ್ಟ್‌ನಿಂದ ರದ್ದು | 76 |
| **8** | Naidu is back A.P Chief Minister | 76–77 |
| **9** | ದಿಲ್ಲಿ ಸಿಎಂ ಅರವಿಂದ್ ಕ್ರೇಜಿವಾಲ್‌ಗೆ ಜಾಮೀನು | 77 |
| **10** | ರಾಜ್ಯದ ಹೆಸರು ‘ಕೇರಳಂ’ ಎಂದು ಬದಲು:ಕೇರಳ ವಿಧಾನಸಭೆ ಗೊತ್ತುವಳಿ | 78 |
| **11** | ರಾಜ್ಯಪಾಲರ ವರ್ತನೆಗೆ ಆಕ್ಷೇಪ | 78 |
| **12** | ದೇಶಾದ್ಯಂತ ಜಾತಿ ಗಣತಿಗೆ ಒತ್ತಾಯ | 79 |
| **13** | ಹೊಸೂರಿನಲ್ಲಿ ಹೊಸ ಏರ್‌ಪೋರ್ಟ್ | 79 |

| | ಭಾಗ– 8<br>ಶ್ರದ್ಧಾಂಜಲಿ | |
|---|---|---|
| 1 | ಸುನಂದಾ ಪಾಟೀಲ್, ಮಾಜಿ ವಿಧಾನ ಪರಿಷತ್ ಸದಸ್ಯರು | 82 |
| 2 | ರಮೇಶ್‌ಕುಮಾರ ಪಾಂಡೆ, ಮಾಜಿ ವಿಧಾನಸಭೆ ಸದಸ್ಯರು | 82 |
| 3 | ಶ್ರೀನಿವಾಸ ಪ್ರಸಾದ್, ಮಾಜಿ ಕೇಂದ್ರ ಸಚಿವರು | 83 |
| 4 | ಡಾ.ನಾಗರೆಡ್ಡಿ ಪಾಟೀಲ್, ಮಾಜಿ ವಿಧಾನಸಭೆ ಸದಸ್ಯರು | 84 |
| **5** | ಕೆ.ವಸಂತಬಂಗೇರ, ಮಾಜಿ ವಿಧಾನಸಭೆ ಸದಸ್ಯರು | **84** |
| 6 | ಟಿ.ಕೆ.ಚಿನ್ನಸ್ವಾಮಿ, ಮಾಜಿ ವಿಧಾನ ಪರಿಷತ್ ಸದಸ್ಯರು | 85 |
| 7 | ಇಕ್ಬಾಲ್ ಅಹ್ಮದ್ ಸರಡಗಿ, ಮಾಜಿ ಸಂಸತ್ ಸದಸ್ಯರು | 85–86 |

| | | |
|---|---|---|
| 8 | ಎಂ.ಪಿ.ಕೇಶವಮೂರ್ತಿ, ಮಾಜಿ ಸಚಿವರು | 86 |
| 9 | ಡಾ.ಪಾಟೀಲ ಬಸನಗೌಡ ಗುರನಗೌಡ, ಮಾಜಿ ವಿಧಾನಸಭೆ ಸದಸ್ಯರು | 86–87 |
| 10 | ಎಂ.ಬಿ.ಭಾನುಪ್ರಕಾಶ್, ಮಾಜಿ ವಿಧಾನ ಪರಿಷತ್ ಸದಸ್ಯರು | 87–88 |

| | | |
|---|---|---|
| | **ಭಾಗ – 9**<br>**ಪ್ರಮುಖ ಲೇಖನಗಳು** | |
| 1 | The case for the second house state Legeslative Councils | 91 |
| 2 | ಸ್ಪೀಕರ್ ಸ್ಥಾನದ ಮಹತ್ವ | 91–92 |
| 3 | ಮೇಲ್ಮನೆ ರಚನೆ ಸ್ವಾರಸ್ಯ | 93–94 |
| 4 | ಹೊರಟ್ಟಿ– @ 44: ಸಂಸದೀಯ ಪಯಣದ ಸಾರ್ಥಕ ಮೈಲಿಗಲ್ಲು | 94–95 |


ಸೂಚನೆ:– ಇಲ್ಲಿ ಆಯ್ಕೆ ಮಾಡಿರುವ ಲೇಖನಗಳು ಪ್ರಮುಖ ದಿನಪ್ರತಿಕೆಗಳಿಂದ ಆಯ್ದು ಪ್ರಕಟಿಸಲಾಗಿದೆ. ಇಲ್ಲಿನ ಅಭಿಪ್ರಾಯಗಳು ಸಂಪೂರ್ಣ ಲೇಖಕರದ್ದಾಗಿರುತ್ತದೆ.

# ಭಾಗ–1

# ವಿಧಾನ ಮಂಡಲದ ಸುದ್ದಿಗಳು

# 1. ಸನ್ಮಾನ್ಯ ಸಭಾಪತಿಗಳು ಹಾಗೂ ಸನ್ಮಾನ್ಯ ಸಭಾಧ್ಯಕ್ಷರ ಕಾರ್ಯಕ್ರಮಗಳು

## ಡಾ: ಬಿ.ಆರ್.ಅಂಬೇಡ್ಕರ್‌ರವರ ಜನ್ಮ ದಿನಾಚರಣೆ






ದಿನಾಂಕ:14.04.2024ರಂದು ವಿಧಾನಸೌಧದ ಮುಂಭಾಗದಲ್ಲಿರುವ ಸಂವಿಧಾನ ಶಿಲ್ಪಿ, ಭಾರತರತ್ನ ಮಹಾ ಮಾನವತಾವಾದಿ, ಬಾಬಾ ಸಾಹೇಬ ಡಾ. ಬಿ.ಆರ್.ಅಂಬೇಡ್ಕರ್‌ರವರ 133ನೇ ಜನ್ಮ ದಿನಾಚರಣೆ ಅಂಗವಾಗಿ ಮಾನ್ಯ ವಿಧಾನಪರಿಷತ್ತು ಸಭಾಪತಿ ಶ್ರೀ ಬಸವರಾಜ್ ಎಸ್. ಹೊರಟ್ಟಿ, ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಸಿದ್ದರಾಮಯ್ಯರವರು ಡಾ.ಬಿ.ಆರ್ ಅಂಬೇಡ್ಕರ್‌ರವರ ಪ್ರತಿಮೆಯ ಮುಂದೆ ದೀಪ ಬೆಳಗಿಸಿ ಜನ್ಮ ದಿನವನ್ನು ಆಚರಿಸಿದರು. ಈ ಸಂದರ್ಭದಲ್ಲಿ ಸಚಿವರು ಹಾಗೂ ಅಧಿಕಾರಿಗಳು ಉಪಸ್ಥಿತರಿದ್ದರು.

## ಶಾಂತಪ್ಪ ಕುರುಬ– ಸನ್ಮಾನ್ಯ ಸಭಾಪತಿಗಳಿಂದ ಸನ್ಮಾನ




ದಿನಾಂಕ:17.04.2024ರಂದು ಸಭಾಪತಿ ಶ್ರೀ ಬಸವರಾಜ್ ಎಸ್. ಹೊರಟ್ಟಿ ಅವರು ತಮ್ಮ ಬೆಂಗಳೂರಿನ ಕಾರ್ಯಾಲಯದಲ್ಲಿ ಕನ್ನಡದಲ್ಲಿ ಯು.ಪಿ.ಎಸ್.ಸಿ ಪರೀಕ್ಷೆ ಬರೆದು ಪಾಸಾದ ಶಾಂತಪ್ಪ ಕುರುಬರ ಅವರನ್ನ ಸನ್ಮಾನಿಸಿ ಮಾತನಾಡಿದ ಅವರು ಶಾಂತಪ್ಪ ಅವರು ವಿದ್ಯಾರ್ಥಿ ಜೀವನದಲ್ಲಿ ಸಾಕಷ್ಟು ಏಳುಬೀಳುಗಳನ್ನು ಕಂಡು ಎಸ್.ಎಸ್.ಎಲ್.ಸಿ ಹಾಗೂ ಪಿ.ಯು.ಸಿಯಲ್ಲಿ ಫೇಲಾದರೂ ನಿರಂತರ ಪರಿಶ್ರಮದಿಂದ ಅತ್ಯುನ್ನತ ಮಟ್ಟದ ಪರೀಕ್ಷೆಯಾದ ಯು.ಪಿ.ಎಸ್.ಸಿ ಪರೀಕ್ಷೆಯನ್ನು ಛಲಬಿಡದೆ ಬರೆದು ಪಾಸಾಗುವ ಮೂಲಕ ಲಕ್ಷಾಂತರ ವಿದ್ಯಾರ್ಥಿಗಳಿಗೆ ಪ್ರೇರಣೆಯಾಗಿದ್ದಾರೆ. ಹಿಂದುಳಿದ ಕಲ್ಯಾಣ ಕರ್ನಾಟಕದಿಂದ ಬಂದ ಶಾಂತಪ್ಪ ಕುರುಬರವರು ಆ ಭಾಗದ ಹೆಮ್ಮೆಯ ಪುತ್ರರಾಗದೆ ಇಡೀ ಕರ್ನಾಟಕದ ಕೀರ್ತಿ ಹೆಚ್ಚಿಸಿ ಮೆಚ್ಚುಗೆಗೆ ಪಾತ್ರರಾಗಿದ್ದಾರೆ. ಭರವಸೆ ಕಳೆದುಕೊಂಡ, ಕಳೆದುಕೊಳ್ಳುತ್ತಿರುವ ವಿದ್ಯಾರ್ಥಿಗಳಿಗೆ ಶಾಂತಪ್ಪ ಕುರುಬರವರ ಸಾಧನೆಯ ಹಾದಿ ಅವರ ಜೀವನ ವಿದ್ಯಾರ್ಥಿಗಳಿಗೆ ಅತ್ಯುನ್ನತ ಪಾಠ ಹಾಗೂ ಮಾದರಿ ಎಂದು ಬಸವರಾಜ್ ಎಸ್. ಹೊರಟ್ಟಿ ಅವರು ತಮ್ಮ ಅಂತರಾಳದ ಮಾತುಗಳನ್ನು ಆಡುವ ಮೂಲಕ ಶಾಂತಪ್ಪ ಕುರುಬರವರಿಗೆ ಶುಭ ಕೋರಿದರು.

ಇದೇ ಸಂದರ್ಭದಲ್ಲಿ ರಾಜ್ಯದ ವಿದ್ಯಾರ್ಥಿಗಳಿಗೆ, ಯುವಕರಿಗೆ ಕಿವಿಮಾತನ್ನು ಹೇಳಿದ ಹೊರಟ್ಟಿ ಅವರು ತಮ್ಮ ತಮ್ಮ ಜೀವನದ ಭರವಸೆಗಳು ಬತ್ತದಂತೆ ನೋಡಿಕೊಳ್ಳಿ ಕನಸು ಕಾಣಲು ದುಡ್ಡು ಖರ್ಚು ಮಾಡಬೇಕಾಗಿಲ್ಲ ಒಂದಿಷ್ಟು ಶ್ರಮ ಹಾಕಿದ್ರೆ ಸಾಕು. ನಿರಂತರ ಪ್ರಯತ್ನ ಇಡೀ ತಮ್ಮ ಬದುಕನ್ನ ಹಸನಗೊಳಿಸುತ್ತದೆ ಆ ನಿಟ್ಟಿನತ್ತ ಪ್ರತಿಯೊಬ್ಬ ಯುವಕರು ಸಾಗಲಿ ನಿಮಗೂ ಕೂಡ ಶಾಂತಪ್ಪ ಕುರುಬರಂತೆ ಯಶಸ್ಸು ಖಂಡಿತವಾಗಿ ಸಿಗುತ್ತದೆ ಎಂದು ಸಭಾಪತಿ ಶ್ರೀ ಬಸವರಾಜ್ ಎಸ್. ಹೊರಟ್ಟಿ ಅವರು ಹೇಳಿದರು.

ಈ ಸಂದರ್ಭದಲ್ಲಿ ಸಭಾಪತಿಯವರ ವಿಶೇಷಕರ್ತವ್ಯಾಧಿಕಾರಿ ಡಾ:ಮಹೇಶಾಳೇಶ್ವರ ಸೇರಿದಂತೆ ಪರಿಷತ್ತಿನ ವಿವಿಧ ಸಿಬ್ಬಂದಿ ವರ್ಗ ಉಪಸ್ಥಿತರಿದ್ದರು.

## ಶ್ರೀ ಜಗದ್ಗುರು ತೋಂಟದಾರ್ಯ ಜಾತ್ರಾ ಮಹೋತ್ಸವ





ದಿನಾಂಕ: 24.04.2024ರಂದು ಯಡೆಯೂರು ಶ್ರೀ ಜಗದ್ಗುರು ಡಾ.ತೋಂಟದಾರ್ಯ ಸಂಸ್ಥಾನ ಮಠ, ಡಂಬಳ–ಗದಗದಲ್ಲಿ ನಡೆದ ಶ್ರೀಜಗದ್ಗುರು ತೋಂಟದಾರ್ಯ ಜಾತ್ರಾ ಮಹೋತ್ಸವದಲ್ಲಿ ಸನ್ಮಾನ್ಯ ಸಭಾಪತಿ ಶ್ರೀ ಬಸವರಾಜ್ ಎಸ್. ಹೊರಟ್ಟಿರವರು ಪಾಲ್ಗೊಂಡಿದ್ದರು.

## ಕೆ.ಸಿ. ರೆಡ್ಡಿಯವರ ಜನ್ಮದಿನಾಚರಣೆ





ದಿನಾಂಕ: 05.05.2024ರಂದು ವಿಧಾನಸೌಧದ ಪಶ್ಚಿಮ ದಿಕ್ಕಿನಲ್ಲಿರುವ ಮಾಜಿ ಮುಖ್ಯಮಂತ್ರಿ ದಿವಂಗತ ಕೆ.ಸಿ. ರೆಡ್ಡಿಯವರ ಜನ್ಮದಿನದ ಸಂಬಂಧ ಅವರ ಪ್ರತಿಮೆಗೆ ಮಾನ್ಯ ಸಭಾಪತಿಗಳಾದ ಶ್ರೀ ಬಸವರಾಜ್ ಎಸ್. ಹೊರಟ್ಟಿ ಹಾಗೂ ಮಾನ್ಯ ಕಂದಾಯ ಸಚಿವರಾದ ಶ್ರೀ ಕೃಷ್ಣ ಭೈರೆಗೌಡರವರು ಮಾಲಾರ್ಪಣೆ ಮಾಡಿದರು.

## ಐಪಿಎಲ್ ಕ್ರಿಕೆಟ್ ಪಂದ್ಯಾವಳಿ





ದಿನಾಂಕ: 09.05.2024ರಂದು ಬೆಂಗಳೂರಿನ ಚಿನ್ನಸ್ವಾಮಿ ಕ್ರಿಕೆಟ್ ಕ್ರೀಡಾಂಗಣದಲ್ಲಿ ಆರ್‌ಸಿಬಿ ಮತ್ತು ಸಿಎಸ್‌ಕೆ ನಡುವೆ ನಡೆದ ಐಪಿಎಲ್ ಕ್ರಿಕೆಟ್ ಪಂದ್ಯಾವಳಿಯನ್ನು ಮಾನ್ಯ ಸಭಾಪತಿ ಶ್ರೀ ಬಸವರಾಜ್ ಎಸ್. ಹೊರಟ್ಟಿ, ಮಾನ್ಯ ಮುಖ್ಯಮಂತ್ರಿಗಳು ಹಾಗೂ ಸಚಿವರು ವೀಕ್ಷಿಸುತ್ತಿರುವುದು.

## ಮೊರಾರ್ಜಿ ವಸತಿ ಶಾಲೆಯ ವಿದ್ಯಾರ್ಥಿಗಳಿಗೆ ಸನ್ಮಾನ





ದಿನಾಂಕ: 14.05.2024ರಂದು ಇತ್ತೀಚೆಗೆ ಗ್ರಾಮೀಣ ಭಾಗದ ವಿದ್ಯಾರ್ಥಿಗಳೇ ಶಿಕ್ಷಣ ಕ್ಷೇತ್ರದಲ್ಲಿ ಹೆಚ್ಚೆಚ್ಚು ಸಾಧನೆ ಮಾಡುತ್ತಿರುವುದು ಖುಷಿ ಹಾಗೂ ಅಭಿಮಾನ ತಂದಿದೆ ಎಂದು ಸಭಾಪತಿ ಶ್ರೀ ಬಸವರಾಜ್ ಎಸ್. ಹೊರಟ್ಟಿ ಅವರು ತಮ್ಮ ಮನದಾಳದ ಮಾತುಗಳನ್ನು ಹೇಳಿದರು.

ಅವರು ತಮ್ಮ ಬೆಂಗಳೂರಿನ ಕಚೇರಿಯಲ್ಲಿ ಎಸ್.ಎಸ್.ಎಲ್.ಸಿ ಪರೀಕ್ಷೆಯಲ್ಲಿ ಮೊದಲ ರ್‍ಯಾಂಕ್ ಪಡೆದ ಬಾಗಲಕೋಟೆ ಜಿಲ್ಲೆಯ ಮುಧೋಳ ತಾಲೂಕಿನ ಮೆಳ್ಳಿಗೆರೆಯ ಮೊರಾರ್ಜಿ ವಸತಿ ಶಾಲೆ ವಿದ್ಯಾರ್ಥಿನಿ ಅಂಕಿತ ಬಸಪ್ಪ ಕೊಣ್ಣೂರು ಹಾಗೂ ಮೂರನೇ ರ್‍ಯಾಂಕ್ ಪಡೆದ ಮಂಡ್ಯ ಜಿಲ್ಲೆಯ ಕಣಲಿ ಗ್ರಾಮದ ನವನೀತ್ ರನ್ನು ಸನ್ಮಾನಿಸಿ ಮಾತನಾಡಿದ ಅವರು ವಿದ್ಯೆ ಯಾರ ಹಾಗೂ ಯಾವ ಜಾತಿಯ ಸ್ವತ್ತು ಅಲ್ಲ. ಲಕ್ಷ ಲಕ್ಷ ಶುಲ್ಕ ಪಡೆಯುವ ಶಾಲೆಯ ವಿದ್ಯಾರ್ಥಿಗಳು ಪ್ರಥಮ ಸ್ಥಾನ ಪಡೆಯಲಿಲ್ಲ. ಶಿಕ್ಷಣ ಹಣದಲ್ಲಿ ಇಲ್ಲ ಕಲಿಯುವ ಇಚ್ಛಾಶಕ್ತಿಯಲ್ಲಿದೆ. ಅಂತಹ ಇಚ್ಛಾಶಕ್ತಿಯನ್ನು ಪ್ರದರ್ಶಿಸಿ ಇಡೀ ನಾಡೇ

ಮೆಚ್ಚುವಂತ ಸಾಧನೆ ಮಾಡಿದ ಅಂಕಿತಾ ಮತ್ತು ನವನೀತ್ ಅವರ ಸಾಧನೆ ನಾಡಿನ ವಿದ್ಯಾರ್ಥಿಗಳಿಗೆ ಅದರಲ್ಲೂ ಗ್ರಾಮೀಣ ಭಾಗದ ವಿದ್ಯಾರ್ಥಿಗಳಿಗೆ ಪ್ರೇರಣೆಯಾಗಿದೆ. ದಿನದಿಂದ ದಿನಕ್ಕೆ ಸರ್ಕಾರಿ ಶಾಲೆಗಳಲ್ಲಿ ಶೈಕ್ಷಣಿಕ ಗುಣಮಟ್ಟ ಹೆಚ್ಚುತ್ತಿದೆ. ಅದಕ್ಕೆ ಕಾರಣ 2006–07ರಲ್ಲಿ ನಾನು ಶಿಕ್ಷಣ ಸಚಿವನಾಗಿದ್ದಾಗ ಶಿಕ್ಷಕರ ಆಯ್ಕೆಯಲ್ಲಿ ಹಾಗೂ ವರ್ಗಾವಣೆಯಲ್ಲಿ ಸಾಕಷ್ಟು ಪಾರದರ್ಶಕತೆಯನ್ನು ತಂದ ಪರಿಣಾಮದಿಂದಾಗಿ ಇದು ಸಾಧ್ಯವಾಗಿದೆ ಎಂದು ಹೇಳಲು ನನಗಂತೂ ಸಾಕಷ್ಟು ಅಭಿಮಾನ ಎನಿಸುತ್ತದೆ. ಸರ್ಕಾರಿ ಶಾಲೆಗಳಿಗೆ ಸಾಕಷ್ಟು ಪ್ರತಿಭಾವಂತ ಶಿಕ್ಷಕರು ನೇಮಕಗೊಳ್ಳುತ್ತಿರುವುದರಿಂದ ಖಾಸಗಿ ಶಾಲೆಗಳಿಗೆ ಪೈಪೋಟಿ ನೀಡುವಂತಹ ವಾತಾವರಣ ದಿನದಿಂದ ದಿನಕ್ಕೆ ಹೆಚ್ಚಾಗುತ್ತಿದೆ.ಇದರ ಪರಿಣಾಮದಿಂದಾಗಿ ಇಂದು ಸಾಕಷ್ಟು ಸರ್ಕಾರಿ ಶಾಲೆ ಮಕ್ಕಳು ಉತ್ಕೃಷ್ಟ ಮಟ್ಟದ ಶಿಕ್ಷಣ ಪಡೆದು ಎಸ್ಎಸ್ಎಲ್ಸಿ, ಪಿ.ಯು.ಸಿಯಲ್ಲಿ ಸಾಧನೆ ಮಾಡುತ್ತಿದ್ದಾರೆ. ವಿಶೇಷವಾಗಿ ಗ್ರಾಮೀಣ ಭಾಗದಿಂದ ಬಂದ ಅಂಕಿತಾ ಕೊಣ್ಣೂರು 625ಕ್ಕೆ 625 ಅಂಕ ಪಡೆದು ವಿಶಿಷ್ಟ ಸಾಧನೆ ಮಾಡಿದ್ದು ಇದು ಶೈಕ್ಷಣಿಕ ಕ್ಷೇತ್ರದಲ್ಲಿ ಒಂದು ಮೈಲುಗಲ್ಲಾಗಿ ಉಳಿಯುತ್ತದೆ. ಇಂತಹ ಮಕ್ಕಳ ಸಾಧನೆಯನ್ನು ಕಂಡ ನಾಡಿನ ವಿದ್ಯಾರ್ಥಿಗಳು ನಾವು ಯಾರಿಗೇನು ಕಮ್ಮಿ ಇಲ್ಲ ಎನ್ನುವಂತೆ ಸಾಧನೆ ಮಾಡಲು ಮುಂದಾಗಲಿ ಎಂದು ಆಶಿಸಿದರು.

## ಕಿರುಚಿತ್ರ ನಿರ್ಮಾಣಕ್ಕೆ ಸಂಬಂಧಿಸಿದಂತೆ ನಡೆದ ಸಭೆ





ದಿನಾಂಕ:21.05.2024 ರಂದು ವಿಕಾಸಸೌಧದಲ್ಲಿ ಮಾನ್ಯ ಸಭಾಪತಿ ಶ್ರೀ ಬಸವರಾಜ್ ಎಸ್. ಹೊರಟ್ಟಿ ರವರ ಅಧ್ಯಕ್ಷತೆಯಲ್ಲಿ ನಡೆದ ಕಿರುಚಿತ್ರ ನಿರ್ಮಾಣಕ್ಕೆ ಸಂಬಂಧಿಸಿದಂತೆ ನಡೆದ ಸಮಿತಿ ಸಭೆಯಲ್ಲಿ ಮಾನ್ಯ ವಿಧಾನಪರಿಷತ್ತು ಶಾಸಕರಾದ ಶ್ರೀ ಯು.ಬಿ.ವೆಂಕಟೇಶ ಹಾಗೂ ಶ್ರೀ ಕೆ.ಟಿ. ಶ್ರೀಕಂಠೇಗೌಡ, ವಿಧಾನಪರಿಷತ್ತಿನ ಕಾರ್ಯದರ್ಶಿ ಶ್ರೀಮತಿ ಕೆ.ಆರ್. ಮಹಾಲಕ್ಷ್ಮೀ, ಪತ್ರಕರ್ತರು ಹಾಗೂ ಸಿಬ್ಬಂದಿವರ್ಗದವರು ಉಪಸ್ಥಿತರಿದ್ದರು.

# ವಿಧಾನ ಸೌಧ ಮತ್ತು ವಿಕಾಸಸೌಧದ ಮಧ್ಯದಲ್ಲಿರುವ ರಾಷ್ಟ್ರಪಿತ ಮಹಾತ್ಮ ಗಾಂಧೀಜಿ ಪ್ರತಿಮೆಯ ಸುರಕ್ಷತೆ






22.05.2024ರಂದು ರಾಜ್ಯದ ಶಕ್ತಿ ಕೇಂದ್ರವಾದ ವಿಧಾನಸೌಧ ಮತ್ತು ವಿಕಾಸಸೌಧದ ಮಧ್ಯಭಾಗದ ತೆರೆದ ಪ್ರದೇಶದಲ್ಲಿರುವ ರಾಷ್ಟ್ರಪಿತ ಮಹಾತ್ಮ ಗಾಂಧೀಜಿಯವರ ಧ್ಯಾನಾಸಕ್ತ ಕಂಚಿನ ಪ್ರತಿಮೆಗೆ ಪಕ್ಷಿಗಳ ಮಲ–ಮೂತ್ರಗಳಿಂದ ಉಂಟಾಗುವ ತ್ಯಾಜ್ಯ ಹಾಗೂ ಮಾಲಿನ್ಯದಿಂದ ಪ್ರತಿಮೆಗೆ ಉಂಟಾಗುತ್ತಿದ್ದನ್ನು ಬಹಳ ನೋವಿನಿಂದ ಕರ್ನಾಟಕ ವಿಧಾನ ಪರಿಷತ್ ಸಭಾಪತಿ ಶ್ರೀ ಬಸವರಾಜ್ ಎಸ್. ಹೊರಟ್ಟಿ ಸರ್ಕಾರದ ಗಮನ ಸೆಳೆದು ಗಾಂಧಿಜೀ ಪುತ್ಥಳಿಯನ್ನು ತ್ಯಾಜ್ಯ ಮುಕ್ತವನ್ನಾಗಿಸುವಲ್ಲಿ ಯಶಸ್ವಿಯಾಗಿದ್ದಾರೆ.

ದೇಶದ ಪ್ರತಿಷ್ಠಿತ ಕಟ್ಟಡವೆಂಬ ಹೆಗ್ಗಳಿಕೆಗೆ ಪಾತ್ರವಾಗಿರುವ ವಿಧಾನಸೌಧದ ವೀಕ್ಷಣೆಗೆ ನಿತ್ಯವೂ ದೇಶ ವಿದೇಶಗಳಿಂದ, ರಾಜ್ಯ, ಅಂತರ್ ರಾಜ್ಯಗಳಿಂದ ಗಣ್ಯರು, ಪ್ರವಾಸಿಗರು ಹಾಗೂ ಶಾಲಾ ಕಾಲೇಜುಗಳ ವಿದ್ಯಾರ್ಥಿಗಳು ಆಗಮಿಸುತ್ತಾರೆ. ಆ ಸಂದರ್ಭದಲ್ಲಿ ಎಲ್ಲರೂ ಕಡ್ಡಾಯವಾಗಿ ಮಹಾತ್ಮ ಗಾಂಧೀಜಿಯವರ ಪ್ರತಿಮೆ ವೀಕ್ಷಿಸಿ ಅಲ್ಲಿ ಛಾಯಾ ಚಿತ್ರಗಳನ್ನು ತೆಗೆದುಕೊಳ್ಳುವ ದೃಶ್ಯವು ನಿತ್ಯ ಸದೃಶ್ಯವಾದುದ್ದು. ಆದರೆ ಸದರಿ ಪ್ರತಿಮೆಯು ತೆರೆದ ಪ್ರದೇಶದಲ್ಲಿರುವುದರಿಂದ ವಾತಾವರಣ ಹಾಗೂ ಪಕ್ಷಿಗಳ ಮಲ–ಮೂತ್ರಗಳಿಂದ ಉಂಟಾಗುವ ತ್ಯಾಜ್ಯ ಹಾಗೂ ಮಾಲಿನ್ಯದಿಂದ ಪ್ರತಿಮೆಯ ಸೌಂದರ್ಯಕ್ಕೆ ಧಕ್ಕೆ ಉಂಟಾಗುತ್ತಿತ್ತು. ಇದನ್ನು ಗಮನಿಸಿ ಮಹಾತ್ಮ ಗಾಂಧೀಜೀಯವರ ಪುತ್ಥಳಿಗೆ ತೋರಲಾಗುತ್ತಿರುವ ಅಗೌರವದ ಬಗ್ಗೆ ವ್ಯಥೆಪಟ್ಟು ಕೂಡಲೇ ಸರ್ಕಾರದ ಮುಖ್ಯ ಕಾರ್ಯದರ್ಶಿಗಳಿಗೆ ಹಾಗೂ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯ ಕಾರ್ಯದರ್ಶಿಗಳಿಗೆ ಎರಡು ಬಾರಿ ಪತ್ರ ಬರೆದು ಪ್ರತಿಮೆಯನ್ನು ಶುಭ್ರವಾಗಿರಿಸಿ ಸೂಕ್ತ ಗೌರವ ಸಲ್ಲಿಸುವಂತೆ ಸೂಚನೆ ನೀಡಿದ್ದರು. ಈ ಬಗ್ಗೆ ರಾಜ್ಯ ಕಾನೂನು, ಸಂಸದೀಯ ವ್ಯವಹಾರ ಮತ್ತು ಪ್ರವಾಸೋಧ್ಯಮ ಸಚಿವರಾದ ಮಾನ್ಯ ಶ್ರೀ ಹೆಚ್.ಕೆ. ಪಾಟೀಲರು ಸಹ ಸೂಕ್ತ ಕ್ರಮಕ್ಕೆ ಅಧಿಕಾರಿಗಳಿಗೆ ಸೂಚನೆ ನೀಡಿದ್ದರು.

ರಾಷ್ಟ್ರಪಿತ ಮಹಾತ್ಮ ಗಾಂಧೀಜಿಯವರ ಪ್ರತಿಮೆಯ ನೈಜ ಸೌಂದರ್ಯ, ಬಾಹ್ಯ ಆಕರ್ಷಣೆ ಕುಂದದಂತೆ ನಿರಂತರವಾಗಿ ಸೂಕ್ತ ಸಂರಕ್ಷಣಾ ಕ್ರಮ ಕೈಗೊಳ್ಳುವ ಕುರಿತು ಸೂಕ್ತ ಸಾಧನ ಬಳಸಿ ರಾಷ್ಟ್ರಪಿತ ಗಾಂಧೀಜಿಯವರ ಪ್ರತಿಮೆಗೆ ಸೂಕ್ತ ಗೌರವ ಸಲ್ಲಿಸಿ ಶುಭ್ರವಾಗಿಡುವಂತೆ ವಿಧಾನ ಪರಿಷತ್ ಸಭಾಪತಿ ಮಾನ್ಯ ಶ್ರೀ ಬಸವರಾಜ್ ಎಸ್. ಹೊರಟ್ಟಿ ಅಧಿಕಾರಿಗಳಿಗೆ ಆದೇಶಿಸಿದರು. ಈ ಸಂದರ್ಭದಲ್ಲಿ ಸಭಾಪತಿಯವರ ವಿಶೇಷ ಕರ್ತವ್ಯಾಧಿಕಾರಿ ಡಾ.ಮಹೇಶವಾಳ್ವೇಕರ್, ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ, ಲೋಕೋಪಯೋಗಿ ಇಲಾಖೆಯ ಅಧಿಕಾರಿಗಳು ಈ ಸಂದರ್ಭದಲ್ಲಿ ಹಾಜರಿದ್ದರು.

## ಸನ್ಮಾನ್ಯ ಸಭಾಪತಿಗಳಿಂದ ಕರ್ನಾಟಕ ವಿಧಾನಮಂಡಲದ ಗ್ರಂಥಾಲಯ ಪರಿಶೀಲನೆ





ದಿನಾಂಕ:22.05.2024ರಂದು ವಿಧಾನಪರಿಷತ್ತಿನ ಮಾನ್ಯ ಸಭಾಪತಿಯವರಾದ ಶ್ರೀ ಬಸವರಾಜ್ ಎಸ್. ಹೊರಟ್ಟಿರವರು ವಿಧಾನಮಂಡಲದ ಗ್ರಂಥಾಲಯ ಪರಿಶೀಲಿಸಿ, ಗ್ರಂಥಾಲಯದ ಸಿಬ್ಬಂದಿಗಳಿಗೆ ಕೆಲವು ಸಲಹೆಗಳನ್ನು ನೀಡಿದರು. ಈ ಸಂದರ್ಭದಲ್ಲಿ ಸಭಾಪತಿಯವರ ವಿಶೇಷ ಕರ್ತವ್ಯಾಧಿಕಾರಿ ಡಾ.ಮಹೇಶ ವಾಳ್ವೇಕರ್ ಹಾಗೂ ಸಿಬ್ಬಂದಿಗಳು ಉಪಸ್ಥಿತರಿದ್ದರು.

## ಶಾಸಕರ ಭವನದ ಗ್ರಂಥಾಲಯ ವೀಕ್ಷಣೆ





ಮಾನ್ಯ ಸಭಾಪತಿಯವರಾದ ಶ್ರೀ ಬಸವರಾಜ್ ಎಸ್. ಹೊರಟ್ಟಿರವರು ಶಾಸಕರ ಭವನದ ನವೀಕೃತ ಗ್ರಂಥಾಲಯವನ್ನು ವೀಕ್ಷಣೆ ಮಾಡಿದರು. ಈ ಸಂದರ್ಭದಲ್ಲಿ ಸಭಾಪತಿಯವರ ವಿಶೇಷ ಕರ್ತವ್ಯಾಧಿಕಾರಿ ಡಾ.ಮಹೇಶ ವಾಳ್ವೇಕರ್ ಹಾಗೂ ಗ್ರಂಥಾಲಯದ ಸಿಬ್ಬಂದಿಗಳು ಉಪಸ್ಥಿತರಿದ್ದರು.

## ಸನ್ಮಾನ್ಯ ಸಭಾಪತಿಗಳು ಮೈಸೂರಿಗೆ ಭೇಟಿ



ದಿನಾಂಕ: 29.05.2024ರಂದು ಮಾನ್ಯ ಸಭಾಪತಿ ಶ್ರೀ ಬಸವರಾಜ್ ಎಸ್. ಹೊರಟ್ಟಿ ಹಾಗೂ ಅವರ ಸ್ನೇಹಿತರು ಮೈಸೂರಿನ ಶಕ್ತಿದೇವತೆಯಾದ ಶ್ರೀ ಚಾಮುಂಡೇಶ್ವರಿ ದೇವಿಯ ದರ್ಶನ ಪಡೆದರು.

## ಸನ್ಮಾನ್ಯ ಸಭಾಧ್ಯಕ್ಷರಿಗೆ ಸನ್ಮಾನ



ದಿನಾಂಕ: 29.05.2024ರಂದು ಸಚಿವಾಲಯದ ಅಧಿಕಾರಿಗಳಿಗೆ ಮುಂಬಡ್ತಿಯ ಅವಕಾಶವನ್ನು ಕಲ್ಪಿಸಿರುವ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳಿಂದ ಸನ್ಮಾನ್ಯ ಸಭಾಧ್ಯಕ್ಷರನ್ನು ಸನ್ಮಾನಿಸುತ್ತಿರುವುದು.

## ಸಚಿವಾಲಯದ ಅಧಿಕಾರಿ/ಸಿಬ್ಬಂದಿಯವರುಗಳು ಸನ್ಮಾನ್ಯ ಸಭಾಧ್ಯಕ್ಷರ ಭೇಟಿ





ದಿನಾಂಕ: 29.05.2024 ರಂದು ಸಚಿವಾಲಯದ ಹಾಗೂ ಕರ್ನಾಟಕ ಸರ್ಕಾರದ ಸಚಿವಾಲಯದ ಅಧಿಕಾರಿ ಸಿಬ್ಬಂದಿಗಳಿಗೆ ಏರ್ಪಡಿಸಿರುವ ಕ್ರಿಕೆಟ್ ಪಂದ್ಯಾವಳಿಯಲ್ಲಿ ವಿಜೇತ ತಂಡ ಟ್ರೋಫಿಯೊಂದಿಗೆ ಸನ್ಮಾನ್ಯ ಸಭಾಧ್ಯಕ್ಷರನ್ನು ಭೇಟಿ ಮಾಡಿದರು.





ದಿನಾಂಕ: 30.05.2024 ರಂದು ಸನ್ಮಾನ್ಯ ಸಭಾಧ್ಯಕ್ಷರು ವಿಧಾನಸಭೆ ಸಚಿವಾಲಯದ ಆವರಣದ ಶುಚಿತ್ವ, ವಿಧಾನಸಭೆ ಸಭಾಂಗಣದ ಆವರಣದಲ್ಲಿ ಕೈಗೊಳ್ಳಬೇಕಾದ ನವೀಕರಣ ಕಾರ್ಯಗಳು, ಶಾಸಕರ ಭವನದಲ್ಲಿ ಕೈಗೊಳ್ಳಬೇಕಾದ ಕಾಮಗಾರಿಗಳು ಇತ್ಯಾದಿ ಕುರಿತು ಲೋಕೋಪಯೋಗಿ ಇಲಾಖೆ ಹಾಗೂ ಆರ್ಥಿಕ ಇಲಾಖೆಯ ಅಧಿಕಾರಿಗಳೊಂದಿಗೆ ಚರ್ಚಿಸುತ್ತಿರುವ ಸಂದರ್ಭ.

## ಶಾಸಕರ ಭವನದ ಹೋಟೆಲ್ ಉದ್ಘಾಟನೆ










ದಿನಾಂಕ: 30.05.2024ರಂದು ಶಾಸಕರ ಭವನದ ಆವರಣದಲ್ಲಿ ಮಾಂಸಾಹಾರ ಹೋಟೆಲ್‌ನ್ನು ಉದ್ಘಾಟಿಸಿದ ಸಂದರ್ಭ.

## ವಾರ್ತಾ ಹಾಗೂ ಪತ್ರಾಗಾರ ಇಲಾಖಾಧಿಕಾರಿಗಳೊಂದಿಗೆ ಚರ್ಚೆ









ದಿನಾಂಕ: 30.05.2024 ರಂದು ಸನ್ಮಾನ್ಯ ಸಭಾಧ್ಯಕ್ಷರು ವಿಧಾನ ಸಭೆಯ ಆವರಣದಲ್ಲಿ ವಿಧಾನ ಸಭೆಯ ಚರಿತ್ರೆ ಕುರಿತು ಫೋಟೋದೊಂದಿಗೆ ದಾಖಲಾತಿಗಳನ್ನು ಅಳವಡಿಸುವ ಬಗ್ಗೆ ಸರ್ಕಾರದ ವಾರ್ತಾ ಇಲಾಖೆ ಹಾಗೂ ಪತ್ರಾಗಾರ ಇಲಾಖೆಯ ಅಧಿಕಾರಿಗಳೊಂದಿಗೆ ಚರ್ಚಿಸುತ್ತಿರುವ ಸಂದರ್ಭ.

## ಬಾಂಧವ್ಯ ಶಿಕ್ಷಕ ಪರಿವಾರ ಮಿಲನ ಹಾಗೂ ಅಭಿನಂದನಾ ಸಮಾರಂಭ






ದಿನಾಂಕ: 02.06.2024 ರಂದು ಹುಬ್ಬಳ್ಳಿಯ ವಿದ್ಯಾನಗರ, ಬಿ.ವಿ.ಬಿ ಬಯೋ–ಟೆಕ್ ಆಡಿಟೋರಿಯಂನಲ್ಲಿ ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕರ ಸಂಘದ ವತಿಯಿಂದ ನಡೆದ ಬಾಂಧವ್ಯ ಶಿಕ್ಷಕ ಪರಿವಾರ ಮಿಲನ ಹಾಗೂ ಅಭಿನಂದನಾ ಸಮಾರಂಭದಲ್ಲಿ 60 ವಸಂತಗಳನ್ನು ಪೂರೈಸಿ

ವೃತ್ತಿಯಿಂದ ನಿವೃತ್ತಿ ಹೊಂದಿರುವ ಕೆಆರ್‌ಎಂಎಸ್‌ಎಸ್ ಸಂಸ್ಥಾಪಕ ಅಧ್ಯಕ್ಷರಾದ ಪ್ರೊ॥ ರಘು ಅಕಮಂಚಿ ಅವರಿಗೆ ಮಾನ್ಯ ಸಭಾಪತಿ ಶ್ರೀ ಬಸವರಾಜ್ ಎಸ್. ಹೊರಟ್ಟಿ ಅವರು ಅಭಿನಂದನೆ ಸಲ್ಲಿಸಿದರು.

## ಸನ್ಮಾನ್ಯ ಸಭಾಪತಿಯವರಿಂದ ಕರ್ನಾಟಕ ರಾಜ್ಯದ ದಿವಂಗತ ಮಾಜಿ ಮುಖ್ಯಮಂತ್ರಿಗಳ ಭಾವ ಚಿತ್ರಗಳ ವೀಕ್ಷಣೆ






ದಿನಾಂಕ:05.06.2024 ರಂದು ಸ್ವಾತಂತ್ರ್ಯ ನಂತರದಿಂದ ಇದುವರೆಗೆ ಕನ್ನಡ ನಾಡು ನುಡಿಭಾಷೆ ಸೇರಿದಂತೆ ರಾಜ್ಯದ ಸರ್ವಾಂಗೀಣ ಅಭಿವೃದ್ಧಿಗಾಗಿ ಬಹುವಾಗಿ ಶ್ರಮಿಸಿ ತಮ್ಮದೇ ಆದಂತಹ ವಿಶಿಷ್ಟ ಕೊಡುಗೆಗಳನ್ನು ನೀಡಿದ 23 ಜನರ ಮಹನೀಯರು ರಾಜ್ಯದ ಮುಖ್ಯಮಂತ್ರಿಗಳಾಗಿ ಸೇವೆ ಸಲ್ಲಿಸಿದ್ದು, ಅವರ ಪರಿಚಯವನ್ನು ಇಂದಿನ ಪೀಳಿಗೆಗೆ ಮಾಡಿಸುವ ಉದ್ದೇಶದಿಂದ ಹಾಗೂ ದಿವಂಗತರಾಗಿರುವ ರಾಜ್ಯದ ಎಲ್ಲಾ ಮಾಜಿ ಮುಖ್ಯಮಂತ್ರಿಗಳಿಗೂ ಸಮಾನ ಗೌರವ ನೀಡುವ ಹಿನ್ನಲೆಯಲ್ಲಿ ವಿಧಾನಸೌಧದ ಬ್ಯಾಂಕ್ವೆಟ್ ಹಾಲ್‌ನಲ್ಲಿ ರಾಜ್ಯದ ಎಲ್ಲಾ ಮುಖ್ಯಮಂತ್ರಿಗಳ ಭಾವಚಿತ್ರವನ್ನು ಅವರುಗಳ ಅವಧಿಗಳನ್ನು ನಮೂದಿಸಿ ಅವರುಗಳಿಗೆ ಸರ್ಕಾರದ ವತಿಯಿಂದ ಸಮಾನ ಗೌರವ ಸಲ್ಲಿಸುವ ದೃಷ್ಟಿಯಿಂದ ವಿಧಾನಸೌಧದ ಬ್ಯಾಂಕ್ವೆಟ್ ಹಾಲ್, 3ನೇ ಮಹಡಿಯಲ್ಲಿರುವ ಸಮ್ಮೇಳನ ಸಭಾಂಗಣ ಮೊದಲಾದೆಡೆ ವೀಕ್ಷಣೆ ನಡೆಸಿ ಭಾವಚಿತ್ರ ಅಳವಡಿಸುವ ಸ್ಥಳವನ್ನು ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆಯ ಕಾರ್ಯದರ್ಶಿ ಶ್ರೀ ಡಿ. ರಂದೀಪ್ ಹಾಗೂ ಹಿರಿಯ ಅಧಿಕಾರಿಗಳ ಜೊತೆ ಪರಿಶೀಲಿಸಿದರು.

## ಗುದ್ಲೆಪ್ಪ ಹಳ್ಳಿಕೇರಿ ಅವರ 119ನೇ ಜಯಂತ್ಯೋತ್ಸವ








ದಿನಾಂಕ:06.06.2024 ರಂದು ರಾಷ್ಟ್ರೀಯ ಶಿಕ್ಷಣ ಸಮಿತಿ, ಹೊಸರಿತ್ತಿ ಶ್ರೀ ಗುದ್ಲೆಪ್ಪ ಹಳ್ಳಿಕೇರಿ ಸ್ಮಾರಕ ಪ್ರತಿಷ್ಠಾನ ಹೊಸರಿತ್ತಿ ಸಂಯುಕ್ತ ಆಶ್ರಯದಲ್ಲಿ ಹಿರಿಯ ಗಾಂಧೀವಾದಿ, ಕರ್ನಾಟಕದ ಉಕ್ಕಿನ ಮನುಷ್ಯ ಶ್ರೀ ಗುದ್ಲೆಪ್ಪ ಹಳ್ಳಿಕೇರಿ ಅವರ 119ನೇ ಜಯಂತ್ಯೋತ್ಸವ ಹಾಗೂ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಶ್ರೀ ಬಸವರಾಜ್ ಎಸ್. ಹೊರಟ್ಟಿ ಅವರು ಉದ್ಘಾಟಿಸಿದರು.

## ದಕ್ಷಿಣ ಕನ್ನಡ ಜಿಲ್ಲಾ ಅಭಿವೃದ್ಧಿಯ ಸಭೆ





ದಿನಾಂಕ:07.06.2024 ರಂದು ಸನ್ಮಾನ್ಯ ಸಭಾಧ್ಯಕ್ಷರು ದಕ್ಷಿಣ ಕನ್ನಡ ಜಿಲ್ಲಾ ಉಸ್ತುವಾರಿ ಹಾಗೂ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರಾದ ಶ್ರೀ ದಿನೇಶ್ ಗುಂಡೂರಾವ್, ಬಂದರು, ಒಳನಾಡು ಜಲಸಾರಿಗೆ ಮತ್ತು ಮೀನುಗಾರಿಕೆ ಸಚಿವರು ಶ್ರೀ ಮಂಕಾಳ ಎಸ್.ವೈದ್ಯ ಅವರುಗಳ ಉಪಸ್ಥಿತಿಯಲ್ಲಿ, ಸನ್ಮಾನ್ಯ ಮುಖ್ಯಮಂತ್ರಿಯವರ ಅಪರ ಮುಖ್ಯಕಾರ್ಯದರ್ಶಿ ಹಾಗೂ ಸಂಬಂಧಪಟ್ಟ ಅಧಿಕಾರಿಗಳು ಅಲ್ಲದೆ ಜಿಲ್ಲೆಯ ವಿವಿಧ ಪ್ರತಿನಿಧಿಗಳೊಂದಿಗೆ ಜಿಲ್ಲಾ ಅಭಿವೃದ್ಧಿ ಬಗ್ಗೆ ಸಭೆ ನಡೆಸಿ ಚರ್ಚಿಸುತ್ತಿರುವ ಸಂದರ್ಭ.

## ಸಮಿತಿಗಳ ಅಧ್ಯಕ್ಷರುಗಳ ಸಭೆಯಲ್ಲಿ ಸನ್ಮಾನ್ಯ ಸಭಾಧ್ಯಕ್ಷರು





ದಿನಾಂಕ: 07.06.2024 ರಂದು ನಡೆದ ವಿಧಾನಮಂಡಲ ಸಮಿತಿಗಳ ಅಧ್ಯಕ್ಷರುಗಳ ಸಭೆಯಲ್ಲಿ ಸನ್ಮಾನ್ಯ ಸಭಾಧ್ಯಕ್ಷರು ಭಾಗವಹಿಸಿ ಚರ್ಚಿಸುತ್ತಿರುವ ಸಂದರ್ಭ.

## ಸನ್ಮಾನ್ಯ ಸಭಾಪತಿಗಳು–ಮಂಗಳೂರಿನ ಸಹ್ಯಾದ್ರಿ ಇಂಜಿಯರಿಂಗ್ ಕಾಲೇಜಿಗೆ ಭೇಟಿ








ದಿನಾಂಕ: 09.06.2024ರಂದು ಮಾನ್ಯ ಸಭಾಪತಿ ಶ್ರೀ ಬಸವರಾಜ್ ಎಸ್. ಹೊರಟ್ಟಿರವರು ಮಂಗಳೂರಿನ ಸಹ್ಯಾದ್ರಿ ಇಂಜಿನೀಯರಿಂಗ್ ಕಾಲೇಜಿಗೆ ಭೇಟಿ ನೀಡಿದರು. ನಂತರ ಕರ್ನಾಟಕ ವಿಧಾನಪರಿಷತ್ತಿನ ಶಾಸಕರಾದ ಶ್ರೀ ಮಂಜುನಾಥ ಭಂಡಾರಿಯವರ ಸಮ್ಮುಖದಲ್ಲಿ ಶಿಕ್ಷಕರ ಸಂಘದ ಪದಾಧಿಕಾರಿಗಳೊಂದಿಗೆ ನಡೆದ ಸಮಾಲೋಚನಾ ಸಭೆಯಲ್ಲಿ ಶಿಕ್ಷಕರ ಸಮಸ್ಯೆಗಳನ್ನು ಆಲಿಸಿದರು.

## ಸನ್ಮಾನ್ಯ ಸಭಾಧ್ಯಕ್ಷರಿಂದ ತರಬೇತಿ ಕಾರ್ಯಕ್ರಮದ ಉದ್ಘಾಟನೆ





ದಿನಾಂಕ: 11.06.2024 ರಂದು ಸನ್ಮಾನ್ಯ ಸಭಾಧ್ಯಕ್ಷರು ಅಧಿಕಾರಿ ಸಿಬ್ಬಂದಿಗಳಿಗೆ ಆಯೋಜಿಸಲಾಗಿದ್ದ "ಒತ್ತಡ ನಿರ್ವಹಣೆ ಮತ್ತು ಸ್ಥಿತಿಸ್ಥಾಪಕತ್ವ ಅಭಿವೃದ್ಧಿ" (Stress Management and resilience development) ಹಾಗೂ "ಪರಿಣಾಮಕಾರಿ ಸಂವಹನ ಮತ್ತು ನಾಯಕತ್ವ ಅಭಿವೃದ್ಧಿ" (Effective Communication and Leadership development) ಎಂಬ ವಿಷಯಗಳ ಬಗ್ಗೆ ನಡೆದ ತರಬೇತಿ ಕಾರ್ಯಕ್ರಮವನ್ನು ಉದ್ಘಾಟಿಸಿ ಭಾಗವಹಿಸಿದ ಸಂದರ್ಭ.

## ಲೋಕೋಪಯೋಗಿ ಸಚಿವರು ಹಾಗೂ ಇಲಾಖಾಧಿಕಾರಿಗಳೊಂದಿಗೆ ಚರ್ಚೆ





ದಿನಾಂಕ:11.06.2024ರಂದು ಸನ್ಮಾನ್ಯ ಸಭಾಧ್ಯಕ್ಷರು ವಿಧಾನಸೌಧದಲ್ಲಿ ಹಾಗೂ ಕ್ಷೇತ್ರದಲ್ಲಿ ಕೈಗೊಳ್ಳಬೇಕಾದ ಕಾಮಗಾರಿಗಳ ಕುರಿತು ಲೋಕೋಪಯೋಗಿ ಸಚಿವರೊಂದಿಗೆ ಮತ್ತು ಅಧಿಕಾರಿಗಳೊಂದಿಗೆ ಚರ್ಚಿಸುತ್ತಿರುವ ಸಂದರ್ಭದಲ್ಲಿ ವಿಧಾನ ಸಭೆಯ ಸರ್ಕಾರಿ ಮುಖ್ಯಸಚೇತಕರು ಉಪಸ್ಥಿತರಿದ್ದರು.

## ಸುರಪುರ ಕ್ಷೇತ್ರದ ಶಾಸಕರಿಂದ ಪ್ರಮಾಣ ವಚನ





ದಿನಾಂಕ: 11.06.2024 ರಂದು ಸನ್ಮಾನ್ಯ ಸಭಾಧ್ಯಕ್ಷರ ಸಮ್ಮುಖದಲ್ಲಿ ನೂತನವಾಗಿ ಆಯ್ಕೆಯಾದ ಸುರಪುರ ವಿಧಾನ ಸಭಾ ಕ್ಷೇತ್ರದ ಶಾಸಕರಾದ ಶ್ರೀ ರಾಜ ವೇಣುಗೋಪಾಲ್ ನಾಯಕ್ ರವರು ಪ್ರಮಾಣ ವಚನ ಸ್ವೀಕರಿಸಿರುವ ಸಂದರ್ಭ.

## ಸನ್ಮಾನ್ಯ ಸಭಾಧ್ಯಕ್ಷರು, ಮುಜುರಾಯಿ ಸಚಿವರು, ಇಲಾಖಾಧಿಕಾರಿಗಳು ಹಾಗೂ ದೇವಸ್ಥಾನದ ಪ್ರತಿನಿಧಿಗಳು





ದಿನಾಂಕ: 12.06.2024 ರಂದು ಸನ್ಮಾನ್ಯ ಸಭಾಧ್ಯಕ್ಷರು, ಮಾನ್ಯ ಸಾರಿಗೆ ಮತ್ತು ಮುಜುರಾಯಿ ಸಚಿವರು, ಮುಜುರಾಯಿ ಇಲಾಖೆಯ ಅಧಿಕಾರಿಗಳು, ದೇವಸ್ಥಾನದ ನೇಮಕಟ್ಟುವವರು, ಶ್ರೀ ಕುತ್ತಾರು

ಕೊರಗಜ್ಜ ದೇವಸ್ಥಾನದವರು, ಶ್ರೀ ಭಗವತಿ ಚೀರುಂಭ–ದೇವಸ್ಥಾನ–ಮಲಯಾಳಿ ಬಿಲ್ಲವ ಸಮುದಾಯದ ಪ್ರತಿನಿಧಿಗಳೊಂದಿಗೆ ನಡೆಸಿದ ಸಭೆ.

## ವಿಧಾನ ಪರಿಷತ್ ಸದಸ್ಯರ ಸ್ಥಾನಕ್ಕೆ ರಾಜೀನಾಮೆ



ದಿನಾಂಕ: 15.06.2024 ರಂದು ನೂತನ ಸಂಸದರಾಗಿ ಆಯ್ಕೆಯಾದ ಕೋಟಾ ಶ್ರೀನಿವಾಸ್ ಪೂಜಾರಿ ಅವರು ತಮ್ಮ ವಿಧಾನ ಪರಿಷತ್ ಸದಸ್ಯರ ಸ್ಥಾನಕ್ಕೆ ಇಂದು ಸಭಾಪತಿ ಶ್ರೀ ಬಸವರಾಜ್ ಎಸ್. ಹೊರಟ್ಟಿ ಅವರನ್ನು ಭೇಟಿಯಾಗಿ ರಾಜೀನಾಮೆ ಸಲ್ಲಿಸಿದರು.

ವಿಧಾನಪರಿಷತ್ ಸದಸ್ಯರಾಗಿ ಸದನದ ಒಳಗೆ ಹೊರಗೆ ಜನಪರ ಕೆಲಸ ಮಾಡಲು ಸಾಕಷ್ಟು ಸಹಕಾರ ಮಾರ್ಗದರ್ಶನ ನೀಡಿದ ಹೊರಟ್ಟಿ ಅವರ ಸೇವೆಯನ್ನು ಈ ಸಂದರ್ಭದಲ್ಲಿ ಸ್ಮರಿಸಿಕೊಂಡರು. ಎಂದಿನಂತೆ ತಮ್ಮ ಸಹಕಾರ ಮಾರ್ಗದರ್ಶನ ನನಗೆ ಇರಲಿ ಎಂದು ಕೋರಿದರು. ಸಭಾಪತಿ ಶ್ರೀ ಬಸವರಾಜ್ ಎಸ್. ಹೊರಟ್ಟಿ ಅವರು ರಾಜೀನಾಮೆಯನ್ನು ಸ್ವೀಕರಿಸಿ ಮಾತನಾಡಿ ಸಂಸದರಾಗಿ ಆಯ್ಕೆಯಾಗಿದ್ದಕ್ಕೆ ಶುಭಹಾರೈಸಿ ತಮ್ಮ ಮೂಲಕ ರಾಜ್ಯಕ್ಕೆ ಸಾಕಷ್ಟು ಅಭಿವೃದ್ಧಿ ಕೆಲಸಗಳು ಆಗಲಿ ಎಂದು ಹೇಳಿ ಅಭಿನಂದನೆಗಳನ್ನು ಸಲ್ಲಿಸಿದರು.

ಈ ಸಂದರ್ಭದಲ್ಲಿ ವಿಧಾನಪರಿಷತ್ತಿನ ವಿರೋಧ ಪಕ್ಷದ ಸಚೇತಕರಾದ ಎನ್. ರವಿಕುಮಾರ ಶಿರಹಟ್ಟಿ ಶಾಸಕರಾದ ಡಾ.ಚಂದ್ರು. ಲಮಾಣಿ ಸೇರಿದಂತೆ ಮುಂತಾದವರು ಉಪಸ್ಥಿತರಿದ್ದರು.

## ರಾಜ್ಯದಿಂದ ಚುನಾಯಿತರಾದ ಸಂಸದರಿಗೆ– ಸನ್ಮಾನ್ಯ ಸಭಾಪತಿಗಳಿಂದ ಶುಭ ಹಾರೈಕೆ





ಮಾಜಿ ಮುಖ್ಯಮಂತ್ರಿಗಳು ಹಾಗೂ ಹಾವೇರಿ ಗದಗ ಲೋಕಸಭಾ ನೂತನ ಸಂಸದರಾಗಿ ಆಯ್ಕೆಯಾದ ಶ್ರೀ ಬಸವರಾಜ್ ಬೊಮ್ಮಾಯಿ ಅವರು ಇಂದು ಬೆಂಗಳೂರಿನಲ್ಲಿ ಸಭಾಪತಿ

ಶ್ರೀ ಬಸವರಾಜ್ ಎಸ್. ಹೊರಟ್ಟಿ ಅವರನ್ನು ಭೇಟಿಯಾಗಿ ಆಯ್ಕೆಯಾದ ಸಂತಸವನ್ನು ಹಂಚಿಕೊಂಡರು. ಈ ಸಂದರ್ಭದಲ್ಲಿ ಸಭಾಪತಿ ಶ್ರೀ ಬಸವರಾಜ್ ಎಸ್. ಹೊರಟ್ಟಿ ಅವರು ನೂತನ ಸಂಸದ ಬಸವರಾಜ್ ಬೊಮ್ಮಾಯಿ ಅವರನ್ನು ಸನ್ಮಾನಿಸಿ ಶುಭ ಕೋರಿ ಮಾತನಾಡಿದ ಅವರು ಮುಖ್ಯಮಂತ್ರಿಗಳಾಗಿ ಸಾಕಷ್ಟು ಜನ ಪರ ಸಾಮಾನ್ಯರ ಪರವಾಗಿ ಕೆಲಸ ಮಾಡುವ ಮೂಲಕ "**ಕಾಮನ್ ಮ್ಯಾನ್**" ಮುಖ್ಯಮಂತ್ರಿಗಳೆಂದೇ ಹೆಸರುಗಳಿಸಿದ್ದೀರಿ. ಸಂಸದರಾಗಿಯೂ ಕರ್ನಾಟಕದ ಅಭಿವೃದ್ಧಿಗೆ ಕೆಲಸ ಮಾಡುವ ಶಕ್ತಿಯನ್ನು ಆ ದೇವರು ತಮಗೆ ದಯಪಾಲಿಸಲಿ ಎಂದು ಹಾರೈಸಿದರು. ಅಲ್ಲದೆ ಮುಂದಿನ ದಿನಮಾನಗಳಲ್ಲಿ ತಮಗೆ ರಾಷ್ಟ್ರಮಟ್ಟದಲ್ಲಿ ಉತ್ತಮ ಭವಿಷ್ಯ ಸಹ ಇದೆ. ಅಲ್ಲಿವರೆಗೆ ನಾಡಿನ ಹಿತಕ್ಕಾಗಿ ಹೆಚ್ಚೆಚ್ಚು ಸಮಯವನ್ನ ಮೀಸಲಿಡಿ ಎಂದು ಹೇಳಿದರು.

ಸನ್ಮಾನ ಸ್ವೀಕರಿಸಿದ ಶ್ರೀ ಬಸವರಾಜ್ ಬೊಮ್ಮಾಯಿ ಅವರು ಶ್ರೀ ಬಸವರಾಜ್ ಎಸ್. ಹೊರಟ್ಟಿ ಅವರ ನಾಲ್ಕು ದಶಕಗಳ ಹೋರಾಟ ರಾಜಕೀಯ ಜೀವನದ ಕುರಿತು ನೆನಪು ಮಾಡಿಕೊಂಡು ಹೊರಟ್ಟಿ ಅವರ ಹೋರಾಟವನ್ನು ನೋಡಿಯೇ ನಾವೆಲ್ಲ ಬೆಳೆದಿದ್ದೇವೆ ಅವರ ನೇರ ನಡೆ-ನುಡಿ ಬದ್ಧತೆ ಉತ್ತರ ಕರ್ನಾಟಕದ ಹಿತಕ್ಕಾಗಿ ಅವರು ಸದಾಕಾಲ ಚಿಂತಿಸುವದರ ಜೊತೆಗೆ ಸಮಗ್ರ ಕರ್ನಾಟಕದ ಏಕತೆಗೆ ಗಟ್ಟಿ ಧ್ವನಿಯಾಗಿ ಕನ್ನಡ ಭಾಷೆ, ನೆಲ, ಜಲದ ಬಗ್ಗೆ ತಮ್ಮ ನಿಲುವನ್ನ ಗಟ್ಟಿಯಾಗಿ ಪ್ರತಿಪಾದಿಸಿದವರು ಹಾಗೂ ಶಿಕ್ಷಣ ಶಿಕ್ಷಕರ ಹಿತಕ್ಕಾಗಿ ಅವರು ತಮ್ಮ ಜೀವನದ ಬಹುಪಾಲು ಸಮಯವನ್ನು ಕಳೆದಿದ್ದಾರೆ ಇವರೊಬ್ಬ ನಾಡಿನ ಅಪರೂಪದ ಜನನಾಯಕ ಎಂದು ಹೇಳಿದರು ನಾನು ಕರ್ನಾಟಕದ ಅಭಿವೃದ್ಧಿಗಾಗಿ ಹಲವಾರು ಕನಸುಗಳನ್ನು ಹೊತ್ತಿದ್ದೇನೆ, ಅವುಗಳಿಗಾಗಿ ಸಾಕಷ್ಟು ಶ್ರಮ ಸಹ ಹಾಕುತ್ತೇನೆ ಎಂದು ಹೇಳಿದರು. ತಮ್ಮ ಮಾರ್ಗದರ್ಶನ ಸದಾ ನನಗೆ ಇರಲಿ ಎಂದು ಆಶಿಸಿದರು ಈ ಸಂದರ್ಭದಲ್ಲಿ ವಿರೋಧ ಪಕ್ಷ ನಾಯಕರಾದ ಶ್ರೀ ಆರ್. ಅಶೋಕ್ ಸೇರಿದಂತೆ ವಿಧಾನಪರಿಷತ್ತಿನ ಹಿರಿಯ ಅಧಿಕಾರಿಗಳು ಹಾಗೂ ಸಿಬ್ಬಂದಿವರ್ಗ ಮುಂತಾದವರು ಉಪಸ್ಥಿತರಿದ್ದರು.





ಮಾಜಿ ಮಾಜಿಮುಖ್ಯಮಂತ್ರಿಗಳು ಕೇಂದ್ರದ ಬೃಹತ್ ಕೈಗಾರಿಕೆ ಹಾಗೂ ಉಕ್ಕು ಸಚಿವರಾದ ಶ್ರೀ ಹೆಚ್.ಡಿ. ಕುಮಾರಸ್ವಾಮಿ ಅವರು ಇಂದು ಸಭಾಪತಿ ಶ್ರೀ ಬಸವರಾಜ್ ಎಸ್. ಹೊರಟ್ಟಿ ಅವರನ್ನು ಭೇಟಿಯಾಗಿ ಕುಶಲೋಪರಿಯನ್ನು ವಿಚಾರಿಸಿ ತಮ್ಮ ಸಂತಸವನ್ನು ಹಂಚಿಕೊಂಡರು.

ಈ ಸಂದರ್ಭದಲ್ಲಿ ಸಭಾಪತಿ ಬಸವರಾಜ್ ಎಸ್. ಹೊರಟ್ಟಿ ಅವರು ನೂತನ ಕೇಂದ್ರ ಸಚಿವರನ್ನು ಸನ್ಮಾನಿಸಿ ಮಾತನಾಡಿದ ಅವರು ಎರಡು ಬಾರಿ ಮುಖ್ಯಮಂತ್ರಿಗಳಾಗಿ ಸಾಕಷ್ಟು ಅಪಾರ ಅನುಭವ ಹೊಂದಿರುವ ತಾವು ರಾಜ್ಯಕ್ಕೆ ಸಾಕಷ್ಟು ತಮ್ಮದೇ ಆದ ಕೊಡುಗೆಯನ್ನು ನೀಡುವುದರ ಜೊತೆಗೆ ದೇಶಕ್ಕೆ ಒಬ್ಬ ಮಾದರಿ ಮಂತ್ರಿಗಳಾಗಿ ಕೆಲಸ ಮಾಡಿ ಎಂದು ಶುಭ ಕೋರಿದರು.

ಸನ್ಮಾನ ಸ್ವೀಕರಿಸಿ ಮಾತನಾಡಿದ ಹೆಚ್.ಡಿ.ಕುಮಾರಸ್ವಾಮಿ ಅವರು ತಾವು ಮೊದಲ ಬಾರಿ ಮುಖ್ಯಮಂತ್ರಿಗಳಾದಾಗ ಹೊರಟ್ಟಿ ಅವರು ಶಿಕ್ಷಣ ಸಚಿವರಾಗಿ ಮಾಡಿದ ಅಪಾರ ಸೇವೆಯನ್ನು ಸಾಧನೆಗಳನ್ನ ನೆನಪು ಮಾಡಿಕೊಂಡು ಆ ದಿನಗಳ ಕುರಿತು ಮಾತನಾಡಿದರು. ಮುಂಬರುವ ದಿನಗಳಲ್ಲಿ ಅಂತಹ ದಿನಗಳು ಬರಲಾರವು. ಅವತ್ತು ಪ್ರತಿಯೊಬ್ಬರಿಗೂ ಸಮಾಜಕ್ಕೆ ಏನನ್ನಾದರೂ ಕೊಡಬೇಕೆಂಬ ಹಂಬಲ ಇರುತ್ತಿತ್ತು. ಆದರೆ ಇಂದು ಅಂತಹ ವಾತಾವರಣ ನೋಡಲು ಸಿಗದೇ ಇರುವುದು ವಿಷಾದ ಸಂಗತಿ. ನನಗೆ ಸಿಕ್ಕ ಅವಕಾಶವನ್ನು ಸದುಪಯೋಗ ಮಾಡಿಕೊಂಡು ರಾಜ್ಯಕ್ಕೆ ರಾಷ್ಟ್ರಕ್ಕೆ ಕೀರ್ತಿ ತರುವ ಕೆಲಸವನ್ನು ಮಾಡುತ್ತೇನೆ. ಕನ್ನಡನಾಡಿನ ಜನತೆಯ ಮುಡಿಗೆ ತರುವೆನೇ ಹೊರತು ಹುಲ್ಲು ತರಲಾರೆ. ಆ ಭರವಸೆಯನ್ನು ನನ್ನ ಸಹೋದರ ಸಮಾನರಾದ ಗೌರವಾನ್ವಿತ ಸಭಾಪತಿ ಶ್ರೀ ಬಸವರಾಜ್ ಹೊರಟ್ಟಿ ಅವರಿಗೆ ನೀಡುತ್ತೇನೆ ಎಂದು ಭಾವುಕರಾಗಿ ನುಡಿದರು. ಈ ಸಂದರ್ಭದಲ್ಲಿ ಮಾಜಿ ಸಚಿವರು ಹಿರಿಯ ಶಾಸಕರಾದ ಶ್ರೀ ಜಿ.ಟಿ.ದೇವೇಗೌಡ, ವಿಧಾನಪರಿಷತ್ ಸದಸ್ಯರು ವಿವಿಧ ಗಣ್ಯಮಾನ್ಯರು, ಪರಿಷತ್ ಸಿಬ್ಬಂದಿವರ್ಗ ಮುಂತಾದವರು ಉಪಸ್ಥಿತರಿದ್ದರು.





**ಸರ್ಕಾರಿ ನೌಕರರ ಮಕ್ಕಳ ಪ್ರತಿಭಾ ಪುರಸ್ಕಾರ ಕಾರ್ಯಕ್ರಮ**




ದಿನಾಂಕ:15.06.2024 ರಂದು ಬೆಂಗಳೂರಿನಲ್ಲಿ ನಡೆದ ಬೆಂಗಳೂರು ಗ್ರಾಮಾಂತರ ಜಿಲ್ಲೆ, ರಾಮನಗರ ಜಿಲ್ಲೆ ಹಾಗೂ ಬೆಂಗಳೂರು ನಗರ ಜಿಲ್ಲೆಯ ಸರ್ಕಾರಿ ನೌಕರರ ಮಕ್ಕಳ ಪ್ರತಿಭಾ ಪುರಸ್ಕಾರ ಕಾರ್ಯಕ್ರಮವನ್ನು ಸಭಾಪತಿ ಶ್ರೀ ಬಸವರಾಜ್ ಎಸ್. ಹೊರಟ್ಟಿ ಅವರು ಉದ್ಘಾಟಿಸಿದರು.

ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಉಪಮುಖ್ಯಮಂತ್ರಿಗಳಾದ ಡಿ.ಕೆ.ಶಿವಕುಮಾರ್ ಅವರು ಪ್ರಶಸ್ತಿ ನೀಡಿ ಗೌರವಿಸಿದರು. ಇದೇ ಸಂದರ್ಭದಲ್ಲಿ ಸಭಾಪತಿಗಳನ್ನು ಹಾಗೂ ಉಪಮುಖ್ಯಮಂತ್ರಿಗಳನ್ನು ಮೂರು ಜಿಲ್ಲೆಯ ಸರ್ಕಾರಿ ನೌಕರರ ಸಂಘಟನೆಗಳ ಪರವಾಗಿ ಸನ್ಮಾನಿಸಲಾಯಿತು. ಈ ಸಂದರ್ಭದಲ್ಲಿ ಬೆಂಗಳೂರು ನಗರ ಜಿಲ್ಲೆಯ ಜಿಲ್ಲಾಧಿಕಾರಿಗಳು ಹಾಗೂ ರಾಜ್ಯ ಸರ್ಕಾರಿ ನೌಕರರ ಸಂಘಟನೆ ಅಧ್ಯಕ್ಷ ಷಡಕ್ಷರಿ ಅವರು ಸೇರಿದಂತೆ ಸಂಘಟನೆಯ ಪದಾಧಿಕಾರಿಗಳು ನೌಕರ ಬಾಂಧವರು ಪ್ರಶಸ್ತಿ ಪುರಸ್ಕೃತರು

ಮುಂತಾದವರು ಉಪಸ್ಥಿತರಿದ್ದರು. ದಿನಾಂಕ:15.06.2024 ರಂದು ಬೆಂಗಳೂರಿನಲ್ಲಿ ನಡೆದ ಬೆಂಗಳೂರು ಗ್ರಾಮಾಂತರ ಜಿಲ್ಲೆ, ರಾಮನಗರ ಜಿಲ್ಲೆ ಹಾಗೂ ಬೆಂಗಳೂರು ನಗರ ಜಿಲ್ಲೆಯ ಸರ್ಕಾರಿ ನೌಕರರ ಮಕ್ಕಳ ಪ್ರತಿಭಾ ಪುರಸ್ಕಾರ ಕಾರ್ಯಕ್ರಮವನ್ನು ಸಭಾಪತಿ ಶ್ರೀ ಬಸವರಾಜ್ ಎಸ್. ಹೊರಟ್ಟಿ ಅವರು ಉದ್ಘಾಟಿಸಿದರು.

## ಪದವಿಪೂರ್ವ ಹಾಗೂ ಪ್ರೌಢಶಾಲೆಗಳ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಸನ್ಮಾನ




ದಿನಾಂಕ:19.06.2024 ರಂದು ಬೆಂಗಳೂರು ಕರ್ನಾಟಕ ಸರ್ಕಾರ ಹಾಗೂ ಸಮಾಜ ಕಲ್ಯಾಣ ಇಲಾಖೆಯ ಅಂಗಸಂಸ್ಥೆಯಾದ ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ ಇವುಗಳ ವ್ಯಾಪ್ತಿಯಲ್ಲಿ ಬರುವ ಪಿ.ಯು.ಸಿ ಹಾಗೂ ಎಸ್.ಎಸ್.ಎಲ್.ಸಿ ವಿದ್ಯಾರ್ಥಿಗಳು 2024ನೇ ಸಾಲಿನ ಪರೀಕ್ಷೆಯಲ್ಲಿ ಉತ್ತಮ ಸಾಧನೆಗೈದ ಪದವಿಪೂರ್ವ ಹಾಗೂ ಪ್ರೌಢಶಾಲೆಗಳ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಸನ್ಮಾನ ಕಾರ್ಯಕ್ರಮ ಏರ್ಪಡಿಸಲಾಗಿತ್ತು.

ಮಾನ್ಯ ಮುಖ್ಯಮಂತ್ರಿಗಳಾದ ಸನ್ಮಾನ್ಯ ಶ್ರೀಸಿದ್ದರಾಮಯ್ಯನವರು ಸಭಾಪತಿಗಳಾದ ಶ್ರೀ ಬಸವರಾಜ್ ಎಸ್. ಹೊರಟ್ಟಿ ಅವರು ಸಮಾಜ ಕಲ್ಯಾಣ ಇಲಾಖೆ ಸಚಿವರಾದ ಡಾ:ಎಚ್.ಸಿ.ಮಹದೇವಪ್ಪ ಇವರುಗಳ ಸಮ್ಮುಖದಲ್ಲಿ ಸಾಧಕರನ್ನ ಸನ್ಮಾನಿಸಲಾಯಿತು. ವೇದಿಕೆ ಮೇಲೆ ಶಾಸಕರು, ವಿಧಾನಪರಿಷತ್ ಸದಸ್ಯರು ಇಲಾಖೆಯ ಹಿರಿಯ ಅಧಿಕಾರಿಗಳು ಗಣ್ಯ ಮಾನ್ಯರು ಸೇರಿದಂತೆ ಮುಂತಾದವರು ಉಪಸ್ಥಿತರಿದ್ದರು.

## ನಾಡ ದೇವಿ ಭುವನೇಶ್ವರಿ ಕಂಚಿನ ಪ್ರತಿಮೆ ಸ್ಥಾಪನೆಗೆ ಭೂಮಿ ಪೂಜೆ







ದಿನಾಂಕ: 20.06.2024 ರಂದು ವಿಧಾನಸೌಧದ ಪಶ್ಚಿಮ ದಿಕ್ಕಿನ ಗೇಟ್‌ನ ಒಂದು ಮತ್ತು ಎರಡರ ನಡುವೆ ಇರುವ ಜಾಗದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ಏರ್ಪಡಿಸಿದ ಕಾರ್ಯಕ್ರಮದಲ್ಲಿ ನಾಡದೇವಿ ಭುವನೇಶ್ವರಿ ಕಂಚಿನ ಪ್ರತಿಮೆ ಸ್ಥಾಪನೆಗೆ ಮಾನ್ಯಮುಖ್ಯಮಂತ್ರಿಗಳಾದ ಶ್ರೀ ಸಿದ್ದರಾಮಯ್ಯನವರು ಭೂಮಿ ಪೂಜೆ ನೆರವೇರಿಸಿದರು.

ಈ ಸಂದರ್ಭದಲ್ಲಿ ಸಭಾಪತಿಗಳಾದ ಶ್ರೀ ಬಸವರಾಜ್ ಎಸ್. ಹೊರಟ್ಟಿ, ಉಪಮುಖ್ಯಮಂತ್ರಿಗಳಾದ ಶ್ರೀ ಡಿ.ಕೆ.ಶಿವಕುಮಾರ್, ಸಚಿವರುಗಳಾದ ಶ್ರೀ ಶಿವರಾಜ್‌ತಂಗಡಗಿ, ಶ್ರೀ ಹೆಚ್.ಕೆ.ಪಾಟೀಲ್, ಶ್ರೀ ಸತೀಶ್ ಜಾರಕಿಹೊಳಿ, ಶ್ರೀ ರಾಮಲಿಂಗಾರೆಡ್ಡಿ, ಶ್ರೀ ರಾಜಣ್ಣ ಸೇರಿದಂತೆ ಶಾಸಕರು, ವಿಧಾನಪರಿಷತ್ ಸದಸ್ಯರು ಗಣ್ಯ ಮಾನ್ಯರು ಹಾಗೂ ಹಿರಿಯ ಅಧಿಕಾರಿವೃಂದ ಮುಂತಾದವರು ಉಪಸ್ಥಿತರಿದ್ದರು.

## 21ನೇ ಅಂತರಾಷ್ಟ್ರೀಯ ಯೋಗ ದಿನಾಚರಣೆ






ವಿಶ್ವಕ್ಕೆ ಯೋಗವನ್ನು ಪರಿಚಯಿಸಿದ ಕೀರ್ತಿ ಭಾರತಕ್ಕೆ ಸಲ್ಲುತ್ತದೆ. ಇಡೀ ವಿಶ್ವವೇ ಯೋಗದ ಮಹತ್ವವನ್ನ ಅರಿತು ಜೂನ್ 21ನ್ನು ಅಂತರಾಷ್ಟ್ರೀಯ ಯೋಗ ದಿನವನ್ನಾಗಿ ಆಚರಿಸುತ್ತಿರುವುದು ಇಡೀ ಭಾರತೀಯರಿಗೆ ಹೆಮ್ಮೆ. ಇಂತಹ ಅರ್ಥಪೂರ್ಣ ಮಹತ್ವದ ಕಾರ್ಯಕ್ರಮವನ್ನು ಬೆಂಗಳೂರಿನ ವಿಧಾನಸೌಧದ ಮುಂಭಾಗದಲ್ಲಿ ದಿನಾಂಕ:21.06.2024ರ ಮುಂಜಾವು ಏರ್ಪಡಿಸಲಾಗಿತ್ತು. ಈ ಕಾರ್ಯಕ್ರಮದಲ್ಲಿ ಸಭಾಪತಿ ಶ್ರೀ ಬಸವರಾಜ್ ಎಸ್. ಹೊರಟ್ಟಿ ಅವರು ಭಾಗವಹಿಸಿ ಗಣ್ಯಮಾನ್ಯರೊಂದಿಗೆ ಯೋಗಾಸನಗಳನ್ನು ಪ್ರದರ್ಶಿಸಿದರು. ಈ ಸಂದರ್ಭದಲ್ಲಿ ಗೌರವಾನ್ವಿತ ರಾಜ್ಯಪಾಲರು ಉಪಮುಖ್ಯಮಂತ್ರಿಗಳಾದ ಶ್ರೀ ಡಿ.ಕೆ.ಶಿವಕುಮಾರ್ ಅವರು ಸಚಿವರಾದ ಶ್ರೀ ದಿನೇಶ್ ಗುಂಡೂರಾವ್ ಅವರು ಸೇರಿದಂತೆ ವಿವಿಧ ಗಣ್ಯರು, ಮಾನ್ಯ ಹಿರಿಯ ಅಧಿಕಾರಿಗಳು, ಯೋಗಸಾಧಕರು ಮತ್ತು ವಿದ್ಯಾರ್ಥಿಗಳು ಮುಂತಾದವರು ಭಾಗವಹಿಸಿದ್ದರು.

## 1. ನೂತನ ಸದಸ್ಯರುಗಳ ಪ್ರಮಾಣ ವಚನ

ದಿನಾಂಕ: 24.06.2024 ರಂದು ರಾಜ್ಯ ವಿಧಾನಸಭೆಯಿಂದ ಮೇಲ್ಮನೆಗೆ ಆಯ್ಕೆಯಾಗಿರುವ 11 ಮಂದಿ ಹಾಗೂ ಶಿಕ್ಷಕ ಮತ್ತು ಪದವೀಧರ ಕ್ಷೇತ್ರಗಳಿಂದ ಚುನಾಯಿತರಾಗಿರುವ 06 ಮಂದಿ ಸೇರಿ ಒಟ್ಟು 17 ನೂತನ ಸದಸ್ಯರು ಪ್ರಮಾಣ ವಚನ ಸ್ವೀಕರಿಸಿದರು.

ವಿಧಾನಸೌಧದ ಬ್ಯಾಂಕ್ವೆಟ್ ಹಾಲ್‌ನಲ್ಲಿ ನಡೆದ ಸಮಾರಂಭದಲ್ಲಿ ಮಾನ್ಯ ಸಭಾಪತಿ ಶ್ರೀ ಬಸವರಾಜ್ ಎಸ್. ಹೊರಟ್ಟಿ, ಮಾನ್ಯ ಮುಖ್ಯಮಂತ್ರಿ ಶ್ರೀ ಸಿದ್ದರಾಮಯ್ಯ ಹಾಗೂ ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರಾದ ಶ್ರೀ ಎಚ್.ಕೆ ಪಾಟೀಲ್ ಉಪಸ್ಥಿತರಿದ್ದರು.

ವಿಧಾನಸಭೆಯಿಂದ ಆಯ್ಕೆಯಾಗಿರುವ ಶ್ರೀ ಐವಾನ್ ಡಿಸೋಜ, ಶ್ರೀ ಕೆ.ಗೋವಿಂದರಾಜು, ಶ್ರೀ ಜಗದೇವ ಗುತ್ತೇದಾರ್, ಶ್ರೀಮತಿ ಬಲ್ಕೀಸ್‌ಬಾನು, ಶ್ರೀ ಎನ್.ಎಸ್.ಬೋಸರಾಜು, ಡಾ:ಯತೀಂದ್ರ, ಶ್ರೀ ವಸಂತಕುಮಾರ, ಶ್ರೀ ಮಾರುತಿ ರಾವ್ ಮುಳೆ, ಶ್ರೀ ಟಿ.ಎನ್ ಜವರಾಯಿಗೌಡ, ಶ್ರೀ ಸಿ.ಟಿ.ರವಿ ಮತ್ತು ಶ್ರೀ ಎನ್ ರವಿಕುಮಾರ್ ಅವರು ಪ್ರಮಾಣ ವಚನ ಸ್ವೀಕರಿಸಿದರು.

ಶಿಕ್ಷಕರ ಮತ್ತು ಪದವೀಧರ ಕ್ಷೇತ್ರದಿಂದ ವಿಧಾನ ಪರಿಷತ್‌ಗೆ ಚುನಾಯಿತರಾಗಿರುವ ಶ್ರೀ ಚಂದ್ರಶೇಖರ ಪಾಟೀಲ, ಶ್ರೀ ಕೆ.ವಿವೇಕಾನಂದ ಹಾಗೂ ಶ್ರೀ ಡಿ.ಟಿ.ಶ್ರೀನಿವಾಸ ಅವರು ನೂತನ ಸದಸ್ಯರಾಗಿ ಪ್ರಮಾಣ ಸ್ವೀಕರಿಸಿದರು.

ಈ ಸಂದರ್ಭದಲ್ಲಿ ಹಲವಾರು ಸಚಿವರು, ಶಾಸಕರು, ವಿಧಾನಪರಿಷತ್ ಸದಸ್ಯರು, ಗಣ್ಯಮಾನ್ಯರು ನೂತನವಾಗಿ ಆಯ್ಕೆಯಾದ ವಿಧಾನಪರಿಷತ್ ಸದಸ್ಯರ ಅಭಿಮಾನಿಗಳು ಕುಟುಂಬ ವರ್ಗದವರು ಹಿರಿಯ ಅಧಿಕಾರಿಗಳು ವಿಧಾನಪರಿಷತ್ತಿನ ಸಿಬ್ಬಂದಿ ವರ್ಗದವರು ಮುಂತಾದವರು ಉಪಸ್ಥಿತರಿದ್ದರು.

## 2. ಚುನಾವಣೆ ಪ್ರಜಾಪ್ರಭುತ್ವದ ಉತ್ಸವ

ಪ್ರಜಾಪ್ರಭುತ್ವ ಉಳಿಸಲು, ಬೆಳಸಲು ಪ್ರತಿಯೊಬ್ಬರೂ ಮತದಾನದಲ್ಲಿ ಪಾಲ್ಗೊಂಡು ಪ್ರಜಾಪ್ರಭುತ್ವ ಯಶಸ್ವಿಗೊಳಿಸಬೇಕೆಂದು ವಿಧಾನಪರಿಷತ್ ಸಭಾಪತಿ ಬಸವರಾಜ ಎಸ್. ಹೊರಟ್ಟಿ ಕರೆ ನೀಡಿದರು.

ವಿಧಾನಸಭಾ ಮುಂಭಾಗದಲ್ಲಿ ದಿ ಬೆಂಗಳೂರು ಸಿಟಿ ಕಾರ್ಪೊರೇಷನ್ ವರ್ಕರ್ಸ್ ಫೆಡರೇಷನ್‌ನಿಂದ ಸಂವಿಧಾನ ಶಿಲ್ಪಿ ಡಾ:ಬಿ.ಆರ್.ಅಂಬೇಡ್ಕರ್ 133ನೇ ಜನ್ಮದಿನಾಚರಣೆ ನಿಮಿತ್ತ ಸಂವಿಧಾನ ಶಿಲ್ಪಿ ಪ್ರತಿಮೆಗೆ ಪುಷ್ಪನಮನ ಸಲ್ಲಿಸಿ ಮತದಾರರ ಜಾಗೃತಿ ಮತ್ತು ಬೈಕ್ ಜಾಥಾಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಚುನಾವಣೆ ಪ್ರಜಾಪ್ರಭುತ್ವದ ಹಬ್ಬ, ಚುನಾವಣೆ ಜನೋತ್ಸವವಾಗಿದ್ದು, ಪ್ರತಿಯೊಬ್ಬರೂ ಈ ಉತ್ಸವದಲ್ಲಿ ಭಾಗವಹಿಸಬೇಕು ಎಂದರು.

ದಿ ಬೆಂಗಳೂರು ಸಿಟಿ ಕಾರ್ಪೊರೇಷನ್ ವರ್ಕರ್ಸ್ ಫೆಡರೇಷನ್ ಅಧ್ಯಕ್ಷ ಡಾ.ಬಾಬು ಮಾತನಾಡಿ, ದೇಶದಲ್ಲಿ ಪ್ರತಿಯೊಬ್ಬ ನಾಗರಿಕರು ಸರಿಸಮಾನವಾಗಿ ಬಾಳಿ ಬದುಕಲು ಸಂವಿಧಾನ ಎಂಬ ಪವಿತ್ರಗ್ರಂಥ ನಮಗೆ ಕೊಡುಗೆಯಾಗಿದೆ. ಸಂವಿಧಾನ ರಚನಾ ಸಮಿತಿ ಅಧ್ಯಕ್ಷರಾಗಿದ್ದ ಡಾ.ಬಿ.ಆರ್‌ಅಂಬೇಡ್ಕರ್ ಕೊಡುಗೆ ಅನನ್ಯ. ವಿಶ್ವದಲ್ಲೇ ಅತ್ಯಂತ ಶ್ರೇಷ್ಠ ಸಂವಿಧಾನವನ್ನು ಅಂಬೇಡ್ಕರ್

ಅವರು ನಮಗೆ ನೀಡಿದ್ದಾರೆ. ಅದರಲ್ಲಿ ಉತ್ತಮ ಸರ್ಕಾರ, ಉತ್ತಮ ರಾಜಕಾರಣಿ ಆಯ್ಕೆ ಮಾಡಲು ಮತದಾನದ ಹಕ್ಕನ್ನು ಪ್ರತಿಯೊಬ್ಬ ನಾಗರಿಕರಿಗೂ ನೀಡಿದ್ದಾರೆ. ಪ್ರಜಾಪ್ರಭುತ್ವ ರಾಷ್ಟ್ರದಲ್ಲಿ ಮತದಾನ ಮಾಡುವ ಮೂಲಕ ಉತ್ತಮ ಜನಪ್ರತಿನಿಧಿ ಆಯ್ಕೆ ಮಾಡಬೇಕೆಂದು ತಿಳಿಸಿದರು.

**ಆಧಾರ**: ಸಂಯುಕ್ತ ಕರ್ನಾಟಕ, ದಿನಾಂಕ: 16.04.2024

## 3. ಶಾಸನ ಸಭೆಗಳ ಕಲಾಪ ಅವಧಿ ಸರಾಸರಿ 22 ದಿನ

ವಿವಿಧ ರಾಜ್ಯಗಳಲ್ಲಿ ವಿಧಾನಸಭೆ ಅಧಿವೇಶನಗಳು 2023ನೇ ಸಾಲಿನಲ್ಲಿ ಸರಾಸರಿ 22 ದಿನಗಳಷ್ಟೇ ನಡೆದಿವೆ. ಸರ್ಕಾರ ಮತ್ತು ರಾಜ್ಯಪಾಲರ ನಡುವಿನ ಶೀತಲಸಮರದ ಪರಿಣಾಮ ಕೆಲ ರಾಜ್ಯಗಳಲ್ಲಿ ಅಧಿವೇಶನವನ್ನು ಮುಂದೂಡದೇ ಕಲಾಪವನ್ನು ಆರು ತಿಂಗಳವರೆಗೂ ಲಂಭಿಸಲಾಗಿದೆ.

ಪಿಆರ್‌ಎಸ್ ಲೆಜಿಸ್ಲೇಟಿವ್ ರಿಸರ್ಚ್ ಸಂಸ್ಥೆಯ ವರದಿ ಪ್ರಕಾರ, 2023ರಲ್ಲಿ ರಾಜ್ಯ ವಿಧಾನಸಭೆಗಳ ಅಧಿವೇಶನ ಸರಾಸರಿ 22 ದಿನ ನಡೆದಿದ್ದು, ಸರಾಸರಿ ಕಲಾಪದ ಅವಧಿಯು 5 ಗಂಟೆಗಳಾಗಿವೆ. 2023ರಲ್ಲಿ 7 ರಾಜ್ಯಗಳಲ್ಲಿ ಅಧಿವೇಶನ ಮುಂದೂಡದೇ ಕಲಾಪವನ್ನು ನಡೆಸದೇ ಅವಧಿ ಲಂಭಿಸಲಾಗಿದೆ. ಎರಡು ಕಲಾಪಗಳ ನಡುವಿನ ಅಂತರ ಆರು ತಿಂಗಳಿಗೂ ಹೆಚ್ಚು ಕಲಾಪವಿತ್ತು ಎಂದು ವರದಿ ಹೇಳಿದೆ.

ಸಂವಿಧಾನದ ಪ್ರಕಾರ ರಾಜ್ಯ ಶಾಸನಸಭೆಗಳ ಅಧಿವೇಶನ ಕನಿಷ್ಠ 6 ತಿಂಗಳಿಗೊಮ್ಮೆ ನಡೆಯಬೇಕು. ಇಲ್ಲಿ ಬಹುತೇಕ ಶೇ. 62ರಷ್ಟು ಕಲಾಪ ಬಜೆಟ್ ಅಧಿವೇಶನದ ಅವಧಿಯದ್ದೇ ಆಗಿದೆ ಎಂದು ವರದಿ ಉಲ್ಲೇಖಿಸಿದೆ.

ದೆಹಲಿಯಲ್ಲಿ ಆ ವರ್ಷ ವಿಧಾನಸಭೆ ಅಧಿವೇಶನ ಮಾರ್ಚ್‌ನಿಂದ ಡಿಸೆಂಬರ್‌ವರೆಗೆ ನಡೆದಿದ್ದರೆ ಪಂಜಾಬ್‌ನಲ್ಲಿ ಮಾರ್ಚ್‌ನಿಂದ ಅಕ್ಟೋಬರ್‌ವರೆಗೆ ನಡೆದಿದೆ. ಈ ಅವಧಿಯಲ್ಲಿ ಸದನ ಸೇರಿರುವುದು ಕ್ರಮವಾಗಿ 14 ಮತ್ತು 10 ಬಾರಿ ಮಾತ್ರ ಎಂದು ತಿಳಿಸಿದೆ.

ರಾಜ್ಯಪಾಲರು ಬಜೆಟ್ ಅಧಿವೇಶನ ಕರೆಯುತ್ತಿಲ್ಲ ಎಂದು ಆರೋಪಿಸಿ ಪಂಜಾಬ್ ಸರ್ಕಾರವು ಫೆಬ್ರವರಿ 2023ರಲ್ಲಿ ಸುಪ್ರೀಂ ಕೋರ್ಟ್ ಮೆಟ್ಟಿಲೇರಿತ್ತು. ರಾಜ್ಯ ಸಚಿವ ಸಂಪುಟದ ಸಲಹೆಗೆ ರಾಜ್ಯಪಾಲರು ಬದ್ಧರಾಗಿರಬೇಕು ಎಂದು ಕೋರ್ಟ್ ತಾಕೀತು ಮಾಡಿತ್ತು.

ಅಂತೆಯೇ ರಾಜಸ್ಥಾನದಲ್ಲಿ ಜನವರಿಯಿಂದ ಆಗಸ್ಟ್‌ವರೆಗೂ ಅಧಿವೇಶನದ ಅವಧಿ ಇತ್ತು 2021 ಮತ್ತು 2022ರಲ್ಲಿ ರಾಜಸ್ಥಾನದಲ್ಲಿ ಒಂದು ಬಾರಿಯಷ್ಟೇ ಅಧಿವೇಶನ ಕರೆಯಲಾಗಿತ್ತು. ಅದರ ಅವಧಿಯೂ ಜನವರಿಯಿಂದ ಡಿಸೆಂಬರ್‌ವರೆಗೂ ಮುಂದುವರಿದಿತ್ತು.

ಪಶ್ಚಿಮ ಬಂಗಾಳದಲ್ಲಿ 2023ರ ಜುಲೈನಲ್ಲಿ ಅಧಿವೇಶನ ಆರಂಭವಾಗಿತ್ತು. 2024ರ ಮಾರ್ಚ್‌ವರೆಗೆ ಅದನ್ನು ಮುಂದೂಡಿರಲಿಲ್ಲ. ಫೆಬ್ರವರಿಯಲ್ಲಿ ಬಜೆಟ್ ಅಂಗೀಕರಿಸಲು ಕಲಾಪ ನಡೆದಿತ್ತು. ಆದರೆ, ರಾಜ್ಯಪಾಲರ ಸಾಂಪ್ರದಾಯಿಕ ಭಾಷಣವಿಲ್ಲದೇ ಕಲಾಪವು ಆರಂಭವಾಗಿತ್ತು ಎಂದು ವರದಿಯು ಉಲ್ಲೇಖಿಸಿದೆ.

ಮಹಾರಾಷ್ಟ್ರ ವಿಧಾನಸಭೆಯಲ್ಲಿ ಅತಿ ಹೆಚ್ಚು, ಅಂದರೆ 41 ದಿನ ಕಲಾಪ ನಡೆದಿವೆ. ನಂತರದ ಸ್ಥಾನಗಳಲ್ಲಿ ಪಶ್ಚಿಮ ಬಂಗಾಳ (40 ದಿನ) ಮತ್ತು ಕರ್ನಾಟಕ(39 ದಿನ) ಇವೆ. ಆಂಧ್ರಪ್ರದೇಶ, ಹರಿಯಾಣ, ಮಧ್ಯಪ್ರದೇಶ, ಪಂಜಾಬ್ ಮತ್ತು ತೆಲಂಗಾಣದಂತಹ ರಾಜ್ಯಗಳಲ್ಲಿ ವಿಧಾನಸಭೆಗಳ ಕಲಾಪ 20 ದಿನಗಳಿಗಿಂತ ಕಡಿಮೆ ಅವಧಿ ನಡೆದಿವೆ. ಅರುಣಾಚಲ ಪ್ರದೇಶ, ನಾಗಾಲ್ಯಾಂಡ್ ಉತ್ತರಾಖಂಡದಲ್ಲಿ ಅಧಿವೇಶನವು 10 ದಿನಗಳಿಗಿಂತ ಕಡಿಮೆ ನಡೆದಿದೆ ಎಂದು ವರದಿ ಪ್ರಸ್ತಾಪಿಸಿದೆ.

**ಆಧಾರ**: ಪ್ರಜಾವಾಣಿ, ದಿನಾಂಕ: 29.04.2024

## 4. ಭಾಷಣದಲ್ಲಿ ಮಾತ್ರ ಉಳಿದಿದೆ ಜಾತ್ಯತೀತತೆ : ಹೊರಟ್ಟಿ ಬೇಸರ

ಜಾತ್ಯಾತೀತತೆ ಎಂಬುದು ಕೇವಲ ಭಾಷಣಕ್ಕೆ ಸೀಮಿತವಾಗಿದ್ದು ಚುನಾವಣೆಗೆ ಸ್ಪರ್ಧಿಸುವಾಗ, ಮತ ಹಾಕುವಾಗ ಜಾತಿ, ಉಪ ಜಾತಿಗಳನ್ನು ವಿಚಾರಿಸುತ್ತೇವೆ. ನಮ್ಮ ಮಾತಿಗೂ ಕೃತಿಗೂ ಅಂತರ ಇರಬಾರದು ಎಂದು ವಿಧಾನ ಪರಿಷತ್ ಸಭಾಪತಿ ಬಸವರಾಜ ಎಸ್. ಹೊರಟ್ಟಿ ತಿಳಿಸಿದರು.

ದಿನಾಂಕ: 10.05.2024 ರಂದು ವಿಧಾನಸೌಧ ಆವರಣದಲ್ಲಿ ಸರ್ಕಾರದಿಂದ ನಡೆದ ಬಸವ ಜಯಂತಿ ಕಾರ್ಯಕ್ರಮದ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಇಂದು ಇಡೀ ದೇಶಾದ್ಯಂತ ಬಸವ ಜಯಂತಿ ಆಚರಿಸಲಾಗುತ್ತಿದೆ. 1250 ವರ್ಷದ ಹಿಂದ ಜಾತ್ಯತೀತ ರಾಷ್ಟ್ರ ನಿರ್ಮಾಣ ಮಾಡುವ ಸಲುವಾಗಿ ಬಸವಣ್ಣ ಅವರು ಅಂತರ್ಜಾತೀಯ ವಿವಾಹ ಮಾಡಿದರು. ದುರ್ದೈವದ ಸಂಗತಿ ಎಂದರೆ, ಭಾಷಣದಲ್ಲಿ ಮಾತ್ರ ಜಾತ್ಯತೀತತೆ ಎನ್ನುವ ನಾವು ಚುನಾವಣೆಗೆ ಸ್ಪರ್ಧಿಸುವಾಗ, ಮತ ಹಾಕುವಾಗ ಜಾತಿ, ಉಪಜಾತಿ ಎಲ್ಲವನ್ನೂ ಕೇಳುತ್ತೇವೆ ಎಂದು ಬೇಸರ ವ್ಯಕ್ತಪಡಿಸಿದರು.

ಬಸವಣ್ಣ ಅವರು ಕಾಯಕವೇ ಕೈಲಾಸ ಎಂದೂ ಹೇಳಿದ್ದಾರೆ. ಕೈಲಾಸ ಎಂದರೆ ಹಂಚಿಕೊಂಡು ತಿನ್ನುವುದು ಎಂದರ್ಥ, ಆದರೆ, ಯಾರೂ ಹಂಚಿಕೊಂಡು ತಿನ್ನುವವರಿದ್ದಾರೆ? ಎಲ್ಲ ಬಡಿದುಕೊಂಡು ತಿನ್ನುವವರೇ ಹೆಚ್ಚು ಎಂದು ಹೇಳಿದರು.

**ಆಧಾರ**: ಉದಯವಾಣಿ, ದಿನಾಂಕ: 11.05.2024

## 5. ವಚನ ಸಾಹಿತ್ಯದಿಂದ ಮನದೊಳಗಿನ ದ್ವಂದ್ವಗಳ ನಿವಾರಣೆ: ಸುತ್ತೂರುಶ್ರೀ

ಬಸವಾದಿ ಶರಣರ ವಚನ ಸಾಹಿತ್ಯ ಆತ್ಮಪ್ರಜ್ಞೆ ಜಾಗೃತಿ ಹಾಗೂ ಮನಸ್ಸಿನ ದ್ವಂದ್ವಗಳನ್ನು ನಿವಾರಿಸುವ ಶಕ್ತಿ ಹೊಂದಿದೆ ಎಂದು ಸುತ್ತೂರು ಮಠದ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿ ಹೇಳಿದರು. ದಿನಾಂಕ: 13.05.2024 ರಂದು ಜಯನಗರದ ಶಿವರಾತ್ರೀಶ್ವರ ಕೇಂದ್ರದಲ್ಲಿ ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತು ಹಾಗೂ ಬೆಂಗಳೂರು ನಗರ ಘಟಕ ಶರಣ ಸಾಹಿತ್ಯಪರಿಷತ್, ಕದಳಿ ಮಹಿಳಾ ವೇದಿಕೆ ಸಹಯೋಗದಲ್ಲಿ ಆಯೋಜಿಸಲಾಗಿದ್ದ ಬಸವ ಜಯಂತಿ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಭಾರತ ಧಾರ್ಮಿಕ ಹಾಗೂ ಆಧ್ಯಾತ್ಮಿಕತೆಯಲ್ಲಿ ಶ್ರೀಮಂತ ದೇಶ, ಆಧ್ಯಾತ್ಮಿಕತೆ ಪ್ರತಿಯೊಬ್ಬ ಮನುಷ್ಯ ಅವಿಭಾಜ್ಯ ಅಂಗ, ಅಧ್ಯಾತ್ಮಿಕತೆಯಿಂದ ಕೂಡಿದ ಬಸವಾದಿ ಶರಣರ ವಚನಗಳು, ತತ್ವ ಸಿದ್ಧಾಂತಗಳನ್ನು ಪ್ರತಿಯೊಬ್ಬರು ಅರ್ಥೈಸಿಕೊಂಡು ಜೀವನದಲ್ಲಿ ಅಳವಡಿಸಿಕೊಳ್ಳಬೇಕಿದೆ ಎಂದರು.

ವಿಧಾನಪರಿಷತ್ತು ಸಭಾಪತಿ ಬಸವರಾಜ ಎಸ್. ಹೊರಟ್ಟಿ ಮಾತನಾಡಿ, ಬಸವಣ್ಣ, ಅಂಬೇಡ್ಕರ್‌ರಂತಹ ಮಹಾನ್ ನಾಯಕರು ಜಾತ್ಯಾತೀತವಾಗಿ ಸಮಾನತೆ ಹಾಗೂ ಅಸ್ಪೃಶ್ಯತೆ ನಿವಾರಣೆಗೆ ಶ್ರಮಿಸಿದವರು. ಅನ್ಯಾಯದ ವಿರುದ್ಧ ಕ್ರಾಂತಿ ಮಾಡಿದವರು. ಇಂತಹ ಆದರ್ಶ ವ್ಯಕ್ತಿಗಳ ತತ್ವ ಸಿದ್ಧಾಂತಗಳನ್ನು ಯುವಜನರು ತಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಬೇಕೆಂದು ಸಲಹೆ ನೀಡಿದರು.

**ಆಧಾರ**: ಕನ್ನಡ ಪ್ರಭ, ದಿನಾಂಕ: 14.05.2024

## 6. ಮೇಲ್ಮನೆಯ 11 ಸ್ಥಾನಕ್ಕೆ ಅವಿರೋಧ ಆಯ್ಕೆ

ನಿರೀಕ್ಷೆಯಂತೆ ವಿಧಾನಸಭೆಯಿಂದ ವಿಧಾನಪರಿಷತ್ತಿನ 11 ಸ್ಥಾನಗಳಿಗೆ ಅವಿರೋಧ ಆಯ್ಕೆ ನಡೆದಿದ್ದು, ಆಡಳಿತಾರೂಢ ಕಾಂಗ್ರೆಸ್‌ನ ಏಳು ಪ್ರತಿಪಕ್ಷ ಬಿಜೆಪಿಯ ಮೂರು ಹಾಗೂ ಜೆಡಿಎಸ್‌ನ ಓರ್ವ ಅಭ್ಯರ್ಥಿಗಳ ಹೆಸರನ್ನು ಅಧಿಕೃತವಾಗಿ ಘೋಷಿಸಲಾಯಿತು.

ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವ ಶ್ರೀ ಎನ್.ಎಸ್.ಬೋಸರಾಜು, ಸಿಎಂ ರಾಜಕೀಯ ಕಾರ್ಯದರ್ಶಿ ಶ್ರೀ ಕೆ. ಗೋವಿಂದರಾಜು, ಕಾಂಗ್ರೆಸ್‌ನ ಶ್ರೀ ಕೆ. ಹರೀಶ್‌ಕುಮಾರ್, ಶ್ರೀ ಅರವಿಂದ ಕುಮಾರ್ ಅರಳಿ, ಜೆಡಿಎಸ್‌ನ ಶ್ರೀ ಬಿ.ಎಂ. ಫಾರೂಕ್, ವಿಧಾನಸಭೆ ವಿರೋಧ ಪಕ್ಷದ ಮುಖ್ಯ ಸಚೇತಕ ಶ್ರೀ ಎನ್.ರವಿಕುಮಾರ್, ಬಿಜೆಪಿಯ ಶ್ರೀ ರಘುನಾಥರಾವ್ ಮಲ್ಕಾಪುರೆ, ಶ್ರೀ ಎಸ್.ರುದ್ರೇಗೌಡ, ಶ್ರೀ ಪಿ.ಎಂ.ಮುನಿರಾಜುಗೌಡ ಅವರ ನಿವೃತ್ತಿ ಹಾಗೂ ಡಾ.ತೇಜಸ್ವಿನಿಗೌಡ ಮತ್ತು ಶ್ರೀ ಕೆ.ಪಿ ನಂಜುಂಡಿ ರಾಜೀನಾಮೆಯಿಂದ ತೆರವಾದ ಸ್ಥಾನಗಳಿಗೆ ಈ ಚುನಾವಣೆ ಘೋಷಣೆಯಾಗಿತ್ತು.

ಈ ಸ್ಥಾನಗಳಿಗೆ ಜೂನ್ 13ರಂದು ಮತದಾನ ನಡೆಯಬೇಕಿತ್ತು. ಆದರೆ, ಹನ್ನೊಂದು ಸ್ಥಾನಗಳಿಗೆ ಸಲ್ಲಿಕೆಯಾಗಿದ್ದ 12 ನಾಮಪತ್ರಗಳ ಪೈಕಿ ಆಸಿಫ್ ಪಾಷಾ ಎನ್ನುವರ ನಾಮಪತ್ರದಲ್ಲಿ ಸೂಚಕರು, ಅನುಮೋದಕರ ಹೆಸರು, ಸಹಿ ಇಲ್ಲದಿದ್ದರಿಂದ ತಿರಸ್ಕೃತವಾಗಿತ್ತು. ಅಲ್ಲದೆ, ಇದ್ದ 11 ಅಧಿಕೃತ ಅಭ್ಯರ್ಥಿಗಳಲ್ಲಿ ಯಾರೊಬ್ಬರೂ ನಾಮಪತ್ರ ಹಿಂಪಡೆಯದೇ ಇದ್ದರಿಂದ ಅಂತಿಮ ಕಣದಲ್ಲಿ ಉಳಿದ ಅಷ್ಟೂ ಜನರ ಅವಿರೋದ ಆಯ್ಕೆಯನ್ನು ಚುನಾವಣಾಧಿಕಾರಿ ಶ್ರೀಮತಿ ಎಂ.ಕೆ.ವಿಶಾಲಾಕ್ಷಿ ಪ್ರಕಟಿಸಿದರು. ಬಳಿಕ ಗೆದ್ದವರಿಗೆ ಪ್ರಮಾಣಪತ್ರ ವಿತರಣೆಯನ್ನೂ ಮಾಡಲಾಯಿತು.

ಪ್ರಮಾಣ ಪತ್ರ ಸ್ವೀಕರಿಸಿದ ಕಾಂಗ್ರೆಸ್ ಸದಸ್ಯರು ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರನ್ನು ಭೇಟಿ ಮಾಡಿ ಕೃತಜ್ಞತೆ ಸಲ್ಲಿಸಿದರು. ಉತ್ತಮ ರೀತಿಯಿಂದ ಕೆಲಸ ಮಾಡುವಂತೆ ಸಿಎಂ ಹಾಗೂ ಡಿಸಿಎಂ ಶುಭ ಹಾರೈಸಿದರು.

**ಆಧಾರ**: ಉದಯವಾಣಿ, ದಿನಾಂಕ: 07.06.2024

## 7. ವಿಧಾನಸಭೆಯ ಪಶ್ಚಿಮ ದ್ವಾರಕ್ಕೂ ಬಂತು ಕಳೆ

ರಾಜ್ಯಾಡಳಿತ ಶಕ್ತಿಕೇಂದ್ರ ವಿಧಾನಸೌಧದ ಒಳಾಂಗಣ ಸೌಂದರ್ಯಕ್ಕೆ ಹೊಸತೊಂದು ಮೆರುಗು ಬಂದಿದ್ದು ವಿಧಾನಸಭೆಯ ಪಶ್ಚಿಮ ದಿಕ್ಕಿನಲ್ಲಿದ್ದ ದೈತ್ಯಾಕಾರದ ಕಬ್ಬಿಣದ ಗೇಟ್‌ನ ಜಾಗದಲ್ಲೀಗ ಅಂದದ ಬೀಟೆ ಮರದ (ರೋಸ್‌ವುಡ್) ದ್ವಾರವೊಂದು ಕರಕುಶಲ ಕಲೆಗಳೊಂದಿಗೆ ಅರಳಿ ನಿಂತಿದೆ.

ಕೆಂಗಲ್ ಹನುಮಂತಯ್ಯ ಅವರ ದೂರದೃಷ್ಟಿಯೊಂದಿಗೆ ನಿರ್ಮಾಣಗೊಂಡ ವಿಧಾನಸೌಧಕ್ಕೆ ಬರೋಬ್ಬರಿ 68 ವರ್ಷ ತುಂಬಿದ್ದು ಕಟ್ಟಡ ನಿಮಾಣ ಕಾಲದಲ್ಲಿ ಬಳಸಿರುವ ಕಲ್ಲು, ಗಾರೆ, ನೆಲಹಾಸು,

ಮರಮಟ್ಟುಗಳು ಇಂದಿಗೂ ಸೌಧದ ಸೌಂದರ್ಯ ಹೆಚ್ಚಿಸುತ್ತಲೇ ಇವೆ. ಕಾಲಕಾಲಕ್ಕೆ ಇವುಗಳಿಗೆ ಪಾಲಿಶ್, ಪೇಂಟಿಂಗ್ ಇತ್ಯಾದಿಗಳ ಮೂಲಕ ಹೊಳೆಯುವಂತೆ ನಿರ್ವಹಣೆ ಮಾಡಿಕೊಂಡು ಬರಲಾಗುತ್ತಿದೆ.

ವಿಧಾನಸೌಧದಲ್ಲಿನ ಪ್ರತಿಯೊಂದು ಕೊಠಡಿಯ ಬಾಗಿಲೂ ಮರದಿಂದಲೇ ತಯಾರಾದದ್ದು ಸಂಪುಟ ಸಭೆ ನಡೆಯುವ ಮಂದಿರದ ಪ್ರವೇಶದ್ವಾರವಂತೂ ರಕ್ತಚಂದನ, ಬೀಟೆ, ತೇಗದ ಮರಗಳಿಂದ ನಿರ್ಮಾಣವಾಗಿವೆ. ವಿಧಾನಸಭೆಯ ಪೂರ್ವ ದಿಕ್ಕಿನ ಪ್ರವೇಶದ್ವಾರವೂ ಅದ್ಭುತ ಕುಶಲಕಲೆಗಳಿಂದ ತುಂಬಿಕೊಂಡು ಅಪ್ಯಾಯಮಾನ ಎನಿಸುವಂತಿದೆ. ಆದರೆ ವಿಧಾನಸಭೆಯ ಪಶ್ಚಿಮ ದಿಕ್ಕಿನಲ್ಲಿದ್ದ ದೈತ್ಯಾಕಾರದ ಕಬ್ಬಿಣದ ಗೇಟ್ ಮಾತ್ರ ಈ ಅಂದಕ್ಕೆ ಕಪ್ಪು ಚುಕ್ಕೆ ಇಟ್ಟಂತೆ ಕಾಣುತ್ತಿತ್ತು. ಇದನ್ನು ಬದಲಿಸಬೇಕೆಂದು ವಿಧಾನಸಭಾಧ್ಯಕ್ಷ ಖಾದರ್ ಸಾಕಷ್ಟು ಪ್ರಯತ್ನಗಳನ್ನು ನಡೆಸಿದ್ದರು. ಆದರೆ ಅವರ ಪ್ರಯತ್ನಗಳಿಗೆ ನಿರೀಕ್ಷಿತ ಫಲ ದೊರಕದ ಕಾರಣ, ವಿಧಾನಸಭೆ ಕಾರ್ಯಾಲಯದ ಬಜೆಟ್‌ನಲ್ಲಿದ್ದ ಉಳಿಕೆ ಹಣವನ್ನು ಬಳಸಿ ವಿಧಾನಸಭೆ ಪಶ್ಚಿಮ ದ್ವಾರ ನಿರ್ಮಾಣ ಕಾರ್ಯಕ್ಕೆ ಚಾಲನೆ ನೀಡಿದ್ದು, ಕಾಮಗಾರಿ ಮುಕ್ತಾಯ ಹಂತ ತಲುಪಿದೆ. ಈ ಕುರಿತು ಸ್ಪೀಕರ್ ಯು.ಟಿ.ಖಾದರ್, ನಮ್ಮ ಕಾರ್ಯಲಯದ ಬಜೆಟ್‌ನಲ್ಲಿ ಉಳಿಕೆ ಮಾಡಿದ ಹಣವನ್ನು ಬಳಸಲು ನಿಶ್ಚಯಿಸಿ ಉತ್ತಮವಾದ ದ್ವಾರ ತಲೆ ಎತ್ತಿ ನಿಲ್ಲುವಂತಾಗಿದೆ ಎಂದರು.

**ಆಧಾರ**: ಉದಯವಾಣಿ, ದಿನಾಂಕ: 11.06.2024

## 8. ಸರ್ಕಾರಿ ಕಚೇರಿಗಳಲ್ಲಿ ಒತ್ತಡ ಸಹಜ: ಖಾದರ್

ಎಲ್ಲರಿಗೂ ಕೆಲಸದಲ್ಲಿ ಒತ್ತಡ ಇರುವುದು ಸಹಜ ಸರ್ಕಾರಿ ಕಚೇರಿಗಳಲ್ಲಿ ನೂರು ಜನರ ಕೆಲಸವನ್ನು 70 ಜನ ನಿರ್ವಹಿಸುವ ಪರಿಸ್ಥಿತಿಯಲ್ಲಿದೆ. ಆದರೂ, ನಾವು ಸ್ವಪ್ರೇರಣೆಯಿಂದ ಉತ್ತಮವಾಗಿ ಕೆಲಸ ನಿರ್ವಹಿಸಬೇಕು ಎಂದು ವಿಧಾನಸಭಾಧ್ಯಕ್ಷ ಯು.ಟಿ.ಖಾದರ್ ಫರೀದ್ ತಿಳಿಸಿದರು.

ಕರ್ನಾಟಕ ವಿಧಾನಸಭೆಯ ಅಧಿಕಾರಿಗಳಿಗೆ ಒತ್ತಡ ನಿರ್ವಹಣೆ ಮತ್ತು ಸ್ಥಿತಿಸ್ಥಾಪಕತ್ವ ಅಭಿವೃದ್ಧಿ ಹಾಗೂ ಪರಿಣಾಮಕಾರಿ ಸಂವಹನ ಮತ್ತು ನಾಯಕತ್ವ ಅಭಿವೃದ್ಧಿ ಕುರಿತು ವಿಕಾಸಸೌಧದಲ್ಲಿ ಅಯೋಜಿಸಿದ್ದ ತರಬೇತಿ ಶಿಬಿರ ಉದ್ಘಾಟಿಸಿ ಮಾತನಾಡಿದರು. ಈ ತರಬೇತಿಯಿಂದ ಎಲ್ಲರೂ ಅತ್ಯುತ್ತಮ ಅಧಿಕಾರಿಗಳಾಗಿ ಹೊರಹೊಮ್ಮಬೇಕು ಜೊತೆಗೆ ನಿಮ್ಮ ಸಿಬ್ಬಂದಿಗೂ ಈ ಕುರಿತು ತರಬೇತಿ ನೀಡಬೇಕು ಎಂದು ಸಲಹೆ ನೀಡಿದರು.



ಶಿಕ್ಷಣದ ಗುರಿ ಕೇವಲ ಅಂಕಗಳಿಕೆಗೆ ಅಷ್ಟೇ ಅಲ್ಲ. ವಿದ್ಯಾರ್ಥಿಗಳು ಸುಶಿಕ್ಷಿತವಾಗುವುದಲ್ಲದೇ, ಸತ್ಪ್ರಜೆಗಳಾಗಬೇಕು. ಸಮಸ್ಯೆಯಿಲ್ಲದ ಸಂಸಾರವಾಗಲಿ ಊರು, ವ್ಯಕ್ತಿಗಳಾಗಲಿ ಇಲ್ಲ. ಎಲ್ಲರಿಗೂ ಒತ್ತಡ,

ಯೋಚನೆಗಳು ಇರುತ್ತವೆ. ಅದನ್ನು ಮೆಟ್ಟಿ ನಾವು ಉತ್ತಮವಾಗಿ ಕೆಲಸ ನಿರ್ವಹಿಸಬೇಕು ಎಂದರು. ನಾವು ಉತ್ತಮ ಆರೋಗ್ಯವನ್ನು ಕಾಪಾಡಿಕೊಳ್ಳಬೇಕು. ನಮ್ಮಲ್ಲಿರುವ ಒತ್ತಡ ನಿರ್ವಹಣೆ ನಮ್ಮ ಕೈಯಲ್ಲಿದೆ. ಇತರರು ಹೊಗಳಿದಾಗ ನಾವು ಹೇಗೆ ಇಷ್ಟಪಡುತ್ತೇವೆಯೋ ಹಾಗೆಯೇ ನಿಂದಿಸಿದವರನ್ನು ದ್ವೇಷಿಸುತ್ತೇವೆ. ಕೆಲವೊಮ್ಮೆ ನಮ್ಮ ಮನಸ್ಸನ್ನು ಇತರರು ನಿಯಂತ್ರಣದಲ್ಲಿಟ್ಟುಕೊಳ್ಳುತ್ತಾರೆ ಎಂದರು.

ಅಲಯನ್ಸ್ ವಿಶ್ವವಿದ್ಯಾಲಯದ ಡಾ.ತೋಸೇಂದ್ರ ತ್ರಿವೇದಿ ಮಾತನಾಡಿ, ನಾವು ಜೀವನದಲ್ಲಿ ಬೇಕಿಲ್ಲದ ಅಥವಾ ಪ್ರಮುಖವಲ್ಲದ ವಿಷಯಗಳ ಕುರಿತು ಚಿಂತಿಸುತ್ತೇವೆ. ಕೆಲವರಿಗೆ ಕೆಲಸದ ಸ್ಥಳಗಳು, ಕುಟುಂಬ ನಿರ್ವಹಣೆಯಲ್ಲಿ ಒತ್ತಡ ಇರುತ್ತದ್ದಲ್ಲದೇ, ವಿದ್ಯಾರ್ಥಿಗಳಿಗೆ ಪರೀಕ್ಷೆ ಎದುರಿಸಲು ಒತ್ತಡವೆನಿಸುತ್ತದೆ. ಒತ್ತಡ ನಿರ್ವಹಣೆಗೆ ವ್ಯಾಯಾಮ ಬಹಳ ಸಹಕಾರಿ. ಎಲ್ಲರನ್ನು ಒಗ್ಗೂಡಿಸಿ ಸಮರಸದಿಂದ ಕೆಲಸ ನಿರ್ವಹಿಸಿದರೆ ಒತ್ತಡ ಇರುವುದಿಲ್ಲ ಎಂದರು. ವಿಧಾನಸಭೆಯ ಕಾರ್ಯದರ್ಶಿ ಶ್ರೀಮತಿ ಎಂ.ಕೆ.ವಿಶಾಲಾಕ್ಷಿ, ಅಲಯನ್ಸ್ ವಿಶ್ವವಿದ್ಯಾಲಯದ ರಿಜಿಸ್ಟಾರ್ ಜನರಲ್ ಸುರೇಖಾ ಶೆಟ್ಟಿ, ಪ್ರಾಧ್ಯಾಪಕಿ ಉಮಾ ಶ್ರೀಧರ್ ಉಪಸ್ಥಿತರಿದ್ದರು.

**ಆಧಾರ**: ಉದಯವಾಣಿ, ದಿನಾಂಕ: 12.06.2024

## 9. ಸುರಪುರ ನೂತನ ಶಾಸಕರಾಗಿ ನಾಯಕ ಪ್ರಮಾಣ ವಚನ ಸ್ವೀಕಾರ



ಇತ್ತೀಚೆಗೆ ಸುರಪುರ ವಿಧಾನಸಭಾ ಕ್ಷೇತ್ರ ಉಪ ಚುನಾವಣೆಯಲ್ಲಿ ಕಾಂಗ್ರೆಸ್‌ನಿಂದ ಆಯ್ಕೆಯಾದ ಶ್ರೀ ರಾಜಾ ವೇಣುಗೋಪಾಲ ನಾಯಕ ಅವರು ದಿನಾಂಕ:11.06.2024 ರಂದು ವಿಧಾನಸೌಧದಲ್ಲಿ ಶಾಸಕರಾಗಿ ಪ್ರಮಾಣ ವಚನ ಸ್ವೀಕರಿಸಿದರು.

2023ರ ವಿಧಾನಸಭೆ ಚುನಾವಣೆಯಲ್ಲಿ ಕಾಂಗ್ರೆಸ್‌ನಿಂದ ಗೆದ್ದಿದ್ದ ಶ್ರೀ ರಾಜಾ ವೆಂಕಟಪ್ಪ ನಾಯಕ ನಿಧನದಿಂದಾಗಿ ಉಪಚುನಾವಣೆ ಘೋಷಣೆಯಾಗಿತ್ತು. ರಾಯಚೂರು ಲೋಕಸಭಾ ಕ್ಷೇತ್ರಕ್ಕೆ ಮತದಾನ ನಡೆದ ದಿನವೇ ಸುರಪುರ ವಿಧಾನಸಭಾ ಕ್ಷೇತ್ರಕ್ಕೂ ಮತದಾನ ನಡೆದಿತ್ತು. ಬಿಜೆಪಿಯಿಂದ ಶ್ರೀ ರಾಜೂಗೌಡ ಹಾಗೂ ಕಾಂಗ್ರೆಸ್‌ನಿಂದ ಶ್ರೀ ರಾಜಾ ವೆಂಕಟಪ್ಪ ನಾಯಕ ಪುತ್ರ ಶ್ರೀ ವೇಣುಗೋಪಾಲ ನಾಯಕ ನಡುವೆ ಹಣಾಹಣಿ ನಡೆದಿತ್ತು. ಕೊನೆಗೆ ಶ್ರೀ ರಾಜಾ ವೇಣುಗೋಪಾಲ ನಾಯಕ ಗೆದ್ದಿದ್ದರು.

**ಆಧಾರ**: ಉದಯವಾಣಿ, ದಿನಾಂಕ: 12.06.2024

## 10.ಬೆಂಗಳೂರು ವಿವಿ ಕ್ಯಾಂಪಸ್‌ನಲ್ಲಿ ವಾಹನ ಸಂಚಾರ ನಿರ್ಬಂಧಿಸಿ: ರಾಜ್ಯ ಸರ್ಕಾರಕ್ಕೆ ಹೊರಟ್ಟಿ ಪತ್ರ

ವಿಶ್ವವಿದ್ಯಾಲಯ ಜ್ಞಾನಭಾರತಿ ಆವರಣವನ್ನು ವಾಹನ ಸಂಚಾರದಿಂದ ಮುಕ್ತ ಮಾಡಬೇಕು ಎಂದು ವಿಧಾನ ಪರಿಷತ್ ಸಭಾಪತಿಯವರಾದ ಶ್ರೀ ಬಸವರಾಜ ಎಸ್. ಹೊರಟ್ಟಿ ಮನವಿ ಮಾಡಿದ್ದಾರೆ. ಗೃಹ ಸಚಿವ ಡಾ.ಜಿ.ಪರಮೇಶ್ವರ್, ಸಾರಿಗೆ ಸಚಿವ ಶ್ರೀ ರಾಮಲಿಂಗಾರೆಡ್ಡಿ ಮತ್ತು ಬೆಂಗಳೂರು ನಗರ ಪೊಲೀಸ್ ಅಯುಕ್ತ ಬಿ.ದಯಾನಂದ ಅವರಿಗೆ ಪತ್ರ ಬರೆದಿರುವ ಅವರು, ಬೆಂಗಳೂರು ವಿವಿಯ ಜ್ಞಾನಭಾರತಿ ಆವರಣದಲ್ಲಿ ಸಾರ್ವಜನಿಕ ವಾಹನಗಳ ಓಡಾಟದ ಒತ್ತಡದಿಂದಾಗಿ ಪದೇ ಪದೆ ಅಪಘಾತಗಳು ನಡೆಯುತ್ತಿವೆ. ಜೊತೆಗೆ ಶಬ್ದಮಾಲಿನ್ಯ ಹಾಗೂ ಪರಿಸರ ಮಾಲಿನ್ಯ ಉಂಟಾಗುತ್ತಿದೆ. ಇದರಿಂದ ವಿದ್ಯಾರ್ಥಿಗಳು, ಶಿಕ್ಷಕರು ಹಾಗೂ ವಿಶ್ವವಿದ್ಯಾಲಯದ ಶೈಕ್ಷಣಿಕ ಚಟುವಟಿಕೆಗಳಿಗೆ ತುಂಬಾ ತೊಂದರೆಯಾಗುತ್ತಿದೆ ಎಂದು ಗಮನ ಸೆಳೆದಿದ್ದಾರೆ.

ಇತ್ತೀಚಿಗೆ ನಾನು ಬೆಂಗಳೂರು ವಿವಿಗೆ ಭೇಟಿ ನೀಡಿದ ಸಂದರ್ಭದಲ್ಲಿ ವಿವಿಯ ಆವರಣದಲ್ಲಿ ವಾಹನ ದಟ್ಟಣೆ ಇದರಿಂದ ವಿದ್ಯಾರ್ಥಿಗಳಿಗೆ ಉಂಟಾಗುವ ಅನಾನುಕೂಲ ಮತ್ತು ಅಪಘಾತಗಳ ಸಾಧ್ಯತೆ ಕುರಿತು ಖುದ್ದಾಗಿ ಗಮನಿಸಿದ್ದೇನೆ. 2022ರಲ್ಲಿ ಈ ಆವರಣದ ಮುಖ್ಯರಸ್ತೆಯಲ್ಲಿ ವಿದ್ಯಾರ್ಥಿನಿಯೊಬ್ಬರ ಮೇಲೆ ವಾಹನ ಹರಿದು ಅವರು ಮೃತಪಟ್ಟಿದ್ದರು. ಆ ಪ್ರಕರಣ ದೊಡ್ಡ ಪ್ರಮಾಣದಲ್ಲಿ ಸುದ್ದಿಯಾಗಿತ್ತು. ಇದರಿಂದ ವಿಶ್ವವಿದ್ಯಾಲಯಕ್ಕೆ ಮುಜುಗರ ಉಂಟಾಗಿತ್ತು. ಈ ಘಟನೆಯ ಸಂದರ್ಭದಲ್ಲಿ ಅಪಘಾತಗಳನ್ನು ತಡೆಗಟ್ಟುವ ನಿಟ್ಟಿನಲ್ಲಿ ಉನ್ನತ ಪೊಲೀಸ್ ಅಧಿಕಾರಿಗಳೊಂದಿಗೆ ಸಭೆ ನಡೆಸಿ, ಆವರಣದ ಮುಖ್ಯರಸ್ತೆಯುದ್ದಕ್ಕೂ ಫ್ಲೈಓವರ್ ಅಥವಾ ಮುಖ್ಯರಸ್ತೆಯ ಎರಡೂ ಬದಿಗಳಲ್ಲಿ ಕಾಂಪೌಂಡು, ಸೂಕ್ತ ಸ್ಥಳಗಳಲ್ಲಿ ಅಂಡರ್ ಪಾಸ್, ಸ್ಕೈವಾಕ್ ನಿರ್ಮಾಣ ಮಾಡುವಂತೆ ಸಲಹೆ ನೀಡಲಾಗಿತ್ತು. ಆದರೆ ಇದುವರೆಗೂ ಸೂಕ್ತ ಕ್ರಮಗಳನ್ನು ಕೈಗೊಂಡಿಲ್ಲ ಎಂದು ಮನವಿಯಲ್ಲಿ ಉಲ್ಲೇಖಿಸಲಾಗಿದೆ.

**ಆಧಾರ**: ಉದಯವಾಣಿ, ದಿನಾಂಕ: 07.06.2024

## 11. ಹೋಮಿಯೋಪಥಿ ಸಂಶೋಧನೆ ಅಗತ್ಯ

ಹೋಮಿಯೋಪಥಿ ಪದ್ಧತಿಯಲ್ಲೂ ಟೆಲಿ ಮೆಡಿಸಿನ್ ವ್ಯವಸ್ಥೆ ಸಮರ್ಪಕವಾಗಿ ಬಳಕೆಯಾಗಬೇಕು. ಆ ಮೂಲಕ ರೋಗಿಗಳಿಗೆ ಸುಲಭ ಹಾಗೂ ತ್ವರಿತ ಚಿಕಿತ್ಸೆ ದೊರೆಯುವಂತಾಗಬೇಕು ಎಂದು ವಿಧಾನಸಭೆ ಸ್ಪೀಕರ್ ಯು.ಟಿ.ಖಾದರ್ ಹೇಳಿದ್ದಾರೆ. ವಿಶ್ವ ಹೋಮಿಯೋಪಥಿ ದಿನಾಚರಣೆ ಅಂಗವಾಗಿ ವಸಂತನಗರದ ಅಂಬೇಡ್ಕರ್ ಭವನದಲ್ಲಿ ಕರ್ನಾಟಕ ಖಾಸಗಿ ಹೋಮಿಯೋಪಥಿಕ್ ವೈದ್ಯಕೀಯ ಮಹಾವಿದ್ಯಾಲಯಗಳ ಆಡಳಿತ ಸಂಘ ಅಯೋಜಿಸಿದ್ದ ವಿಚಾರ ಸಂಕಿರ್ಣದಲ್ಲಿ ಮಾತನಾಡಿದರು.

ಹೋಮಿಯೋಪಥಿ ಚಿಕಿತ್ಸಾ ಪದ್ಧತಿ ಜರ್ಮನಿ ಮೂಲದ್ದಾದರೂ ಭಾರತದಲ್ಲಿ ಹೆಚ್ಚು ಜನಪ್ರಿಯತೆ ಗಳಿಸಿದೆ. ತನ್ನತನವನ್ನು ಕಾಪಾಡಿಕೊಂಡು ಬರುತ್ತಿದೆ. ಯಾವುದೇ ಅಡ್ಡ ಪರಿಣಾಮಗಳು ಇಲ್ಲದ ಈ ವೈದ್ಯಕೀಯ ಪದ್ಧತಿಯ ಕುರಿತು ನಿರಂತರ ಸಂಶೋಧನೆ ನಡೆಸುವ ಮೂಲಕ ಈ ಕ್ಷೇತ್ರವನ್ನು ಮತ್ತಷ್ಟು ವಿಸ್ತಾರಗೊಳಿಸಲು ಸಾಧ್ಯ. ಇದರಲ್ಲಿ ವಿದ್ಯಾರ್ಥಿಗಳ ಪಾತ್ರ ಹಿರಿದಾಗಿದೆ ಎಂದರು.

**ಆಧಾರ**: ವಿಜಯವಾಣಿ, ದಿನಾಂಕ: 13.06.2024

## 12.ಶಾಸಕರಿಂದ ನಾಟಕ, ಯಕ್ಷಗಾನ, ಮಿಮಿಕ್ರಿ

ಹದಿನಾರನೇ ವಿಧಾನಸಭೆಯ ಅವಧಿಯಲ್ಲಿ **'ಶಾಸಕರ ದಿನ'** ಆಯೋಜಿಸುವ ಸಂಬಂಧ ವಿಧಾನಸಭೆ ಸಚಿವಾಲಯವು ತಯಾರಿ ಆರಂಭಿಸಿದೆ. ಶಾಸಕರಲ್ಲಿನ ಕಲೆ, ಸಾಹಿತ್ಯ, ಸಾಂಸ್ಕೃತಿಕ ಚಟುವಟಿಕೆ, ಕ್ರೀಡೆಯಲ್ಲಿ ಹೊಂದಿರುವ ಆಸಕ್ತಿಯ ಮಾಹಿತಿ ಕಲೆ ಹಾಕುವ ಕಾರ್ಯ ಆರಂಭವಾಗಿದೆ. ಒಂದು ಬಾರಿ ಮಾಹಿತಿ ಕೇಳಿದ್ದು, ಕೆಲವು ಶಾಸಕರು ಮಾತ್ರ ಆಸಕ್ತಿ ತೋರಿಸಿದ್ದಾರೆ. ಹೀಗಾಗಿ ಮತ್ತೊಮ್ಮೆ ತಿಳಿಸಲು ಅವಕಾಶ ಮಾಡಿಕೊಡಲಾಗಿದ್ದು ಜೂನ್ ಅಂತ್ಯದೊಳಗೆ ನೀಡಲು ತಿಳಿಸಲಾಗಿದೆ. ಮೂರು ಬಗೆಯ ಮಾಹಿತಿ ಕೇಳಲಾಗಿದೆ. ಹವ್ಯಾಸಗಳ ವಿವರ ಹಾಗೂ ಅನಭವವನ್ನು ಕೇಳಲಾಗಿದೆ. ನಾಟಕ, ಯಕ್ಷಗಾನ, ಆಶುಭಾಷಣ, ಮಿಮಿಕ್ರಿ, ಏಕಪಾತ್ರಾಭಿನಯ ಮಾಡುವ ಶಾಸಕರಿದ್ದರೆ ಅವರಿಗೆ ವೇದಿಕೆಯಲ್ಲಿ ಅವಕಾಶ ನೀಡಲಾಗುತ್ತದೆ. ಸಾಂಸ್ಕೃತಿಕ ಚಟುವಟಿಕೆಗಳ ಪೈಕಿ ಸಂಗೀತ (ಕರ್ನಾಟಕ ಶಾಸ್ತ್ರೀಯ, ಹಿಂದೂಸ್ತಾನಿ), ಜಾನಪದಗೀತೆ, ಭಾವಗೀತೆ ಮತ್ತು ಚಿತ್ರಗೀತೆ ಹಾಡುವವರಿದ್ದರೆ ಮತ್ತು ನೃತ್ಯ ಮಾಡುವವರಿದ್ದರೆ ಅದರ ಮಾಹಿತಿಯನ್ನೂ ಸಹ ಬಯಸಲಾಗಿದೆ. ಕ್ರೀಡಾಕೂಟ ಅಯೋಜಿಸುವ ಉದ್ದೇಶವಿದ್ದು, ಕಬ್ಬಡ್ಡಿ, ಈಜು, ಕುಸ್ತಿ, ಫುಟ್‌ಬಾಲ್, ಕ್ರಿಕೆಟ್, ಕೇರಂ, ಚೆಸ್, ಬಾಸ್ಕೆಟ್ ಬಾಲ್, ಥ್ರೋಬಾಲ್, ಟೇಬಲ್ ಟೆನಿಸ್, ಬ್ಯಾಡ್‌ಮಿಟನ್, ವಾಲಿಬಾಲ್, ಅಥ್ಲೆಟಿಕ್ಸ್, ಹಾಕಿ, ಜಿಗಿತ, ಗುಂಡು ಎಸೆತದ ಬಗ್ಗೆ ಆಸಕ್ತಿ ಇದ್ದರೆ ತಿಳಿಸುವಂತೆ ಕೋರಲಾಗಿದೆ. ಶಾಸಕರ ಆಸಕ್ತಿ ನೋಡಿಕೊಂಡು ಕ್ರೀಡೆ, ಸಾಂಸ್ಕೃತಿಕ ಕಾಯಕ್ರಮ ಆಯೋಜಿಸಲು ಉದ್ದೇಶಿಸಲಾಗಿದೆ.

224 ಶಾಸಕರ ಆಸಕ್ತಿಯ ಮಾಹಿತಿ ಕ್ರೋಢೀಕರಿಸಿ ಕಾರ್ಯಕ್ರಮ ರೂಪಿಸಲಾಗುತ್ತದೆ. ವೈಯಕ್ತಿಕ ಸ್ಪರ್ಧೆ, ಗುಂಪು ಸ್ಪರ್ಧೆಗಳನ್ನು ಪ್ರತ್ಯೇಕವಾಗಿ ಸಂಘಟಿಸಲಾಗುತ್ತದೆ. ಕೊನೆಯಲ್ಲಿ ಸಾಂಸ್ಕೃತಿಕ ಸ್ಪರ್ಧೆ ಮತ್ತು ಮನರಂಜನಾ ಕಾರ್ಯಕ್ರಮ ಆಯೋಜಿಸಲಾಗಿದೆ. ಮಾಹಿತಿ ಬಂದ ನಂತರ ಕಾರ್ಯಕ್ರಮದ ದಿನಾಂಕ ಹಾಗೂ ಸ್ವರೂಪ ನಿರ್ಧಾರವಾಗಲಿದೆ ಎಂದು ವಿಧಾನಸಭೆ ಸ್ಪೀಕರ್ ಯು.ಟಿ.ಖಾದರ್ ತಿಳಿಸಿದ್ದಾರೆ. ಹಲವು ಶಾಸಕರಿಗೆ ಯಕ್ಷಗಾನ, ನಾಟಕ ಮಾಡಬೇಕೆಂದಿರುತ್ತದೆ. ಒಂದೇ ರೀತಿಯ ಆಸಕ್ತಿ ಇರುವವರನ್ನು ಒಟ್ಟು ಮಾಡಿ ತಯಾರಿಗೆ ಅವಕಾಶ ಮಾಡಿಕೊಡಲಾಗುತ್ತದೆ. ಕೊನೆ ದಿನ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಅವರಿಗೆ ಪ್ರದರ್ಶನಕ್ಕೆ ಅವಕಾಶ ಇರಲಿದೆ ಎಂದು ಹೇಳಿದರು. ಶಾಸಕರಾಗಿದ್ದವರು ಸಭೆ ಸಮಾರಂಭಗಳಲ್ಲಿ ಕಾರ್ಯಕ್ರಮ ವೀಕ್ಷಣೆಗೆ ಸೀಮಿತವಾಗಿ ಬಿಡುತ್ತಾರೆ, ಭಾಷಣ ಮಾಡಿ ವೇದಿಕೆ ತೆರವು ಮಾಡಬೇಕಾಗುತ್ತದೆ. ಶಾಸಕರ ದಿನ ಆಚರಣೆ ಮೂಲಕ ಶಾಸಕರ ಪ್ರತಿಭೆ ಪ್ರದರ್ಶನಕ್ಕೆ ಅವಕಾಶ ಸಿಕ್ಕಂತಾಗುತ್ತದೆ. ಅವರ ಅಭಿರುಚಿಯೂ ತಿಳಿಯಲಿದೆ ಎಂಬುದು ಕಾರ್ಯಕ್ರಮದ ಒಟ್ಟಾರೆ ತಿರುಳಾಗಿದೆ.

**ಆಧಾರ**: ವಿಜಯವಾಣಿ, ದಿನಾಂಕ: 15.06.2024

## 13. ಯತೀಂದ್ರ, ಸಿ.ಟಿ.ರವಿ ಸೇರಿ 17 ಎಂಎಲ್‌ಸಿಗಳು ಪ್ರಮಾಣ ವಚನ



ಸಚಿವ ಬೋಸರಾಜು, ಬಿಜೆಪಿಯ ಸಿ.ಟಿ.ರವಿ, ಕಾಂಗ್ರೆಸ್‌ನ ಯತೀಂದ್ರ ಸಿದ್ದರಾಮಯ್ಯ ಸೇರಿದಂತೆ ವಿಧಾನಸಭೆ, ಶಿಕ್ಷಕರ ಕ್ಷೇತ್ರ ಮತ್ತು ಪದವೀಧರ ಕ್ಷೇತ್ರಗಳಿಂದ ರಾಜ್ಯ ವಿಧಾನ ಪರಿಷತ್ತಿಗೆ ಚುನಾಯಿತರಾಗಿರುವ 17 ನೂತನ ಸದಸ್ಯರು ದಿನಾಂಕ:24.06.2024 ರಂದು ಪ್ರಮಾಣ ವಚನ ಸ್ವೀಕರಿಸಿದರು. ನೂತನ ಸದಸ್ಯರಿಗೆ ವಿಧಾನಪರಿಷತ್ ಸಭಾಪತಿ ಶ್ರೀ ಬಸವರಾಜ ಎಸ್. ಹೊರಟ್ಟಿ ಅವರು ವಿಧಾನಸೌಧದ ಬ್ಯಾಂಕ್ವೆಟ್ ಹಾಲ್‌ನಲ್ಲಿ ಪ್ರತಿಜ್ಞಾವಿಧಿ ಬೋಧಿಸಿದರು.

ಕಾಂಗ್ರೆಸ್‌ನ ಸಚಿವ ಮುಖ್ಯಮಂತ್ರಿಗಳ ಶ್ರೀ ಬೋಸರಾಜು, ರಾಜಕೀಯ ಕಾರ್ಯದರ್ಶಿ, ಶ್ರೀ ಗೋವಿಂದರಾಜ್, ಶ್ರೀ ಐವನ್ ಡಿಸೋಜಾ, ಶ್ರೀ ಯತೀಂದ್ರ ಸಿದ್ದರಾಮಯ್ಯ, ಶ್ರೀ ಡಿ.ಟಿ. ಶ್ರೀನಿವಾಸ್, ಶ್ರೀ ವಸಂತ್ ಕುಮಾರ್, ಶ್ರೀ ರಾಮೋಜಿಗೌಡ, ಬಿಜೆಪಿಯ ಶ್ರೀ ಸಿ.ಟಿ.ರವಿ, ಡಾ.ಧನಂಜಯ ಸರ್ಜಿ, ಡಾ.ಚಂದ್ರಶೇಖರ ಪಾಟೀಲ್, ಜೆಡಿಎಸ್‌ನ ಶ್ರೀ ಜವರಾಯಿಗೌಡ, ಶ್ರೀ ಎಸ್.ಎಲ್.ಭೋಜೇಗೌಡ, ಶ್ರೀ ವಿವೇಕಾನಂದ ಸದಸ್ಯರ ಪ್ರಮಾಣ ದೇವರು/ಭಗವಂತನ ಹೆಸರಲ್ಲಿ ಪ್ರಮಾಣ ವಚನ ಸ್ವೀಕರಿಸಿದರು.




ಉಳಿದಂತೆ ಕಾಂಗ್ರೆಸ್‌ನ ಶ್ರೀಮತಿ ಬಲ್ಕೀಸ್ ಬಾನು ಅಲ್ಲಾಹುವಿನ ಹೆಸರಲ್ಲಿ, ಶ್ರೀ ಜಗದೇವ ಗುತ್ತೇದಾರ್ ಬುದ್ಧ, ಬಸವ, ಅಂಬೇಡ್ಕರ್ ಹೆಸರಲ್ಲಿ, ಬಿಜೆಪಿಯ ಶ್ರೀ ರವಿಕುಮಾರ್ ಭಾರತ ಮಾತೆ ಹೆಸರಲ್ಲಿ, ಶ್ರೀ ಎಂ.ಜಿ.ಮೂಳೆ ಭಗವಂತ ಮತ್ತು ಛತ್ರಪತಿ ಶಿವಾಜಿ ಹೆಸರಲ್ಲಿ ಪ್ರತಿಜ್ಞಾ ವಿಧಿ ಸ್ವೀಕರಿಸಿದರು. ಸಂಪ್ರದಾಯದ ಪ್ರಕಾರ ವಿಧಾನ ಪರಿಷತ್ ನಡಾವಳಿ, ಸಂವಿಧಾನ, ಇತರ ಮಾಹಿತಿಗಳ ಬುಕ್‌ಲೆಟ್ ಇರುವ ಸೂಟ್‌ಕೇಸ್‌ನ್ನು ಸಭಾಪತಿ ಶ್ರೀ ಬಸವರಾಜ ಎಸ್. ಹೊರಟ್ಟಿ ಅವರು ಎಲ್ಲ ನೂತನ ಸದಸ್ಯರಿಗೂ ನೀಡಿದರು.

*ಆಧಾರ: ಕನ್ನಡ ಪ್ರಭ, ದಿನಾಂಕ: 25.06.2024*

# ಭಾಗ– 2

# ಕರ್ನಾಟಕ ವಿಧಾನಮಂಡಲದ ಕಾರ್ಯಚಟುವಟಿಕೆಗಳು

**ವಿಧಾನಮಂಡಲದ/ವಿಧಾನಸಭೆಯ ವಿವಿಧ ಸ್ಥಾಯಿ ಸಮಿತಿಗಳ ಸಭೆಗಳನ್ನು ನಡೆಸಲು ಸನ್ಮಾನ್ಯ ಸಭಾಧ್ಯಕ್ಷರು ಅನುಮತಿ ನೀಡಿರುವ ಬಗ್ಗೆ ಲಘು ಪ್ರಕಟಣೆ.**

# ಕರ್ನಾಟಕ ವಿಧಾನಸಭೆ

## (ಹದಿನಾರನೇ ವಿಧಾನಸಭೆ)

## ಲಘು ಪ್ರಕಟಣೆ ಭಾಗ–2

(ಸಾಂಸದಿಕ ಹಾಗೂ ಇತರೆ ವಿಷಯಗಳಿಗೆ ಸಂಬಂಧಿಸಿದ ಸಾಮಾನ್ಯ ಮಾಹಿತಿ)

**ಬುಧವಾರ, ದಿನಾಂಕ 15 ನೇ ಮೇ, 2024**

## ಸಂಖ್ಯೆ: 91

ಲೋಕಸಭೆಯ ಸಾರ್ವತ್ರಿಕ ಚುನಾವಣೆಯ ಪ್ರಯುಕ್ತ ದಿನಾಂಕ:21.03.2024ರಿಂದ ಚುನಾವಣಾ ಪ್ರಕ್ರಿಯೆಯು ಮುಕ್ತಾಯಗೊಳ್ಳುವವರೆಗೂ ವಿಧಾನಮಂಡಲದ/ವಿಧಾನಸಭೆಯ ವಿವಿಧ ಸ್ಥಾಯಿ ಸಮಿತಿಗಳ ಸಭೆಗಳನ್ನು ನಡೆಸದಂತೆ ಲಘು ಪ್ರಕಟಣೆ ಸಂಖ್ಯೆ:79ರಲ್ಲಿ ತಿಳಿಸಲಾಗಿತ್ತು. ಆದರೆ, ಕರ್ನಾಟಕದಲ್ಲಿ ಈಗಾಗಲೇ ಎರಡು ಹಂತಗಳ ಚುನಾವಣೆಯು ಮುಕ್ತಾಯಗೊಂಡಿರುವುದರಿಂದ ವಿಧಾನಮಂಡಲದ/ವಿಧಾನಸಭೆಯ ವಿವಿಧ ಸ್ಥಾಯಿ ಸಮಿತಿಗಳ ಸಭೆಗಳನ್ನು ನಡೆಸಲು ಸನ್ಮಾನ್ಯ ಸಭಾಧ್ಯಕ್ಷರು ಅನುಮತಿ ನೀಡಿರುತ್ತಾರೆಂದು ಈ ಮೂಲಕ ಎಲ್ಲಾ ಮಾನ್ಯ ಸದಸ್ಯರುಗಳಿಗೆ ತಿಳಿಯಪಡಿಸಲಾಗಿದೆ.

**ಎಂ.ಕೆ. ವಿಶಾಲಾಕ್ಷಿ**
ಕಾರ್ಯದರ್ಶಿ,
ಕರ್ನಾಟಕ ವಿಧಾನಸಭೆ.

**ವಿಧಾನಸಭೆಯ ಎಲ್ಲಾ ಮಾನ್ಯ ಸದಸ್ಯರುಗಳಿಗೆ**

# ಭಾಗ–3

# ಸಂಸತ್ ಸುದ್ದಿಗಳು

## 1. 12 Rajya Sabha members sworn in, Sonia Gandhi set to enter House

Rajya Sabha Chairman Jagdeep Dhankhar on Wednesday swore in 12 newly elected members of the Rajya Sabha in the presence of deputy chairman Harivansh.

An official statement said Sri. Dharmshila Gupta, Sri. Manoj Kumar Jha, Sri. Sanjay Yadav, Sri. Govindbhai Laljibhai Dholakia, Sri. Subhash Chander, Sri. Harsh Mahajan, Sri. G.C.Chandrashekhar, Sri. L.Murugan, Sri. Ashok Singh, Sri. Chandrakant Handore, Smt. Medha Vishram Kulkarni and Sri. Sadhna Singh were sworn in.

From April 3, their Rajya Sabha tenure begins for the next six years. Of the twelve MPs who took oath, seven are from the BJP, three from Congress and two from the Rashtriya Janata Dal.

Three of the 12 MPs are from Bihar, 2 each from Maharashtra and Madhya Pradesh and one each from Gujarat, Haryana, Himachal Pradesh, Karnataka and Uttar Pradesh.

Earlier, the terms of 54 members of the Rajya Sabha ended on Tuesday and Wednesday (April 2 and 3). Among them 49 completed their tenure on Tuesday, five including former Prime Minister Manmohan Singh, completed their terms on Wednesday.

Of the 54 Rajya Sabha MPs whose terms ended on Tuesday and Wednesday, 9 are Union ministers. Dr Manmohan Singh's Rajya Sabha term ended on Wednesday after the former PM remained active in his 33-year-long parliamentary career.

Sonia Gandhi is all set to become a member of the Upper House for the first time from Rajasthan, filling the seat that will fall vacant after 91-year-old Singh completed his tenure on April 3.

Official sources said the terms of 7 Union ministers. Sri. Dharamendra Pradhan, Sri. Mansukh Mandaviya, Sri. Purushottam Rupala, Sri.Rajeev Chandrasekhar, Sri. V. Muraleedharan, Sri.Narayan Rane and Sri. L.Murugan ended their RS terms on Tuesday. The term of environment minister Bhupendra Yadav and railway minister Sri. Ashwini Vaishnaw ended on Wednesday. Vaishnaw has already been elected for the next term in Rajya Sabha.

Indian Express:04.04.2024

## 2. ಸ್ಪೀಕರ್ ಪುನರಾಯ್ಕೆ 20 ವರ್ಷಗಳಲ್ಲಿ ಇದೇ ಮೊದಲು

ಲೋಕಸಭಾ ಸ್ಪೀಕರ್ ಶ್ರೀ ಓಂ ಪ್ರಕಾಶ್ ಬಿರ್ಲಾ ರಾಜಸ್ಥಾನದ ಕೋಟಾ ಕ್ಷೇತ್ರದಿಂದ ಪುನರಾಯ್ಕೆಯಾಗಿದ್ದಾರೆ. ಕಳೆದ 20ವರ್ಷಗಳಲ್ಲಿ ಲೋಕಸಭೆಯ ಸ್ಪೀಕರ್‌ರೊಬ್ಬರು ಪುನರಾಯ್ಕೆ ಆಗುತ್ತಿರುವುದು ಇದೇ ಮೊದಲು. 1996 ರಿಂದ 1998ರವರೆಗೆ ಲೋಕಸಭಾ ಸ್ಪೀಕರ್ ಆಗಿದ್ದ ಶ್ರೀ ಪಿ.ಎ.ಸಂಗ್ಮಾ 1998ರಲ್ಲಿ ಮೇಘಾಲಯದ ತುರಾ ಕ್ಷೇತ್ರದಿಂದ ಪುನರಾಯ್ಕೆಯಾಗಿದ್ದರು.

ತೆಲುಗುದೇಶಂ ಸಂಸದ ಶ್ರೀ ಜಿ.ಎಂ.ಸಿ.ಬಾಲಯೋಗಿ ಅವರು ಲೋಕಸಭಾ ಸ್ಪೀಕರ್ ಆಗಿದ್ದರೂ 2002ರಲ್ಲಿ ಸಂಭವಿಸಿದ್ದ ಹೆಲಿಕಾಪ್ಟರ್ ದುರಂತದಲ್ಲಿ ದುರ್ಮರಣಕ್ಕೀಡಾಗಿದ್ದರು. ಶಿವಸೇನೆಯ

ಶ್ರೀ ಮನೋಹರ್ ಜೋಷಿ ಅನಂತರ ಲೋಕಸಭಾ ಸ್ಪೀಕರ್ ಆದರೂ ಮುಂಬೈ ಉತ್ತರ ಕ್ಷೇತ್ರದಲ್ಲಿ ಕಾಂಗ್ರೆಸ್‌ನ ಶ್ರೀ ಏಕನಾಥ್ ಗಾಯಕವಾಡ್‌ಗೆ ಸೋತಿದ್ದರು. 2004ರಲ್ಲಿ ಸಿಪಿಎಂ ಶ್ರೀ ಸೋಮನಾಥ್ ಚಟರ್ಜಿ, ಬೋಲ್‌ಪುರ ಕ್ಷೇತ್ರದಿಂದ ಗೆದ್ದು ಲೋಕಸಭಾ ಸ್ಪೀಕರ್ ಆಗಿದ್ದರೂ ತಮ್ಮ ಪಕ್ಷದೊಳಗಿನ ಭಿನ್ನಮತದಿಂದಾಗಿ 2009ರ ಲೋಕಸಭಾ ಚುನಾವಣೆಗೆ ಮೊದಲು ರಾಜಕೀಯದಿಂದ ನಿವೃತ್ತಿಯಾಗಿದ್ದರು.

**ಆಧಾರ**: ಸಂಯುಕ್ತ ಕರ್ನಾಟಕ, ದಿನಾಂಕ: 05.06.2024

## 3. ಹೊಸಮುಖಗಳ 18ನೇ ಲೋಕಸಭೆ

18ನೇ ಲೋಕಸಭೆಗೆ 7 ಹಂತಗಳಲ್ಲಿ ಚುನಾವಣೆ ನಡೆದು 543 ಸಂಸದರ ಆಯ್ಕೆಯಾಗಿದೆ. ಇವರಲ್ಲಿ ಶೇ.55 ರಷ್ಟು ಹೊಸಮುಖಗಳೇ ಆಗಿವೆ ಎಂಬುದೇ 18ನೇ ಲೋಕಸಭೆಯ ವಿಶೇಷ. ನೂತನ ಸಂಸತ್ ಭವನದಲ್ಲಿ ಪೂರ್ಣಾವಧಿ ಕಲಾಪ ನಡೆಸಲಿರುವ 18ನೇ ಲೋಕಸಭೆಯಲ್ಲಿ 280 ಹೊಸ ಮುಖಗಳಿರಲಿವೆ. ಈ ನೂತನ ಸಂಸದರು ಮೊದಲ ಬಾರಿಗೆ ಸಂಸತ್ತಿನ ಕೆಳಮನೆ ಪ್ರವೇಶಿಸುತ್ತಿದ್ದಾರೆ ಎಂಬುದು ಗಮನಾರ್ಹ. ಇವರಲ್ಲಿ ಮಾಜಿ ಮುಖ್ಯಮಂತ್ರಿ, ಚಲನಚಿತ್ರ ತಾರೆಯರು, ಹೈಕೋರ್ಟ್ ಮಾಜಿ ನ್ಯಾಯಮೂರ್ತಿಗಳು, ರಾಜಕೀಯ ಪಕ್ಷಗಳ ಕಾರ್ಯಕರ್ತರೂ ಇದ್ದಾರೆ ಎಂಬುದು ಉಲ್ಲೇಖಾರ್ಹ ಸಂಗತಿಯಾಗಿದೆ.

ಉತ್ತರ ಪ್ರದೇಶದಿಂದ 18ನೇ ಲೋಕಸಭೆ ಪ್ರವೇಶಿಸುತ್ತಿರುವವರಲ್ಲಿ 45 ಮಂದಿ ಮೊದಲ ಬಾರಿಗೆ ಸಂಸತ್ ಸದಸ್ಯರಾದವರು ಇದ್ದಾರೆ. ಅಮೇಥಿ ಕ್ಷೇತ್ರದಲ್ಲಿ ಸಚಿವೆ ಸ್ಮೃತಿ ಇರಾನಿ ಅವರನ್ನು 1.50 ಲಕ್ಷಕ್ಕೂ ಅಧಿಕ ಮತಗಳಿಂದ ಸೋಲಿಸಿದ ಕಾಂಗ್ರೆಸ್ ನಾಯಕಿ ಸೋನಿಯಾ ಗಾಂಧಿ ಕುಟುಂಬದ ಆಪ್ತ ಕಿಶೋರಿ ಲಾಲ್ ಶರ್ಮಾ, ಸಮಾಜವಾದಿ ಪಕ್ಷದ ನಾಯಕ ಚಂದ್ರಶೇಖರ್ ಆಜಾದ್ ಸೇರಿದಂತೆ ಅನೇಕ ಸಂಸದರು ಇದೇ ಮೊದಲ ಬಾರಿಗೆ ಲೋಕಸಭೆ ಪ್ರವೇಶಿಸುತ್ತಿದ್ದಾರೆ.

ಪುನರಾಯ್ಕೆಯಾದ ಸಂಸದರಲ್ಲಿ ಎಂಟು ಮಂದಿ ತಮ್ಮ ಕ್ಷೇತ್ರಗಳನ್ನು ಬದಲಾಯಿಸಿದ್ದರು ಮತ್ತು ಒಬ್ಬರು ಎರಡು ಕ್ಷೇತ್ರಗಳಿಂದ ಗೆದ್ದಿದ್ದಾರೆ. 17ನೇ ಲೋಕಸಭೆಯಲ್ಲಿ ಒಂಬತ್ತು ಮರು ಚುನಾಯಿತ ಸಂಸದರು ಬೇರೆ ಪಕ್ಷವನ್ನು ಪ್ರತಿನಿಧಿಸಿದರೆ, ಎಂಟು ಮಂದಿ ತಮ್ಮ ಹಿಂದಿನ ಪಕ್ಷದಿಂದ ಬೇರ್ಪಟ್ಟ ಬಣವನ್ನು ಪ್ರತಿನಿಧಿಸಿದ್ದಾರೆ. ಚುನಾವಣೆಗೆ ಸ್ಪರ್ಧಿಸಿದ್ದ 53 ಸಚಿವರ ಪೈಕಿ 35 ಮಂದಿ ಗೆದ್ದಿದ್ದಾರೆ. ಹೊಸ ಲೋಕಸಭೆಯಲ್ಲಿ 240 ಸ್ಥಾನಗಳೊಂದಿಗೆ ಭಾರತೀಯ ಜನತಾ ಪಕ್ಷ(ಬಿಜೆಪಿ) ಅತಿದೊಡ್ಡ ಪಕ್ಷವಾಗಿ ಹೊರಹೊಮ್ಮಿದೆ. ಬಿಜೆಪಿಯ ನಂತರ ದೊಡ್ಡ ಪಕ್ಷವೆಂದರೆ ಕಾಂಗ್ರೆಸ್. ಇದು 99 ಸ್ಥಾನಗಳೊಂದಿಗೆ ಎರಡನೇ ಸ್ಥಾನದಲ್ಲಿದ್ದರೆ, ಸಮಾಜವಾದಿ ಪಕ್ಷವು 37 ಸ್ಥಾನಗಳೊಂದಿಗೆ ನಂತರದ ಸ್ಥಾನದಲ್ಲಿದೆ.

**ಆಧಾರ**:ವಿಶ್ವವಾಣಿ ದಿನಾಂಕ:07.06.2024

## 4. 10 ವರ್ಷಗಳ ಬಳಿಕ ಲೋಕಸಭೆಗೆ ವಿಪಕ್ಷ ನಾಯಕ

ಪ್ರತಿಪಕ್ಷಗಳ ಐಎನ್‌ಡಿಐಎ ಕೂಟದ ಪಕ್ಷಗಳ ಸದಸ್ಯರ ಸಂಖ್ಯೆ 18ನೇ ಲೋಕಸಭೆಯಲ್ಲಿ ಹೆಚ್ಚಿರುವುದರೊಂದಿಗೆ ಸದನ 10 ವರ್ಷಗಳ ಬಳಿಕ ಪ್ರತಿಪಕ್ಷ ನಾಯಕರನ್ನು ಪಡೆಯಲು ರಂಗ ಸಜ್ಜುಗೊಂಡಿದೆ. ಇಂಡಿಯಾ ಮೈತ್ರಿಕೂಟ ಸದಸ್ಯ ಬಲ ಗಣನೀಯವಾಗಿ ಏರಿಕೆಯಾಗಿರುವುದು ಇದಕ್ಕೆ

ಕಾರಣ. ಅಲ್ಲದೆ, ಕಳೆದ ಐದು ವರ್ಷಗಳಿಂದ ಲೋಕಸಭೆಯಲ್ಲಿ ಖಾಲಿ ಇರುವ ಡೆಪ್ಯೂಟಿ ಸ್ಪೀಕರ್ ಹುದ್ದೆಗೆ ಚುನಾವಣೆ ನಡೆಯಬಹುದು ಎಂದು ವಿಪಕ್ಷಗಳು ಆಶಾವಾದ ವ್ಯಕ್ತಪಡಿಸಿವೆ. ಜೂನ್ 5ರಂದು ವಿಸರ್ಜನೆಗೊಂಡ 17ನೇ ಲೋಕಸಭೆ ಪೂರ್ತಿ ಐದು ವರ್ಷ ಕಾಲ ಡೆಪ್ಯೂಟಿ ಸ್ಪೀಕರ್ ಇಲ್ಲದೇ ಕಾರ್ಯನಿರ್ವಹಿಸಿದೆ. ಸಂಸತ್ತಿನ ಕೆಳಮನೆಗೆ, ಸತತ ಎರಡನೇ ಅವಧಿಗೆ ಪ್ರತಿಪಕ್ಷ ನಾಯಕ ಇರಲಿಲ್ಲ ಎನ್ನುವುದೂ ಗಮನಾರ್ಹ.

ಚುನಾವಣೆ ಮುಗಿದು ಹೊಸ ಲೋಕಸಭೆ ರಚನೆ ಆಗಿರುವುದರಿಂದ ಇದೀಗ ವಿಪಕ್ಷ ನಾಯಕರನ್ನು ಪಡೆಯಲಿರುವ ಕೆಳಮನೆಯತ್ತ ಎಲ್ಲರ ಕಣ್ಣು ನೆಟ್ಟಿದೆ. ಸದನ ಉಪ ಸಭಾಧ್ಯಕ್ಷರನ್ನು ಹೊಂದುವ ನಿರೀಕ್ಷೆಯೂ ಚಿಗುರಿದೆ. ಸಾಮಾನ್ಯವಾಗಿ ಡೆಪ್ಯೂಟಿ ಸ್ಪೀಕರ್ ಹುದ್ದೆ ವಿಪಕ್ಷಗಳಿಗೆ ಸಿಗುತ್ತದೆ.

ಸಾಕಷ್ಟು ಸಂಖ್ಯಾಬಲ ಹೊಂದಿರದಿದ್ದ ಕಾರಣ ಹಿಂದಿನೆರಡೂ ಲೋಕಸಭೆಗಳಲ್ಲಿ ಅಧಿಕೃತವಾಗಿ ಪ್ರತಿಪಕ್ಷ ನಾಯಕರ ಆಯ್ಕೆಗೆ ಅವಕಾಶ ಇರಲಿಲ್ಲ. ಈ ಬಾರಿ 99 ಸ್ಥಾನ ಗೆದ್ದಿರುವ ಕಾಂಗ್ರೆಸ್ ಮುಖಂಡ ರಾಹುಲ್ ಗಾಂಧಿ ಈ ಸ್ಥಾನದ ಜವಾಬ್ದಾರಿ ವಹಿಸಿಕೊಳ್ಳಬೇಕೆಂಬುದು ಐಎನ್‌ಡಿಐಎ ಕೂಟದ ಬಹುತೇಕ ಸದಸ್ಯ ಪಕ್ಷಗಳ ಅಭಿಮತವಾಗಿದೆ. ಲೋಕಸಭೆ ಸ್ಪೀಕರ್ ಮತ್ತು ಡೆಪ್ಯೂಟಿ ಸ್ಪೀಕರ್ ಹುದ್ದೆ ತೆರವಾದ ನಂತರ ಆದಷ್ಟು ಬೇಗ ಅವುಗಳನ್ನು ತುಂಬಬೇಕೆಂದು ಸಂವಿಧಾನದ 93ನೇ ವಿಧಿ ಹೇಳುತ್ತದೆ.

**ಆಧಾರ:ವಿಜಯವಾಣಿ ದಿನಾಂಕ:10.06.2024**

## 5. Mahtab,7-term MP, is pro-tem Speaker; first session from June 24

Seven- term parliamentarian Sri. Bhartruhari Mahtab, who quit BJD and won the Lok Sabha poll from Cuttack as a BJP nominee, was appointed pro-tem speaker of Lok Sabha on Thursday.

Parliamentary affairs minister Sri. Kiren Rijiju said Sri. Mahtab would perform the duties of the Lok Sabha presiding officer till the election of the speaker.

Newly- elected members of the 18$^{th}$ Lok Sabha will take oath before the pro-tem speaker, who will be assisted by a panel comprising Congress's K.Suresh, DMK's Sri. T.R.Balu BJP members Sri. Radha Mohan Singh and Sri. Faggan Singh Kulaste and TMC's Sri. Sudip Bandyopadhyay.

The first session of the 18$^{th}$ Lok Sabha will begin on June 24 Newly elected members will take oath June 24-25. The election of the speaker is scheduled on June 26.

In 2014, Congress MP Sri. Kamal Nath was chosen as pro-tem speaker while in 2019, BJP's Sri. Virender Kumar was given the responsibility after Smt. Maneka Gandhi, the then senior most parliamentarian, was said to have refused.

A former BJD MP for six terms from Cuttack, Sri. Mahtab joined BJP this year and retained his seat. He will be administered oath by President Smt. Droupadi Murmu. His role as pro-tem speaker would be limited to overseeing the oath taking of all MPs on the first two days.

Congress accused the govt of bias in naming Sri. Mahtab as pro-tem speaker and said the ceremonial position should have gone to the senior most MP, Sri. K.Suresh of Congress, who is in his eighth term and is also a senior Dalit leader.

Party general secretary Sri. K C Venugopal said it was matter of immense pride for Congress that Suresh a leader from the marginalized sections, had become an eight term MP. He demanded the govt clarify the reasons that disqualified Suresh from the pro-tem speaker's post and asked if there are deeper issues influencing the decision beyond merit and seniority.

Party spokesman Jairam Ramesh said the convention was that the senior most MP was appointed the pro-tem speaker.

**Courtesy:** Times of India, Date: 21.06.2024.

## 6. 18th Lok Sabha opens with 262 MPs taking oath on the first day

The first session of the 18th Lok sabha began on 24.06.2024 with Prime Minister Narendra Modi taking oath as a member of the newly constituted Lower House of parliament.

On the first day, as many as 262 members took their oaths or affirmations. As the Leader of the House Mr. Modi was the first to take oath, in Hindi, amidchats of Jai Shri Ram from the Treasury benches.

Mr.Modi who is serving his third term as Prime Minister, took oath as the Lok Sabha member for Varanasi. While the PM was taking the oath, Opposition members rose to their feet and waved copies of the Constitution.

Congress leader Rahul Gandhi also displayed a copy of the constitution but did not get up. Opposition members greeted Education Minister Dharmendra Pradhan with slogans of NEET.

The proceedings were chaired by protem Speaker Bhartruhari Mahtab, who invited the panel of chair persons to take oath soon after Mr. Modi. However Opposition leader Sri. K. Suresh (congress), Sri. T.R. Balu (DMK) and Sri. Sudip Bandyapadhhaya (Trinamool Congress) did not turn up.

Mr. Mahtab was administered his oath as a member of the new Lok Sabha and pro-tem Speaker aat the Sri. Rashtrapati Bhavan by president Smt. Droupadi Murmu. The Congress and INDIA had objected to Mr. Mahtab's appointment, saying eight-term member Mr. Suresh, a Dalit leader, has been overlooked.

Before the startm, in a show of strength, INDIA bloc MP's Assembled outside the Parliament building holding copies of the Constitution and shouted Save democracy, Save the Constitution Leaders including Congress president Sri. Mallikarjun Kharge former party chiefs Smt. Sonia Gandhi and Sri. Rahul Gandhi Mr. Bandyopadhyay, and Mr. Balu gathered at the spot where Mahatma Gandhi's statue once stood in the Parliament complex.

Three members missed the oath ceremony despite their names being called. One of them is Abdul Rashid Sheikh, know as Engineer Rashid, who could not take oath as he has been in jail since 2019 after being charged by th NIA in a terror funding case. The other two MOs are Independent member Pappu Yadav and Ysr congress party's Sri. Y.S Avinash Reddy.

**Courtesy:** The Hindu, Date: 25.06.2024.

## 7. ಕನ್ನಡ ಭಾಷೆಯಲ್ಲೇ ದೇವರ ಹೆಸರಲ್ಲಿ ಪ್ರಮಾಣ ಸ್ವೀಕರಿಸಿದ ಸಂಸದರು

ಬೆಂಗಳೂರು ನಗರ ಮತ್ತು ಗ್ರಾಮಾಂತರ ಕ್ಷೇತ್ರದ ನಾಲ್ವರು ಸಂಸದರು ಲೋಕಸಭೆಯಲ್ಲಿ ಸೋಮವಾರ ದೇವರು ಹಾಗೂ ಮತದಾರರ ಹೆಸರಿನಲ್ಲಿ ಕನ್ನಡ ಭಾಷೆಯಲ್ಲಿ ಸಂಸದರಾಗಿ ಪ್ರಮಾಣ ವಚನ ಸ್ವೀಕರಿಸಿದರು. ಬೆಂಗಳೂರು ಉತ್ತರದ ಸಂಸದೆ ಮತ್ತು ಅತಿ ಸಣ್ಣ, ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳ ರಾಜ್ಯ ಸಚಿವೆ ಶೋಭಾ ಕರಂದ್ಲಾಜೆ, ಬೆಂಗಳೂರು ದಕ್ಷಿಣದ ಸಂಸದ ತೇಜಸ್ವಿ ಸೂರ್ಯ ಮತ್ತು ಬೆಂಗಳೂರು ಕೇಂದ್ರದ ಸಂಸದ ಪಿ.ಸಿ.ಮೋಹನ್, ಬೆಂಗಳೂರು ಗ್ರಾಮಾಂತರ ಕ್ಷೇತ್ರದ ಡಾ:ಸಿ.ಎನ್. ಮಂಜುನಾಥ್ ಕನ್ನಡ, ದೇವರು ಹಾಗೂ ಮತದಾರರ ಹೆಸರಿನಲ್ಲಿ ಪ್ರಮಾಣ ವಚನ ಸ್ವೀಕರಿಸಿದರು. ತೇಜಸ್ವಿ ಸೂರ್ಯ ರೇಷ್ಮೆ ಪಂಜೆ, ಶಲ್ಯ, ಶರ್ಟ್ ಧರಿಸಿದ್ದರೆ, ಉಳಿದ ಮೂವರು ಬಿಳಿ ಬಣ್ಣದ ಉಡುಗೆ ತೊಟ್ಟು ಗಮನ ಸೆಳೆದರು.

**ಆಧಾರ**:ಉದಯವಾಣಿ ದಿನಾಂಕ:25.06.2024

## 8. ಶಪಥದ ವೇಳೆ ಒವೈಸಿ 'ಜೈ ಪ್ಯಾಲೇಸ್ತೀನ್' ಘೋಷಣೆ

ಹೈದರಾಬಾದ್ ಕ್ಷೇತ್ರದಿಂದ ಸಂಸದ ಹಾಗೂ ಎಐಎಂಐಎಂ ಪಕ್ಷದ ಸ್ಥಾಪಕ ಅಸಾದುದ್ದೀನ್ ಒವೈಸಿ ಸಂಸತ್ತಿನಲ್ಲಿ ಸಂಸದರಾಗಿ ಪ್ರಮಾಣ ಸ್ವೀಕರಿಸಿದ ಬಳಿಕ 'ಜೈ ಪ್ಯಾಲೆಸ್ತೀನ್' ಎಂಬ ಘೋಷಣೆ ಕೂಗಿರುವುದು ವಿವಾದಕ್ಕೆ ಕಾರಣವಾಗಿದೆ.

ಇದಕ್ಕೆ ಬಿಜೆಪಿ ಸದಸ್ಯರು ಆಕ್ಷೇಪಿಸಿದ್ದಾರೆ ಹಾಗೂ ಸ್ಪೀಕರ್ ಜತೆ ಈ ಬಗ್ಗೆ ಚರ್ಚಿಸುವುದಾಗಿ ಸಂಸದೀಯ ಸಚಿವ ಕಿರಣ್ ರಿಜಿಜು ಹೇಳಿದ್ದಾರೆ. ಪ್ರಮಾಣವಚನ ಸ್ವೀಕಾರಕ್ಕೆ ಒವೈಸಿ ಹೆಸರನ್ನು ಕರೆದ ಕ್ಷಣ ಆಡಳಿತ ಪಕ್ಷದ ಕೆಲ ಸಂಸದರು ಜೈಶ್ರೀರಾಂ ಮತ್ತು ಭಾರತ್ ಮಾತಾ ಕಿ ಜೈ ಘೋಷಣೆಯನ್ನು ಕೂಗಿದರು. ಬಳಿಕ ಪ್ರಮಾಣ ಸ್ವೀಕರಿಸಿದ ಅಸಾದುದ್ದೀನ್, ಕೊನೆಯಲ್ಲಿ ಜೈ ಭೀಮ್, ಜೈ ಎಂಐಎಂ, ಜೈ ಪ್ಯಾಲೆಸ್ತೀನ್, ಜೈ ತೆಲಂಗಾಣ, ಅಲ್ಲಾಹು ಅಕ್ಬರ್' ಎಂದು ಕೂಗಿದರು. ಇದು ವಿವಾದಕ್ಕೆ ಕಾರಣವಾಯಿತು. ಸಂಸತ್ ಸದಸ್ಯರು ಆಕ್ಷೇಪ ವ್ಯಕ್ತಪಡಿಸಿ ಗದ್ದಲ ಎಬ್ಬಿಸಿದಾಗ ಆ ವಾಕ್ಯವನ್ನು ಕಡತದಿಂದ ತೆಗೆಯುವುದಾಗಿ ಸ್ಪೀಕರ್ ಪ್ರಕಟಿಸಿದರು.

ಬಳಿಕ ಸಂಸತ್ ಭವನದ ಹೊರಗೆ ಸುದ್ದಿಗಾರರೊಂದಿಗೆ ಮಾತನಾಡಿ, ತಮ್ಮ ಕ್ರಮ ಸಮರ್ಥಿಸಿಕೊಂಡಿರುವ ಒವೈಸಿ 'ಇತರರೂ ಸಹ ತಮಗೆ ತೋಚಿದ ಘೋಷಣೆಗಳನ್ನು ಕೂಗಿದ್ದಾರೆ. ನಾನು ದಮನಿತರ ಪರವಾಗಿ ದನಿ ಎತ್ತಿರುವೆ. ಅದರಲ್ಲಿ ತಪ್ಪೇನು? ಮಹಾತ್ಮಾ ಗಾಂಧಿ ಪ್ಯಾಲೆಸ್ತೀನ್ ಬಗ್ಗೆ ಏನು ಹೇಳಿದ್ದರು ನೋಡಿ. ಅವರು ದಮನಿತರು' ಎಂದರು.

ಆಧಾರ:ಕನ್ನಡಪ್ರಭ ದಿನಾಂಕ:26.06.2024

## 9. ಓಂ ಬಿರ್ಲಾ ಮತ್ತೆ ಸ್ಪೀಕರ್

ಎನ್‌ಡಿಎ ಮೈತ್ರಿಕೂಟದ ಅಭ್ಯರ್ಥಿ ಓಂ ಬಿರ್ಲಾ ಅವರು 18ನೇ ಲೋಕಸಭೆಯ ಸ್ಪೀಕರ್ ಆಗಿ ಬುಧವಾರ ಆಯ್ಕೆಯಾದರು.

ಪ್ರಧಾನಿ ನರೇಂದ್ರ ಮೋದಿ ಅವರು ಮಂಡಿಸಿದ ನಿಲುವಳಿ ಸೂಚನೆಯನ್ನು ಧ್ವನಿ ಮತಕ್ಕೆ ಹಾಕಲಾಯಿತು. ಕಾಂಗ್ರೆಸ್‌ನ ಹಿರಿಯ ಸಂಸದ ಕೋಡಿಕುನ್ನಿಲ್ ಸುರೇಶ್ ಅವರನ್ನು ಅಭ್ಯರ್ಥಿಯಾಗಿ ಕಣಕ್ಕಿಳಿಸಿದ್ದ ವಿರೋಧ ಪಕ್ಷಗಳು ನಿಲುವಳಿಸೂಚನೆಯನ್ನು ಬೆಂಬಲಿಸಲಿಲ್ಲ.

ಹಂಗಾಮಿ ಸ್ಪೀಕರ್ ಭರ್ತೃಹರಿ ಮಹತಾಬ್ ಅವರು ಓಂ ಬಿರ್ಲಾ ಆಯ್ಕೆಯನ್ನು ಘೋಷಿಸಿದರು. ರಾಜಸ್ಥಾನದ ಕೋಟಾ ಲೋಕಸಭಾ ಕ್ಷೇತ್ರದ ಸದಸ್ಯರಾಗಿರುವ ಬಿರ್ಲಾ, ಸತತ ಎರಡನೇ ಬಾರಿಗೆ ಸ್ಪೀಕರ್ ಆಗಿ ಆಯ್ಕೆಯಾಗಿದ್ದಾರೆ. ಸ್ಪೀಕರ್ ಒಬ್ಬರು ಒಂದು ಲೋಕಸಭಾ ಅವಧಿಗಿಂತಲೂ ಹೆಚ್ಚು ಕಾಲ ಆ ಹುದ್ದೆಯಲ್ಲಿ ಕಾರ್ಯನಿರ್ವಹಿಸುತ್ತಿರುವುದು ಇದು ಐದನೇ ಬಾರಿ.

ಸಾಮಾನ್ಯವಾಗಿ ಒಮ್ಮತದಿಂದ ನಡೆಯುತ್ತಿದ್ದ ಪ್ರಕ್ರಿಯೆಯು, ಸ್ಪೀಕರ್ ಆಯ್ಕೆ ಚುನಾವಣೆ ಅನಿವಾರ್ಯವಾದ ಸಂದರ್ಭಕ್ಕೂ 18ನೇ ಲೋಕಸಭೆ ಸಾಕ್ಷಿಯಾಯಿತು.

ಆಧಾರ:ಪ್ರಜಾವಾಣಿ ದಿನಾಂಕ:27.06.2024

# ಭಾಗ–4

# ಕೇಂದ್ರ ಸರ್ಕಾರದ ಸುದ್ದಿಗಳು

## 1. ಕೇಂದ್ರ ಸಂಪುಟದಲ್ಲಿ ರಾಜ್ಯದ ಪ್ರತಿನಿಧಿಗಳು

ರಾಜ್ಯದಿಂದ ಮೂರನೇ ಅವಧಿಗೆ ರಾಜ್ಯ ಸಭಾ ಸದಸ್ಯರಾಗಿರುವ ಶ್ರೀಮತಿ ನಿರ್ಮಲಾ ಸೀತಾರಾಮನ್, ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಹೊಸ ಸರ್ಕಾರದಲ್ಲೂ ಸಚಿವರಾಗಿದ್ದಾರೆ. ತಮಿಳುನಾಡಿನ ಮಧುರೈನವರಾದ ಅವರನ್ನು ಅಲ್ಲಿನ ವಿಧಾನಸಭೆಯಲ್ಲಿ ಬಿಜೆಪಿ ಸದಸ್ಯರಿಲ್ಲದ ಕಾರಣದಿಂದ ಕರ್ನಾಟಕದಿಂದ ಸತತವಾಗಿ ಆಯ್ಕೆ ಮಾಡಲಾಗುತ್ತಿದೆ. 2014ರಲ್ಲಿ ಶ್ರೀ ನರೇಂದ್ರ ಮೋದಿ ಅವರು ಮೊದಲ ಬಾರಿ ಅಧಿಕಾರಕ್ಕೇರಿದಾಗಲೇ ಹಣಕಾಸು ಮತ್ತು ಕಾರ್ಪೊರೇಟ್ ವ್ಯವಹಾರಗಳ ಸಚಿವರಾಗಿ ಸಂಪುಟ ಸೇರಿದ್ದರು. ಸತತ ಹತ್ತು ವರ್ಷಗಳ ಕಾಲ ಸಚಿವರಾಗಿದ್ದ ಶ್ರೀಮತಿ ನಿರ್ಮಲಾ, ಮೂರನೇ ಅವಧಿಗೆ ಮೋದಿ ಸಂಪುಟ ಸೇರುತ್ತಿದ್ದಾರೆ.

ಮಾಜಿ ಪ್ರಧಾನಿ ಶ್ರೀ ಹೆಚ್.ಡಿ.ದೇವೇಗೌಡರ ಮಗ ಶ್ರೀ ಹೆಚ್.ಡಿ.ಕುಮಾರಸ್ವಾಮಿ, ರಾಜ್ಯದಲ್ಲಿ ಎರಡು ಬಾರಿ ಅಲ್ಪಾವಧಿಗೆ ಮಂತ್ರಿಯಾಗಿದ್ದರು. ಮೂರನೇ ಬಾರಿ ಸಂಸದರಾಗಿರುವ ಅವರು, ಜೆಡಿಎಸ್ ಪಕ್ಷವು ಎನ್‌ಡಿಎ ಮೈತ್ರಿಕೂಟ ಸೇರಿರುವ ಕಾರಣದಿಂದಾಗಿ ಕೇಂದ್ರ ಸಂಪುಟದ ಸದಸ್ಯರಾಗಿದ್ದಾರೆ. ತಾವು ಗೆಲ್ಲುವುದರ ಜತೆಯಲ್ಲೇ ಒಕ್ಕಲಿಗ ಮತದಾರರ ಪ್ರಾಬಲ್ಯದ ಕ್ಷೇತ್ರಗಳಲ್ಲಿ ಬಿಜೆಪಿಯನ್ನು ಗೆಲುವಿನ ದಡ ಸೇರಿಸಿರುವುದಕ್ಕಾಗಿ ನರೇಂದ್ರ ಮೋದಿಯವರ ಸಂಪುಟದಲ್ಲಿ ಆದ್ಯತೆ ಸಿಕ್ಕಿದೆ.

ಧಾರವಾಡ ಲೋಕಸಭಾ ಕ್ಷೇತ್ರದಲ್ಲಿ ಸತತ ಐದನೇ ಬಾರಿ ಗೆಲುವು ಸಾಧಿಸಿರುವ ಶ್ರೀ ಪ್ರಹ್ಲಾದ ಜೋಶಿ ಶ್ರೀ ನರೇಂದ್ರ ಮೋದಿಯವರ ಸಂಪುಟದಲ್ಲಿ ಎರಡನೇ ಬಾರಿ ಸಚಿವರಾಗುತ್ತಿದ್ದಾರೆ. ಕಳೆದ ಬಾರಿ ಸಂಸದೀಯ ವ್ಯವಹಾರ, ಕಲ್ಲಿದ್ದಲು ಮತ್ತು ಗಣಿ ಖಾತೆಗಳ ಸಚಿವರಾಗಿದ್ದರು. ಉತ್ತರ ಕರ್ನಾಟಕಕ್ಕೆ ಪ್ರಾತಿನಿಧ್ಯ ನೀಡುವ ಬಿಜೆಪಿ ಕಾರ್ಯತಂತ್ರದ ಭಾಗವಾಗಿ ಶ್ರೀ ಪ್ರಹ್ಲಾದ ಜೋಶಿ ಅವರಿಗೆ ಮತ್ತೆ ಸಚಿವ ಸ್ಥಾನ ಒಲಿದಿದೆ.

ಜನತಾ ಪರಿವಾರದಲ್ಲಿ ರಾಜಕೀಯ ಆರಂಭಿಸಿದ್ದ ಶ್ರೀ ವಿ.ಸೋಮಣ್ಣ ಕಾಂಗ್ರೆಸ್‌ನಲ್ಲಿ ದಶಕಗಳ ಕಾಲ ಇದ್ದರು. ಈಗ ಬಿಜೆಪಿಯಲ್ಲಿ ರಾಜ್ಯ ರಾಜಕಾರಣದಿಂದ ರಾಷ್ಟ್ರರಾಜಕಾರಣ ಪ್ರವೇಶಿಸಿದ್ದಾರೆ. ಪಾಲಿಕೆ ಸದಸ್ಯರಾಗಿ ರಾಜಕೀಯ ಪ್ರವೇಶಿಸಿದ್ದ ಶ್ರೀ ಸೋಮಣ್ಣ ಈಗ ತುಮಕೂರು ಲೋಕಸಭಾ ಕ್ಷೇತ್ರ ಸಂಸದ. ರಾಜ್ಯದಲ್ಲಿ ಹಲವು ಖಾತೆಗಳ ಸಚಿವರಾಗಿ ಕೆಲಸ ಮಾಡಿರುವ ಅನುಭವಿ ರಾಜಕಾರಣಿ. ಲೋಕಸಭಾ ಚುನಾವಣೆಯಲ್ಲಿ ತುಮಕೂರು ಕ್ಷೇತ್ರದಲ್ಲಿ ಸ್ಪರ್ಧಿಸಿ ಗೆದ್ದು ಸಂಸತ್ ಪ್ರವೇಶಿಸಿದ್ದಾರೆ.

ನರೇಂದ್ರ ಮೋದಿ ನೇತೃತ್ವದ ಸರ್ಕಾರದಲ್ಲಿ ಕೃಷಿ ಖಾತೆ ರಾಜ್ಯ ಸಚಿವರಾಗಿದ್ದ ಶೋಭಾ ಕರಂದ್ಲಾಜೆ. ಎರಡನೇ ಅವಧಿಗೆ ಸಂಪುಟ ಸೇರಿದ್ದಾರೆ. ವಿದ್ಯಾರ್ಥಿ ಜೀವನದಿಂದಲೇ ಸಂಘ ಪರಿವಾರ ಮತ್ತು ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್‌ನಲ್ಲಿ ಸಕ್ರಿಯವಾಗಿದ್ದ ಶೋಭಾ ರಾಜ್ಯದಲ್ಲಿ ಬಿಜೆಪಿಯ ನಾಯಕಿಯರಲ್ಲಿ ಪ್ರಮುಖರು. ರಾಜ್ಯದಲ್ಲಿ ಪಕ್ಷ ಅಧಿಕಾರಕ್ಕೇರುವ ಸಂದರ್ಭದಲ್ಲಿ ಮುಂಚೂಣಿಯಲ್ಲಿದ್ದ ಅವರು, ವಿಧಾನಪರಿಷತ್ ಸದಸ್ಯರಾಗುವ ಮೂಲಕ ಶಾಸನ ಸಭೆ ಪ್ರವೇಶಿಸಿದ್ದರು. ಯಶವಂತಪುರ ವಿಧಾನಸಭೆ ಕ್ಷೇತ್ರದಲ್ಲಿ ಸ್ಪರ್ಧಿಸಿ ಗೆದ್ದು ಮೊದಲ ಅವಧಿಯ ಬಿಜೆಪಿ ಸರ್ಕಾರದಲ್ಲಿ ಗ್ರಾಮೀಣಾಭಿವೃದ್ಧಿಯ ಮತ್ತು ಪಂಚಾಯತ್ ರಾಜ್ ಹಾಗೂ ಇಂಧನ ಸಚಿವರಾಗಿದ್ದರು. 2014ರ ಲೋಕಸಭಾ ಚುನಾವಣೆಯಲ್ಲಿ ಉಡುಪಿ–ಚಿಕ್ಕಮಗಳೂರು ಕ್ಷೇತ್ರದಲ್ಲಿ ಗೆದ್ದು ಸಂಸತ್ ಪ್ರವೇಶಿಸಿದ್ದರು. ಮೂರನೇ ಅವಧಿಗೆ ಬೆಂಗಳೂರು ಉತ್ತರದಿಂದ ಸ್ಪರ್ಧಿಸಿ ಗೆದ್ದಿದ್ದಾರೆ. ದಕ್ಷಿಣ ಭಾರತದಿಂದ ಆಯ್ಕೆಯಾಗಿರುವ ಬಿಜೆಪಿ ಏಕೈಕ ಸಂಸದೆ.

**ಆಧಾರ**: ಪ್ರಜಾವಾಣಿ, ದಿನಾಂಕ: 10.06.2024

## 2. ಜಿಎಸ್‌ಟಿ ಮಂಡಳಿಗೆ ಕೃಷ್ಣ ಬೈರೇಗೌಡ

ಜಿಎಸ್‌ಟಿ ವ್ಯವಸ್ಥೆಯ ತೆರಿಗೆ ಪ್ರಮಾಣ ಸರಳಗೊಳಿಸಲು ರಚಿಸಿರುವ ಏಳು ಸಚಿವರನ್ನು ಒಳಗೊಂಡ ಸಮಿತಿಯನ್ನು ಪುನರ್ ರಚಿಸಲಾಗಿದೆ.

ಬಿಹಾರದ ಡಿಸಿಎಂ ಸಾಮ್ರಾಟ್ ಚೌಧರಿ ಈ ಸಮಿತಿಯ ಸಂಚಾಲಕರಾಗಿ, ಕೃಷ್ಣ ಬೈರೇಗೌಡ, ಉತ್ತರ ಪ್ರದೇಶದ ಹಣಕಾಸು ಸಚಿವ ಸುರೇಶ್ ಕುಮಾರ್ ಖನ್ನಾ, ಗೋವಾದ ಸಾರಿಗೆ ಸಚಿವ ಮೌವಿನ್ ಗೊಡಿನ್ಹೊ, ರಾಜಸ್ಥಾನ ವೈದ್ಯಕೀಯ ಮತ್ತು ಆರೋಗ್ಯ ಸೇವಾ ಸಚಿವ ಗಜೇಂದ್ರ ಸಿಂಗ್, ಪಶ್ಚಿಮ ಬಂಗಾಳದ ಹಣಕಾಸು ಸಚಿವರಾದ ಚಂದ್ರಿಮಾ ಭಟ್ಟಾಚಾರ್ಯ ಮತ್ತು ಕೇರಳದ ಹಣಕಾಸು ಸಚಿವ ಕೆ.ಎನ್.ಬಾಲಗೋಪಾಲ್ ಈ ಸಮಿತಿಯ ಉಳಿದ ಸದಸ್ಯರಾಗಿದ್ದಾರೆ.

**ಆಧಾರ**: ವಿಶ್ವವಾಣಿ, ದಿನಾಂಕ: 22.06.2024

## 3. ಇಡೀ ವಿಶ್ವದ ಗಮನ ಭಾರತದತ್ತ ರಾಷ್ಟ್ರಪತಿ

18ನೇ ಲೋಕಸಭೆಯ ಜಂಟಿ ಸದನ ಉದ್ದೇಶಿಸಿ ರಾಷ್ಟ್ರಪತಿ ದ್ರೌಪದಿ ಮುರ್ಮು ಭಾಷಣ ಮಾಡಿ, ತುರ್ತು ಪರಿಸ್ಥಿತಿಯ ಕರಾಳ ದಿನಗಳನ್ನು ನೆನಪಿಸಿಕೊಂಡರು, ನೀಟ್–ನೆಟ್ ಪ್ರಶ್ನೆಪತ್ರಿಕೆ ಸೋರಿಕೆ ವಿಚಾರಗಳನ್ನೂ ಪ್ರಸ್ತಾಪಿಸಿ, ಸರ್ಕಾರ ತಪ್ಪಿತಸ್ಥರ ವಿರುದ್ಧ ಕಠಿಣ ಕಾನೂನು ಕ್ರಮಗಳನ್ನು ಕೈಗೊಳ್ಳಲಿದೆ ಎಂದು ಭರವಸೆ ನೀಡಿದರು. ಅಲ್ಲದೇ, 70ವರ್ಷದ ಹಿರಿಯರಿಗೆ ಆಯುಷ್ಮಾನ್ ಭಾರತ್ ಆರೋಗ್ಯ ಯೋಜನೆಯಲ್ಲಿ ಉಚಿತ ಚಿಕಿತ್ಸೆ ಸೌಲಭ್ಯವನ್ನೂ ಪ್ರಕಟಿಸಿದರು.

18ನೇ ಲೋಕಸಭೆ ರಚನೆ ಬಳಿಕ ಲೋಕಸಭೆ– ರಾಜ್ಯಸಭೆ ಜಂಟಿ ಸದನ ಉದ್ದೇಶಿಸಿ ರಾಷ್ಟ್ರಪತಿ ದ್ರೌಪದಿ ಮುರ್ಮು ಮೊದಲ ಭಾಷಣ ಇದಾಗಿದೆ. ಇದು ವಿಶ್ವದ ಅತಿ ದೊಡ್ಡ ಚುನಾವಣೆ ಭಾರತದಲ್ಲಿ 3ನೇ ಬಾರಿಗೆ ಸ್ಪಷ್ಟ ಬಹುಮತದ ಸರ್ಕಾರ ರಚನೆಯಾಗಿದೆ. ಇಡೀ ವಿಶ್ವವೇ ಭಾರತವನ್ನು ಗಮನಿಸುತ್ತಿದೆ. ಮಹಿಳೆಯರು ಅತ್ಯಧಿಕ ಸಂಖ್ಯೆಯಲ್ಲಿ ಮತದಾನ ಮಾಡಿದ್ದಾರೆ. ವಿಕಸಿತ ಭಾರತ ಸಂಕಲ್ಪದ ಮೇಲೆ ಜನರು ವಿಶ್ವಾಸವಿಟ್ಟಿದ್ದಾರೆ. ಎಂದು ಗಮನ ಸೆಳೆದರು.

18ನೇ ಲೋಕಸಭೆ ಜನರ ಕಲ್ಯಾಣಕ್ಕೆ ಶ್ರಮಿಸಲಿದೆ. 18ನೇ ಲೋಕಸಬೆ ಮೈಲುಗಲ್ಲು ಸ್ಥಾಪಿಸಲಿದೆ. ಈ ಬಾರಿ ಜನರ ಕಲ್ಯಾಣಕ್ಕೆ ಬಜೆಟ್ ಮಂಡಿಸಲಾಗುತ್ತದೆ. ಬಜೆಟ್ ಸಾಮಾನ್ಯರ ಒಳಿತು–ಅಭಿವೃದ್ಧಿ ನೆರವಾಗಲಿದೆ ಎಂದು ಹೇಳಿ ಭರವಸೆ ಭಾವ ಮೂಡಿಸಲೆತ್ನಿಸಿದರು.

ಭಾರತ ಆರ್ಥಿಕತೆಯಲ್ಲಿ 5ನೇ ಸ್ಥಾನಕ್ಕೇರಿದ್ದು, 3ನೇ ಸ್ಥಾನಕ್ಕೇರುವ ಗುರಿ ಹೊಂದಿದೆ. ಹಲವು ಸವಾಲುಗಳ ಮೆಟ್ಟಿ ಭಾರತ ಗುರಿಯತ್ತ ಮುನ್ನುಗ್ಗುತ್ತಿದೆ. ಕರೋನಾ ಮತ್ತಿತರ ಸವಾಲು, ಸಮಸ್ಯೆ ಸಂಘರ್ಷಗಳ ನಡುವೆಯೇ ಭಾರತ ಅಭಿವೃದ್ಧಿ ಹಾದಿಯಲ್ಲಿ ಸಾಗುತ್ತಿದೆ. ವಿಕಸಿತ ಭಾರತದತ್ತ ಸರ್ಕಾರ ಕೆಲಸ ಮಾಡಲಿದೆ. ಕೃಷಿ, ಆರೋಗ್ಯ, ಶಿಕ್ಷಣ ಸೇರಿದಂತೆ ಎಲ್ಲಾ ಕ್ಷೇತ್ರಗಳ ಕುರಿತು ಸರಕಾರ ವಿಶೇಷ ಗಮನಹರಿಸಲಿದೆ ಎಂದು ಮುರ್ಮು ಹೇಳಿದರು.

**ಆಧಾರ**: ವಿಶ್ವವಾಣಿ, ದಿನಾಂಕ: 28.06.2024

# ಭಾಗ–5

# ರಾಜ್ಯ ಸರ್ಕಾರ ಸುದ್ದಿಗಳು

## 1. IMD predicts dry spell in B'luru for another week

The long dry spell in the city is said to continue for close to another week with India Meteorological Department Bengaluru's recent forecast ruling out any rain till April 19.

According to the forecast, the weather might be slightly cloudy on 14$^{th}$ April but there are no chances of rainfall. From Monday, dry weather will continue in the city. However, scientists at IMD are expecting some rain fall after April 20. The position of the trough and wind convergence determine the rainfall. Now, there is no wind convergence and the position of the trough is not favourable to Bengaluru and hence the delay. Hopefully, in the coming days, if the trough moves east or deepens, Bengaluru will get rain said A. Prasad, a senior scientist with IMD Bengaluru.

Though the city has not received any rain this year, over the last two days, the temperature has come down by nearly three degrees Celsius. On April 6, Bengaluru recorded 37.6 degrees Celsius, the highest in eight years. Since then, there has been a gradual reduction in maximum temperature.

On April 13, the city recorded 34.6 degrees Celsius a drop of nearly three degrees. However, the maximum temperature has remained above 34 degrees Celsius, the normal average temperature for Bengaluru for April.

After Zero rain days in March, IMD had predicted light to moderate rain by April 10 and this was later pushed to April 14.

Now, given the unfavorable weather conditions, scientists are speculating that the city might receive only one spell of rain this month. We are hopeful that we will get at least one spell of rain this month. However, chances of getting two or three spell of rain is very low Prasad said.

Bengaluru usually receives 14.7 mm rain full in March and 61.7mm in April. However, this year, March was completely dry and in April. it may record only 10mm or 20mm rain fall.

**Courtesy:** Deccan Herald, Date: 14.04.2024.

## 2. BBMP can generate 6 time more revenue: Study

The Bruhat Bengaluru Mahanagara Palike (BBMP) can generate six times more revenue compared to its present earnings Researches have found, an come that once again.

Researchers at the Institute of Social and Economic Change (ISEC) came to the conclusion by analyzing the BBMP budget and the Karnataka Economic Survey from 2013-14. Their analysis found that the BBMP's revenue from its own sources is on average close to 1% of the city's GDP. The poverty of the BBMP stood out in contrast to cities such as London. Tokyo, New York, Johannesburg and Sao Paulo whose civic bodies according to researchers are generating close to 6% of the city's GDP.

The results were outlined in the research paper are Indian Cities Generating Sufficient Revenues? the Case of Bengaluru. As the city's GDP grows, there is pressure on the local government to provide better infrastructure to match the growth. Sukanya Bhaumik, co-author of the research paper, told DH.

Considering this, ideally, it is said that the local governments revenue through its own sources should increase with an increase in the city's GDP. But that is not the case with Bengaluru.

The BBMPs litany of failures include lower valuation of properties, failure to bring all properties. failure to bring all properties under the tax net and a lack of will to crack down on defaulters.

The basic problem, at present, is that there are no fixed standards to judge the city's revenue capacity. We need to follow normative principles for assessing the professor Kala S. Sridhar, co author of the research paper told DH.

To buttress her point, Sukanya pointed to the central government's economic survey of 2016-17, which said that Bengaluru was collecting way less revenue than its potential.

The economic survey included satellite images and such data that showed that many properties were not even being assessed. she said. A citizen survey by the respondents were willing to pay higher taxes if the civic body provided better infrastructure.

Experts said that a lack of accountability and transparency had kept many citizens away from paying taxes since many of them perceived that there was hardly any infrastructure development.

It has now become a vicious cycle. The BBMP is not able to improve the infrastructure since the revenue is low and people do not want to pay till the infrastructure is better. This has to be broken with a structural reformation, Sukanya said.

In 2023-24 BBMP collected close to Rs.3,900 crore in property taxes. Going by the analysis, the revenue gap for just this year comes up to Rs 19,500.

**Courtesy**: Deccan Herald, Date: 28.04.2024.

## 3. ಹೊರ ಗುತ್ತಿಗೆಗೂ ಮೀಸಲಾತಿ

ರಾಜ್ಯ ಸಕಾರದ ವಿವಿಧ ಇಲಾಖೆಗಳಲ್ಲಿ ನಡೆಸುವ ಹೊರಗುತ್ತಿಗೆ ನೌಕರರ ನೇಮಕಾತಿಯಲ್ಲಿ ಮೀಸಲಾತಿಯನ್ನು ಕಡ್ಡಾಯವಾಗಿ ಪಾಲಿಸುವಂತೆ ಸರ್ಕಾರ ಆದೇಶ ಹೊರಡಿಸಿದೆ. ಮೀಸಲಾತಿ ಕಲ್ಪಿಸುವಾಗಲೂ ಮಹಿಳೆಯರಿಗೆ ಶೇ. 33ರಷ್ಟು ಮೀಸಲಿಡುವಂತೆಯೂ ಸೂಚಿಸಿದೆ.

ಸರ್ಕಾರಿ ಇಲಾಖೆಗಳಲ್ಲಿ ವಿವಿಧ ಹಂತದ ಸಿಬ್ಬಂದಿ ನೇಮಕಾತಿಯನ್ನು ಹೊರಗುತ್ತಿಗೆ ಆಧಾರದಲ್ಲಿ ವಿವಿಧ ಏಜೆನ್ಸಿಗಳ ಮೂಲಕ ನೇಮಕ ಮಾಡಿಕೊಳ್ಳುತ್ತಿರುವ ಕಾರಣ ಮೀಸಲಾತಿ ಸಿಗುತ್ತಿಲ್ಲ. ಏಜೆನ್ಸಿಗಳು ತಮಗೆ ಬೇಕಾದವರಿಗೆ ಉದ್ಯೋಗ ನೀಡುತ್ತಿರುವುದರಿಂದ ಪರಿಶಿಷ್ಟ ಜಾತಿ, ಪಂಗಡ ಹಾಗೂ ಹಿಂದುಳಿದ ವರ್ಗಕ್ಕೆ ಸೇರದ ಸಮುದಾಯದವರು ಉದ್ಯೋಗದಿಂದ ವಂಚಿತರಾಗುತ್ತಿದ್ದಾರೆ. ಇಲ್ಲಿಯೂ ಕಡ್ಡಾಯ ಮೀಸಲಾತಿ ಜಾರಿ ಮಾಡಬೇಕು ಎಂಬ ಹಕ್ಕೊತ್ತಾಯ ಬಹಳ ಕಾಲದಿಂದ ಇತ್ತು.

2023ರ ಡಿಸೆಂಬರ್ 21ರಂದು ನಡೆದ ಸಚಿವ ಸಂಪುಟ ಸಭೆಯಲ್ಲಿ ಹೊರಗುತ್ತಿಗೆಯಲ್ಲೂ ಮೀಸಲಾತಿ ನೀತಿಯನ್ನು ಜಾರಿಗೊಳಿಸುವ ಪ್ರಸ್ತಾವನೆಗೆ ಅಂಗೀಕಾರ ನೀಡಲಾಗಿತ್ತು. ಪ್ರಸ್ತುತ ಜಾರಿಯಲ್ಲಿರುವ ಮೀಸಲಾತಿ ನಿಯಮವನ್ನು ಹೊರಗುತ್ತಿಗೆ ನೌಕರರ ನೇಮಕಾತಿಗೂ ಕಡ್ಡಾಯವಾಗಿ ಅನ್ವಯಿಸಬೇಕು. ಅದಕ್ಕೆ ಕೆಲವು ಸೂಚನೆಗಳನ್ನು ಪಾಲನೆ ಮಾಡಬೇಕು ಎಂದು ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ ಹೊರಡಿಸಿದ ಸುತ್ತೋಲೆಯಲ್ಲಿ ನಿರ್ದೇಶನ ನೀಡಿದೆ. 45 ದಿನಗಳಿಗಿಂತ ಕಡಿಮೆ ಅವಧಿಯ ನೇಮಕಾತಿಗೆ ಹೊರಗುತ್ತಿಗೆ ಮೀಸಲಾತಿ ನೀತಿ ಅನ್ವಯಿಸುವುದಿಲ್ಲ. ಪ್ರತಿವರ್ಷ ಹೊರ ಸಂಪನ್ಮೂಲ ಏಜೆನ್ಸಿಗಳಿಂದ ಟೆಂಡರ್ ಕರೆಯುವಾಗ ಕಡ್ಡಾಯವಾಗಿ ಮೀಸಲಾತಿಗೆ ಅನುಗುಣವಾಗಿ ಹುದ್ದೆ ಹಂಚಿಕೆ ಮಾಡಿ ಸಿಬ್ಬಂದಿಯನ್ನು ಪೂರೈಸಲು ಷರತ್ತುಗಳನ್ನು ನಮೂದಿಸಬೇಕು. ಹೊರ ಸಂಪನ್ಮೂಲ ಏಜೆನ್ಸಿ ಅಂತಿಮಗೊಳಿಸಿದ ಸಿಬ್ಬಂದಿಯ ಪಟ್ಟಿಯು ಮೀಸಲಾತಿ ನಿಯಮದಂತೆ ಇರುವುದನ್ನು ಟೆಂಡರ್ ಅಂಗೀಕರಿಸುವ ಪ್ರಾಧಿಕಾರವು ಕಡ್ಡಾಯವಾಗಿ ಖಚಿತಪಡಿಸಿಕೊಳ್ಳಬೇಕು ಎಂದೂ ಸುತ್ತೋಲೆ ಹೇಳಿದೆ.

ಒಂದು ವೇಳೆ ನೇಮಕಾತಿಯಾದ ಅಭ್ಯರ್ಥಿ ಕರ್ತವ್ಯಕ್ಕೆ ಹಾಜರಾಗದಿದ್ದಾಗ ಅಥವಾ ಅರ್ಧದಲ್ಲಿ ಉದ್ಯೋಗ ತೊರೆದಾಗ ಆ ಸ್ಥಾನ ಭರ್ತಿ ಮಾಡಿಕೊಳ್ಳುವ ಸಂದರ್ಭದಲ್ಲಿ ಅದೇ ಪ್ರವರ್ಗದ ಅಭ್ಯರ್ಥಿಗಳನ್ನು ನೇಮಿಸಿಕೊಳ್ಳುವ ಕ್ರಮ ಕೈಗೊಳ್ಳಬೇಕು.

ಈ ಸೂಚನೆಗಳು ಸರ್ಕಾರದ ಎಲ್ಲ ಇಲಾಖೆಗಳು, ಸ್ವಾಯತ್ತ ಸಂಸ್ಥೆಗಳು, ನಿಗಮ, ಮಂಡಳಿಗಳು, ವಿಶ್ವವಿದ್ಯಾಲಯಗಳಿಗೆ ಅನ್ವಯವಾಗಲಿದೆ ಎಂದು ತಿಳಿಸಲಾಗಿದೆ.

**ಆಧಾರ**: ಪ್ರಜಾವಾಣಿ, ದಿನಾಂಕ: 21.05.2024

## 4. ವೃಕ್ಷ ಸಂರಕ್ಷಣಾ ಕಾಯ್ದೆಗೆ ತಿದ್ದುಪಡಿ

ರಾಜ್ಯದ ಅರಣ್ಯ, ಗೋಮಾಳ, ಸರ್ಕಾರಿ ಭೂಮಿ ಹಾಗೂ ಪಟ್ಟಾ ಭೂಮಿಯಲ್ಲಿ ಬೃಹತ್ ಮರಗಳ ಅಕ್ರಮ ಕಡಿತಲೆ ಪ್ರಕರಣಗಳು ವರದಿಯಾಗುತ್ತಿರುವ ಕಾರಣ ಗಿಡ–ಮರಗಳನ್ನು ಉಳಿಸಲು ವೃಕ್ಷ ಸಂರಕ್ಷಣಾ ಕಾಯ್ದೆ–1976ಕ್ಕೆ ತಿದ್ದುಪಡಿ ತರಲು ಚಿಂತನೆ ನಡೆದಿದೆ ಎಂದು ಅರಣ್ಯ ಜೀವಿಶಾಸ್ತ್ರ ಮತ್ತು ಪರಿಸರ ಸಚಿವ ಈಶ್ವರ ಬಿ ಖಂಡ್ರೆ ತಿಳಿಸಿದರು.

ವಿಶ್ವ ಪರಿಸರ ದಿನದ ಅಂಗವಾಗಿ ಪಟ್ಟಣದಲ್ಲಿ ನಡೆದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಅನುಮತಿ ಇಲ್ಲದೆ ಯಾರೆ ನಿಯಮ ಬಾಹಿರವಾಗಿ, ಅಕ್ರಮವಾಗಿ ಮರ ಕಡಿದರೆ ಮರದ ಮಾರುಕಟ್ಟೆ ಮೌಲ್ಯಕ್ಕಿಂತ ಹೆಚ್ಚು ದಂಡದೊಂದಿಗೆ ಜೈಲು ಶಿಕ್ಷೆ ವಿಧಿಸಲು ಅವಕಾಶ ಕಲ್ಪಿಸಿ ಕಾಯ್ದೆಗೆ ತಿದ್ದುಪಡಿ ತರುವ ಅಗತ್ಯವಿದೆ ಎಂಬ ಅಭಿಪ್ರಾಯ ವ್ಯಕ್ತವಾಗಿದೆ ಈ ಬಗ್ಗೆ ಪರಿಶೀಲಿಸಲಾಗುತ್ತಿದೆ ಎಂದು ಹೇಳಿದರು.

ಹಾಸನ, ಉತ್ತರ ಕನ್ನಡ, ಕೊಡಗು ಮತ್ತು ಶಿವಮೊಗ್ಗ ಸೇರಿದಂತೆ ವಿವಿಧ ಜಿಲ್ಲೆಗಳಲ್ಲಿ ಅಕ್ರಮವಾಗಿ ನೂರಾರು ಮರ ಕಡಿತಲೆ ಮಾಡಿದ ದೂರುಗಳು ಬಂದಿವೆ. ಪ್ರಾಣವಾಯು ನೀಡುವ, ತಾಪಮಾನ ಹೆಚ್ಚಾಗದಂತೆ ತಡೆಯುವ ಹಾಗೂ ಭೂ ಫಲವತ್ತತೆ ಕಾಪಾಡುವ ವೃಕ್ಷಗಳ ಸಂರಕ್ಷಣೆ ಅಗತ್ಯವಿದೆ ಎಂದರು.

ಬೆಲೆ ಬಾಳುವ ಮರಗಳ ಸಂರಕ್ಷಣೆಗಾಗಿ ಪಟ್ಟಾ ಭೂಮಿ, ಗೋಮಾಳ ಮತ್ತು ಸರ್ಕಾರಿ ಭೂಮಿಯಲ್ಲಿರುವ ಬೀಟೆ, ಶ್ರೀಗಂಧ ತೇಗ, ಮೊದಲಾದ ಬೆಲೆಬಾಳುವ ಮರಗಳ ಜಿಯೋ ಟ್ಯಾಗ್ ಮಾಡಲು ಸೂಚಿಲಾಗಿದ್ದು, ಅಕ್ರಮವಾಗಿ ಮರ ಕಡಿಯುವುದಕ್ಕೆ ಕಡಿವಾಣ ಬೀಳಲಿದೆ ಎಂದು ಹೇಳಿದರು.

ರಸ್ತೆ, ರೈಲು ಮಾರ್ಗ, ವಿದ್ಯುತ್ ಪ್ರಸರಣ ಮಾರ್ಗ, ಕೊಳವೆ ಮಾರ್ಗ ಸೇರಿದಂತೆ ಯಾವುದೇ ಮೂಲಸೌಕರ್ಯ ಯೋಜನೆ ಗಣಿಗಾರಿಕೆ, ಜಲಾಶಯ ಬಡಾವಣೆ ನಿರ್ಮಾಣ, ಕೈಗಾರಿಕೆ ಸ್ಥಾಪನೆಯಂತಹ ಯಾವುದೇ ಯೋಜನೆ ಇರಲಿ, ಇದರಿಂದ ಪರಿಸರದ ಮೇಲೆ ಆಗುವ ಪರಿಣಾಮದ ಸಮಗ್ರ ಅಧ್ಯಯನ ಮಾಡುವ ಅಗತ್ಯವಿದೆ ಎಂಬುದನ್ನು ಇಲಾಖೆ ಮನಗಂಡಿದೆ. ಯಾವುದೇ ಹೊಸ ಯೋಜನೆಗೆ ಬಿಡಿ ಬಿಡಿಯಾಗಿ (ಇಷ್ಟು ಕಿ,ಮೀ.ನಿಂದ ಇಂತಿಷ್ಟು ಕಿ.ಮೀವರೆಗೆ) ಮರ ಕಡಿಯಲು ಅನುಮತಿ ನೀಡುವುದಕ್ಕೆ ಕಡಿವಾಣ ಹಾಕಿ, ಒಂದು ಯೋಜನೆಗೆ ಒಂದೇ ಬಾರಿ ಅನುಮತಿ ನೀಡಿ, ಪರ್ಯಾಯ ಅರಣ್ಯ ಬೆಳೆಸುವ ನಿಟ್ಟಿನಲ್ಲಿ ಕ್ರಮಕೈಗೊಳ್ಳಲು ಚಿಂತಿಸಲಾಗುತ್ತಿದೆ ಎಂದರು.

**ಆಧಾರ**: ಪ್ರಜಾವಾಣಿ, ದಿನಾಂಕ: 06.06.2024

## 5. G7 summit commits to concrete infrastructure

The Group of Seven industrialised nations have committed to promoting concrete infrastructure initiatives such as the India- Middle East-Europe Economic Corridor (IMEC) in the G7 Summit Communique issued at the end of the three-day G7 Summit, attended by Prime Minister Narendra Modi.

The Communique was issued on Friday evening after the customary family photo a the luxury resort of Borgo Egnazia, where the G7 also reiterated a commitment to a free and open Indo-pacific based on the rule of law.

Prime Minister Modi attended the G7 Summit at the invitation of Italian Prime Minister Giorgia Meloni, the host. We will further promote concrete G7 PGII (Partnership for global Infrastructure and Investment) initiatives, flagship projects, and complementary initiatives to develop transformative economic corridors for quality Infrastructure and investment such as the deepening of our coordination and financing for the Lobito Corridor, the Luzon Corridor, the Middle Corridor, and the India Middle East Europe Economic corridors also building on the EU Global Gateway, the Great Green wall Initiative, and the Matteiplan for Africa launched by Italy, reads the communiqué.

The IMEC envisages a vast road, railroad and shipping network among Saudi Arabia, India, the United States and Europe.

**Courtesy**: Deccan Herald, Date: 16.06.2024.

## 6. Karnataka introduces updated compulsory service rules for medicos

The state government has introduced the updated Karnataka compulsory Service by Candidates Completed Medical Courses (Counselling, Allotment and certification) (Amendment) Rules, 2024.

The rules were officially published on March 16, 2024 after seeking public feed back, which received no responses. The new rules aim to improve the process of assigning medical graduates to compulsory service positions. They became effective immediately upon their publication in the gazette.

The government has updated the rules for compulsory service by medical graduates and introduced one definition for exemption, meaning exemption from one year of compulsory service, and salary, meaning the stipend set by the state government. The terms training and trainee have been removed from the rules.

New members have been added to the committee responsible for overseeing the service, including the Registrar of the Karnataka Medical Council and the chief Adminstrative Officer of Health and Family Welfare Services. Additionally, agrievance committee has been created to address issues related to counseling and appointments, comprising officials from health and education departments in Bengaluru.

The grievance committee will oversee and address issues related to candidate counseling and appointments, and make recommendations to the competent authority. For assigning candidates to compulsory service, the nodal university must collect candidate lists from all universities, including private and deemed ones, immediately after results are announced.

During online counseling candidates can choose a preferred location or exemption based on merit. If their choice is not available, they may be assigned a random location Candidates not granted an exemption must serve in the allotted location.

Registrars of deemed and private universities must submit candidate lists for compulsory service. A priority list will be prepared during counseling, giving preference to candidates or their family members facing serious or terminal illnesses without available treatments at their assigned location or do not report to duty on time may face penalties Rs.15 lakh for MBBS, Rs 20 lakh for diploma, Rs 25 lakh for super specialty courses.

**Courtesy**: Indian Express, Date: 16.06.2024.

## 7. ಸರ್ಕಾರಿ ಶಾಲೆಗಳಲ್ಲಿ ಇಂಗ್ಲಿಷ್ ಮಾಧ್ಯಮಕ್ಕೆ ಅಸ್ತು

ವಿದ್ಯಾರ್ಥಿಗಳ ಪ್ರವೇಶ ಕೊರತೆಯಿಂದ ನಲುಗಿರುವ ರಾಜ್ಯದ ಸರ್ಕಾರಿ ಶಾಲೆಗಳನ್ನು ಉಳಿಸಲು ಸರ್ಕಾರ ದಿಟ್ಟ ಹೆಜ್ಜೆ ಇಟ್ಟಿದೆ. ರಾಜ್ಯದಲ್ಲಿ ಇರುವ ಸರ್ಕಾರಿ ಶಾಲೆಗಳಲ್ಲಿ 1ನೇ ತರಗತಿಯಿಂದ ಆಂಗ್ಲ ಮಾಧ್ಯಮ ತರಗತಿಯನ್ನು (ದ್ವಿಭಾಷಾ ಮಾಧ್ಯಮ) ಆರಂಭಿಸಲು ಸರ್ಕಾರ ಅನುಮತಿ ನೀಡಿದೆ.

ಪ್ರಸಕ್ತ ಶೈಕ್ಷಣಿಕ ವರ್ಷದಿಂದಲೇ 1,419 ಸರ್ಕಾರಿ ಪ್ರಾಥಮಿಕ ಶಾಲೆಗಳಲ್ಲಿ ಇಂಗ್ಲಿಷ್ ಮಾಧ್ಯಮ ತರಗತಿ ಆರಂಭಿಸಲು ಸರ್ಕಾರ ಅನುಮತಿ ನೀಡಿದೆ. ರಾಜ್ಯದಲ್ಲಿ 20,440 ಕಿರಿಯ ಪ್ರಾಥಮಿಕ ಶಾಲೆಗಳು ಹಾಗೂ 21,799 ಹಿರಿಯ ಪ್ರಾಥಮಿಕ ಶಾಲೆಗಳು ಹಾಗೂ 4,819 ಪ್ರೌಢಶಾಲೆಗಳು ಇವೆ. ಇವುಗಳಲ್ಲಿ ಕಿರಿಯ ಪ್ರಾಥಮಿಕ ಶಾಲೆಗಳಲ್ಲಿ ಆಂಗ್ಲ ಮಾಧ್ಯಮ, ತರಗತಿ ಆರಂಭಿಸಲು ಅನುಮತಿ ನೀಡಿದೆ.

ಸರ್ಕಾರಿ ಶಾಲೆಗಳಲ್ಲಿ ಕೇವಲ ಕನ್ನಡ ಮಾಧ್ಯಮವನ್ನು ಬೋಧನೆ ಮಾಡುತ್ತಿರುವುದರಿಂದ ಪಾಲಕರು ಇಂಗ್ಲಿಷ್ ಮಾಧ್ಯಮ ಇರುವ ಖಾಸಗಿ ಶಾಲೆಗಳಿಗೆ ತಮ್ಮ ಮಕ್ಕಳನ್ನು ಪ್ರವೇಶ ಮಾಡುತ್ತಿದ್ದಾರೆ. ಇದರಿಂದ ಸರ್ಕಾರಿ ಶಾಲೆಗಳಲ್ಲಿ ವಿದ್ಯಾರ್ಥಿಗಳ ಪ್ರವೇಶ ವರ್ಷದಿಂದ ವರ್ಷಕ್ಕೆ ಕುಸಿತವಾಗುತ್ತಿದೆ. ಕೋವಿಡ್ ಅವಧಿಯಲ್ಲಿ ಪ್ರವೇಶ ಹೆಚ್ಚಳವಾಗಿದ್ದನ್ನು ಬಿಟ್ಟರೆ ಪ್ರತಿ ವರ್ಷ ಪ್ರವೇಶ ಕುಸಿಯುತ್ತಿದೆ.

ಹೀಗಾಗಿ ಸರ್ಕಾರಿ ಶಾಲೆಗಳಲ್ಲಿ ಆಂಗ್ಲ ಮಾಧ್ಯಮ ಆರಂಭಿಸಲು ನಿರ್ಧರಿಸಿದೆ. ಸರ್ಕಾರಿ ಶಾಲೆಗಳಲ್ಲೇ ಆಂಗ್ಲಮಾಧ್ಯಮ ಆರಂಭವಾದರೆ ಗ್ರಾಮೀಣ ಪ್ರದೇಶ ಪಾಲಕರು ತಮ್ಮ ಮಕ್ಕಳನ್ನು ಮತ್ತೆ ಸರ್ಕಾರಿ ಶಾಲೆಗಳಿಗೆ ಸೇರಿಸುತ್ತಾರೆ ಎಂಬುದು ಸರ್ಕಾರದ ಚಿಂತನೆಯಾಗಿದೆ. ಹೀಗಾಗಿ ರಾಜ್ಯದಲ್ಲಿ ಸರ್ಕಾರಿ ಶಾಲೆಗಳಲ್ಲಿ ಆಂಗ್ಲಮಾದ್ಯಮ ಆರಂಭಿಸಲು ಅನುಮತಿ ನೀಡಿದೆ.

ರಾಜ್ಯ ಸರ್ಕಾರ 2024–25ನೇ ಸಾಲಿನಿಂದ ರಾಜ್ಯಾದ್ಯಂತ 75ಕ್ಕೂ ಹೆಚ್ಚು ಮಕ್ಕಳ ದಾಖಲಾತಿ ಇರುವ 1,419 ಸರ್ಕಾರಿ ಪ್ರಾಥಮಿಕ ಶಾಲೆಗಳಲ್ಲಿ ಹಾಲಿ ಇರುವ ಕನ್ನಡ ಮಾಧ್ಯಮದ ಜೊತೆಗೆ 1ನೇ ತರಗತಿಯಿಂದ ಆಂಗ್ಲ ಮಾಧ್ಯಮದಲ್ಲಿ (ದ್ವಿ ಭಾಷಾ ಮಾಧ್ಯಮ) ತರಗತಿಗಳನ್ನು ಪ್ರಾರಂಭಿಸಲು ಒಪ್ಪಿಗೆ ನೀಡಿ ಆದೇಶಿಸಿದೆ.

**ಆಧಾರ**: ಸಂಯುಕ್ತ ಕರ್ನಾಟಕ, ದಿನಾಂಕ: 18.06.2024

## 8. ವಿಧಾನಸೌಧ ಬಳಿ ಭುವನೇಶ್ವರಿ ಪ್ರತಿಮೆ

ವಿಧಾನಸೌಧದ ಆವರಣದಲ್ಲಿ ನಾಡದೇವತೆ ಭುವನೇಶ್ವರಿ ದೇವಿಯ 25 ಅಡಿಯ ಕಂಚಿನ ಪ್ರತಿಮೆ ಸ್ಥಾಪನೆಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಗುರುವಾರ(ಜೂನ್ 20)ದಂದು ಭೂಮಿಪೂಜೆ ನೆರವೇರಿಸಲಿದ್ದಾರೆ.

ಮೈಸೂರು ರಾಜ್ಯವು ಕರ್ನಾಟಕ ಎಂದು ಮರುನಾಮಕರಣವಾಗಿ 2023 ನವೆಂಬರ್ 1ಕ್ಕೆ 50ವರ್ಷ ಪೂರ್ಣಗೊಂಡಿದೆ. ಈ ಹಿನ್ನೆಲೆಯಲ್ಲಿ **'ಕರ್ನಾಟಕ ಸಂಭ್ರಮ 50'** ಹೆಸರಾಯಿತು. ಕರ್ನಾಟಕ ಉಸಿರಾಗಲಿ ಕನ್ನಡ ಅಭಿಯಾನದ ಅಂಗವಾಗಿ ವಿಧಾನಸೌಧದ ಆವರಣದಲ್ಲಿ ನಾಡದೇವಿ ಭುವನೇಶ್ವರಿ ದೇವಿಯ ಕಂಚಿನ ಪ್ರತಿಮೆ ಸ್ಥಾಪಿಸಲು ಈಗಾಗಲೇ ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ. ಅಂದಾಜು ರೂ.21.24 ಕೋಟಿ ವೆಚ್ಚದಲ್ಲಿ ಕಂಚಿನ ಪ್ರತಿಮೆ ನಿರ್ಮಾಣವಾಗಲಿದ್ದು, ನವೆಂಬರ್ 1ರೊಳಗೆ ಪೂರ್ಣಗೊಳಿಸುವ ಗುರಿಯನ್ನು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹೊಂದಿದೆ. ಈಗಾಗಲೇ ಭುವನೇಶ್ವರಿ ದೇವಿಯ ಪ್ರತಿಮೆ ಸ್ಥಾಪನೆ ಸಂಬಂಧ ಎಸ್. ಶಿವರಾಜು ಎನ್ನುವ ಗುತ್ತಿಗೆದಾರರು ಮತ್ತು ಗೊಂಬೆ ಮನೆ ಕೆ.ಶ್ರೀಧರಮೂರ್ತಿ ಎಂಬ ಶಿಲ್ಪಿಗಳಿಗೆ ಜವಾಬ್ದಾರಿ ವಹಿಸಲಾಗಿದೆ. ನಿಗದಿತ ಅವಧಿಯಲ್ಲಿ ಪೂರ್ಣಗೊಂಡ ಕಂಚಿನ ಪ್ರತಿಮೆಯನ್ನು ವಿಧಾನಸೌಧದ ಪಶ್ಚಿಮ ದಿಕ್ಕಿನ ಗೇಟ್ ನಂ.1, 2 ನಡುವೆ ಇರುವ ವಾಹನ ನಿಲುಗಡೆ ಸ್ಥಳದಲ್ಲಿ ಅನಾವರಣ ಮಾಡಲಾಗುವುದು.

**ಆಧಾರ**: ಕನ್ನಡ ಪ್ರಭ, ದಿನಾಂಕ: 20.06.2024

## 9. ಗಾಂಧಿ ಜೊತೆ ಅಂಬೇಡ್ಕರ್ ಚಿತ್ರ ಕಡ್ಡಾಯ

ರಾಜ್ಯದ ಸರ್ಕಾರಿ ಕಛೇರಿ, ಶಾಲಾ ಕಾಲೇಜು ಸೇರಿದಂತೆ ಗಣರಾಜ್ಯೋತ್ಸವ, ಸ್ವಾತಂತ್ರ್ಯ ದಿನಾಚರಣೆ ಹಾಗೂ ಸಂವಿಧಾನ ದಿನಾಚರಣೆ ಅಂಗವಾಗಿ ನಡೆಯುವ ಎಲ್ಲಾ ಸರ್ಕಾರಿ ಕಾರ್ಯಕ್ರಮಗಳಲ್ಲೂ ಮಹಾತ್ಮ ಗಾಂಧೀಜಿ ಭಾವಚಿತ್ರದ ಜತೆಗೆ ಸಂವಿಧಾನ ಶಿಲ್ಪಿ ಡಾ.ಬಿ.ಆರ್.ಅಂಬೇಡ್ಕರ್ ಅವರ ಭಾವಚಿತ್ರವನ್ನು ಕಡ್ಡಾಯವಾಗಿ ಇಡಬೇಕು ಎಂದು ಸಚಿವ ಸಂಪುಟ ಸಭೆಯಲ್ಲಿ ತೀರ್ಮಾನಿಸಲಾಗಿದೆ ಎಂದು ಸಚಿವ ಹೆಚ್.ಕೆ.ಪಾಟೀಲ್ ತಿಳಿಸಿದ್ದಾರೆ.

**ಆಧಾರ**: ಕನ್ನಡ ಪ್ರಭ, ದಿನಾಂಕ: 21.06.2024

## 10. ಕರ್ನಾಟಕ ನಿವಾಸಿಗಳಿಗೆಲ್ಲ ಕನ್ನಡ ಕಡ್ಡಾಯ

ಕನ್ನಡಿಗರು ಉದಾರಿಗಳಾಗಿರುವುದರಿಂದ ಬೇರೆ ಭಾಷಿಗರು ಕನ್ನಡ ಕಲಿಯದೆ ಬದುಕುವ ವಾತಾವರಣ ಕರ್ನಾಟಕದಲ್ಲಿದೆ. ಕನ್ನಡ ನಾಡಿನಲ್ಲಿ ವಾಸಿಸುವ ಪ್ರತಿಯೊಬ್ಬರೂ ಕನ್ನಡವನ್ನು ಕಡ್ಡಾಯವಾಗಿ ಕಲಿಯುವಂಥ ವಾತಾವರಣ ಸೃಷ್ಟಿಸಬೇಕು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ವಿಧಾನಸೌಧದ ಪಶ್ಚಿಮದ್ವಾರದ ಬಳಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ಕರ್ನಾಟಕ ನಾಮಕರಣ ಸುವರ್ಣ ಮಹೋತ್ಸವ ಅಂಗವಾಗಿ ನಾಡದೇವಿ ಭುವನೇಶ್ವರಿ ಕಂಚಿನ ಪ್ರತಿಮೆ ನಿರ್ಮಿಸಲು ಭೂಮಿಪೂಜೆ ನೆರವೇರಿಸಿ ಮಾತನಾಡಿದರು.

ತಮಿಳುನಾಡು, ಆಂಧ್ರ, ಕೇರಳಕ್ಕೆ ಹೋದರೆ ಅವರ ಮಾತೃಭಾಷೆಯಲ್ಲಿಯೇ ಮಾತನಾಡುತ್ತಾರೆ. ನಾವೂ ನಮ್ಮ ಮಾತೃಭಾಷೆಯಲ್ಲಿಯೇ ವ್ಯವಹರಿಸಬೇಕು. ಅದು ನಮಗೆ ಹೆಮ್ಮೆಯ ವಿಷಯವಾಗಬೇಕು ಎಂದರು. ಕನ್ನಡ ಭಾಷೆ, ನೆಲ, ಜಲ, ಸಂರಕ್ಷಣೆ ಮಾಡಿಕೊಂಡು ಹೋಗುವ ಕೆಲಸ ಪ್ರತಿಯೊಬ್ಬ ಕನ್ನಡಿಗನ ಜವಾಬ್ದಾರಿ ಎಂದರು.

ಮಾತೃಭಾಷೆಯಲ್ಲಿ ಮಾತನಾಡುವುದು ಹೆಮ್ಮೆಯ ಸಂಗತಿಯಾಗಬೇಕು. ಪ್ರತಿಯೊಬ್ಬರೂ ಕರ್ನಾಟಕದಲ್ಲಿ ಬದುಕುವವರೊಂದಿಗೆ ಕನ್ನಡದಲ್ಲಿಯೇ ಮಾತನಾಡುತ್ತೇನೆ. ಕನ್ನಡ ಬಿಟ್ಟು ಬೇರೆ ಭಾಷೆ ಮಾತನಾಡುವುದಿಲ್ಲ ಎಂದು ತೀರ್ಮಾನ ಮಾಡಬೇಕು ಕನ್ನಡದ ವಾತಾವರಣ ನಿರ್ಮಾಣ ಮಾಡುವುದು ನಮ್ಮೆಲ್ಲರ ಕರ್ತವ್ಯ ಎಂದು ಸಿಎಂ ಹೇಳಿದರು. ಕನ್ನಡಿಗರು ದುರಭಿಮಾನಿಗಳಲ್ಲ. ಕನ್ನಡ ಭಾಷೆ, ನೆಲ, ನಾಡಿನ ಬಗ್ಗೆ ಗೌರವ ಅಭಿಮಾನ ಬೆಳಸಿಕೊಳ್ಳಬೇಕು ಎಂದು ಸಿದ್ದರಾಮಯ್ಯ ಹೇಳಿದರು.

ವಿಧಾನ ಪರಿಷತ್ ಸಭಾಪತಿ ಬಸವರಾಜ ಎಸ್. ಹೊರಟ್ಟಿ, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಕನ್ನಡ ಮತ್ತು ಸಂಸ್ಕೃತಿ ಸಚಿವ ಶಿವರಾಜ್ ತಂಗಡಗಿ, ಸಚಿವರಾದ ಸತೀಶ್ ಜಾರಕಿಹೊಳಿ, ಎಚ್.ಕೆ.ಪಾಟೀಲ, ರಾಮಲಿಂಗಾರೆಡ್ಡಿ, ಡಾ.ಎಂ.ಸಿ.ಸುಧಾಕರ್, ಕೆ.ಎನ್.ರಾಜಣ್ಣ, ಶಾಸಕ ರಿಜ್ವಾನ್ ಅರ್ಷದ್ ಅಧ್ಯಕ್ಷತೆ ವಹಿಸಿದ್ದರು.

**ಆಧಾರ**: ವಿಜಯವಾಣಿ, ದಿನಾಂಕ: 21.06.2024

## 11. ಇಸ್ರೋ ಸ್ಪೇಸ್‌ಶಿಪ್ 3ನೇ ಪ್ರಯೋಗವೂ ಯಶಸ್ವಿ

ರಾಕೆಟ್ ಉಡಾವಣೆ ವೆಚ್ಚವನ್ನು ಅಪಾರ ಪ್ರಮಾಣದಲ್ಲಿ ತಗ್ಗಿಸುವ ಉದ್ದೇಶದಿಂದ ಭಾರತೀಯ ಬಾಹ್ಯಾಕಾಶ ಸಂಸ್ಥೆ (ಇಸ್ರೋ) ನಡೆಸುತ್ತಿರುವ ಮರುಬಳಕೆಯ ರಾಕೆಟ್ ಪ್ರಯೋಗ ಸತತ 3ನೇ ಬಾರಿಯೂ ಯಶಸ್ವಿಯಾಗಿದೆ. ಮರುಬಳಕೆಯ ಉಡ್ಡಾಯನ ವಾಹಕ ಪುಷ್ಪಕ್ ಪ್ರಯೋಗ ಚಿತ್ರದುರ್ಗದ ಚಳ್ಳಕೆರೆಯಲ್ಲಿ ಮುಂಜಾನೆ ಸುಸೂತ್ರವಾಗಿ ನಡೆದಿದೆ.

ಅತ್ಯಂತ ಕ್ಲಿಷ್ಟಕರವಾದ ಸವಾಲಿನ ಸನ್ನಿವೇಶಗಳಲ್ಲಿ ಪುಷ್ಪಕ್ ಸ್ವಯಂಚಾಲಿತವಾಗಿ ಲ್ಯಾಂಡ್ ಆಗುವ ಸಾಮರ್ಥ್ಯ ಪರೀಕ್ಷಿಸುವ ಉದ್ದೇಶದಿಂದ ಈ ಪ್ರಯೋಗವನ್ನು ಕೇಂದ್ರಿಕರಿಸಲಾಗಿತ್ತು. ಅದು ಯಶಸ್ವಿಯಾಗಿದೆ. ವಿಮಾನದ ರೀತಿ ರೆಕ್ಕೆಗಳನ್ನು ಹೊಂದಿರುವ ಪುಷ್ಪಕ್ ವಾಹಕವನ್ನು ಭಾರತೀಯ ವಾಯುಪಡೆಯ ಚಿನೂಕ್ ಹೆಲಿಕಾಪ್ಟರ್ ಮೂಲಕ ಭೂಮಿಯಿಂದ 4.5ಕಿ.ಮೀ. ಎತ್ತರಕ್ಕೆ ಒಯ್ಯಲಾಯಿತು. ಬಳಿಕ ರನ್‌ವೇಯಿಂದ 4.5ಕಿ.ಮೀ ಎತ್ತರದಲ್ಲಿರುವಾಗ ಅದನ್ನು ಕೆಳಕ್ಕೆ ಬಿಡಲಾಯಿತು. ಪುಷ್ಪಕ್

ಸ್ವಯಂಚಾಲಿತವಾಗಿ ತನ್ನ ಮಾರ್ಗವನ್ನು ಸರಿಪಡಿಸಿಕೊಂಡು, ರನ್‌ವೇಯನ್ನು ಸಮೀಪಿಸಿತು. ರನ್‌ವೇಯ ಕೇಂದ್ರ ಪಥದಲ್ಲಿ ಅತ್ಯಂತ ನಿಖರವಾಗಿ ಲ್ಯಾಂಡ್ ಆಯಿತು. ಕೂಡಲೇ ಬ್ರೇಕ್ ಪ್ಯಾರಾಶೂಟ್‌ಗಳನ್ನು ಬಳಸಿ ವೇಗವನ್ನು ಗಂಟೆಗೆ 100 ಕಿ.ಮೀ.ಗೆ ತಗ್ಗಿಸಿತು. ನಂತರ ಗೇರ್ ಬ್ರೇಕ್‌ಗಳನ್ನು ಬಳಸಿ ರನ್ ವೇಯಲ್ಲಿ ನಿಂತಿತು.

ಲ್ಯಾಂಡ್ ಆಗುವಾಗ ಪುಷ್ಪಕ್‌ನ ವೇಗ ಗಂಟೆಗೆ 320 ಕಿಲೋಮೀಟರ್ ಇತ್ತು. ಸಾಮಾನ್ಯವಾಗಿ ಪ್ರಯಾಣಿಕ ವಿಮಾನಗಳ ಲ್ಯಾಂಡಿಂಗ್ ಆಗುವ ವೇಳೆ ಅವುಗಳ ವೇಗ 260 ಕಿ.ಮೀ ಆಸುಪಾಸಿನಲ್ಲಿ ಇದ್ದರೆ, ಯುದ್ಧ ವಿಮಾನಗಳ ವೇಗ 280 ಕಿ.ಮೀ. ಇರುತ್ತದೆ.

**ಆಧಾರ:** ಕನ್ನಡ ಪ್ರಭ, ದಿನಾಂಕ: 24.06.2024

## 12. ನಿಗಮ–ಮಂಡಳಿ ಸದಸ್ಯರ ಆಯ್ಕೆಗೆ ಡಾ: ಪರಂ ಸಮಿತಿ

ನಿಗಮ ಮಂಡಳಿಗಳಿಗೆ ಅಧ್ಯಕ್ಷ ಹಾಗೂ ಉಪಾಧ್ಯಕ್ಷರ ಪಟ್ಟಿ ಸಿದ್ಧಪಡಿಸುವಾಗ ನಮ್ಮ ಅಭಿಪ್ರಾಯವನ್ನು ಯಾರೂ ಕೇಳಿಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದ್ದ ಗೃಹ ಸಚಿವ ಡಾ.ಜಿ.ಪರಮೇಶ್ವರ್ ಅವರ ಅಧ್ಯಕ್ಷತೆಯಲ್ಲೇ ನಿಗಮ–ಮಂಡಳಿಗಳಿಗೆ ನಿರ್ದೇಶಕರು/ಸದಸ್ಯರ ಆಯ್ಕೆಗೆ ಸಮಿತಿ ರಚನೆ ಮಾಡಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಆದೇಶ ಮಾಡಿದ್ದಾರೆ.

ಜತೆಗೆ, ಸಮಿತಿಯು ನಿಗಮ–ಮಂಡಳಿ ಸದಸ್ಯರ ಪಟ್ಟಿಯನ್ನು ಸಿದ್ಧಪಡಿಸಿ ಒಂದು ತಿಂಗಳ ಒಳಗಾಗಿ ಸಲ್ಲಿಕೆ ಮಾಡಬೇಕು ಎಂದು ಸಿದ್ದರಾಮಯ್ಯ ತಿಳಿಸಿದ್ದಾರೆ. ಈ ಹಿಂದೆ ನಿಗಮ–ಮಂಡಳಿಗಳಿಗೆ ಅಧ್ಯಕ್ಷ ಉಪಾಧ್ಯಕ್ಷರ ಪಟ್ಟಿ ಸಿದ್ಧಪಡಿಸುವಾಗ ನಮ್ಮ ಅಭಿಪ್ರಾಯ ಕೇಳಿಲ್ಲ ಎಂದು ಪರಮೇಶ್ವರ್ ಅಸಮಾಧಾನ ವ್ಯಕ್ತಪಡಿಸಿದ್ದರು. ನಾನು ಸಹ ಎಂಟು ವರ್ಷ ಪಕ್ಷದ ಅಧ್ಯಕ್ಷನಾಗಿದ್ದವನು. ಯಾರೆಲ್ಲ ಕೆಲಸ ಮಾಡಿದ್ದಾರೆ ಮಾಡಿಲ್ಲ ಎಂಬುದು ಗೊತ್ತಿರುತ್ತದೆ. ಕೆಲಸ ಮಾಡದವರಿಗೆ ಅವಕಾಶ ನೀಡಿದರೆ ಕೆಲಸ ಮಾಡಿದವರಿಗೆ ನೋವು ಅಸಮಾಧಾನವಾಗುತ್ತದೆ. ಹೀಗಾಗಿ ಮುಖಂಡರು ಜಿಲ್ಲಾ ಅಧ್ಯಕ್ಷರ ಸಲಹೆ ಪಡೆಯಬೇಕಾಗುತ್ತದೆ ಎಂದಿದ್ದರು.

ಇದೀಗ ಆದೇಶ ಹೊರಡಿಸಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ, ನಿಗಮ–ಮಂಡಳಿಗಳ ನಿರ್ದೇಶಕರು/ಸದಸ್ಯರುಗಳನ್ನು ಆಯ್ಕೆ ಮಾಡಲು ಗೃಹ ಸಚಿವ ಪರಮೇಶ್ವರ್ ಅವರ ಅಧ್ಯಕ್ಷತೆಯಲ್ಲಿ ಸಮಿತಿ ರಚನೆ ಮಾಡಿದ್ದಾರೆ. ಸಮಿತಿಗೆ ಕಾರ್ಮಿಕ ಸಚಿವ ಸಂತೋಷ್ ಲಾಡ್ ಹಾಗೂ ಶಿವಾಜಿನಗರ ಶಾಸಕ ರಿಜ್ವಾನ್ ಅರ್ಷದ್ ಅವರನ್ನು ಸದಸ್ಯರನ್ನಾಗಿ ನೇಮಿಸಲಾಗಿದೆ.

ಸಮಿತಿಯು ಕೂಡಲೇ ಕಾರ್ಯಪ್ರವೃತ್ತವಾಗಿ ಒಂದು ತಿಂಗಳ ಒಳಗೆ ನಿರ್ದೇಶಕರು ಅಥವಾ ಸದಸ್ಯರುಗಳ ಪಟಿಯನ್ನು ಸಿದ್ಧಪಡಿಸಿ ಸಲ್ಲಿಸಬೇಕು ಎಂದು ಸಿದ್ದರಾಮಯ್ಯ ಸೂಚಿಸಿದ್ದಾರೆ.

**ಆಧಾರ:** ಪ್ರಜಾವಾಣಿ, ದಿನಾಂಕ: 25.06.2024

## 13. ಪರಿಶಿಷ್ಟರ ಭೂಮಿ ವರ್ಗಾವಣೆಗೆ ನಿಯಮ ಬಿಗಿ

ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಸಮುದಾಯಕ್ಕೆ ಸರ್ಕಾರ ನೀಡಿದ ಭೂಮಿಯನ್ನು ವರ್ಗಾವಣೆ ಮಾಡಲು ಹಾಲಿ ಇರುವ ಕಾಯ್ದೆಯಲ್ಲಿನ ನಿಯಮಗಳಿಗೆ ತಿದ್ದುಪಡಿ ಮಾಡಿ ಸರ್ಕಾರ ಆದೇಶ ಹೊರಡಿಸಿದೆ.

ಕರ್ನಾಟಕ ಅನುಸೂಚಿತ ಜಾತಿಗಳ ಮತ್ತು ಅನುಸೂಚಿತ ಬುಡಕಟ್ಟುಗಳ (ಕೆಲವು ಭೂಮಿಗಳ ವರ್ಗಾವಣೆ ನಿಷೇಧ) ನಿಯಮಗಳು 1979 ರಲ್ಲಿನ ನಿಯಮಗಳನ್ನು ತಿದ್ದುಪಡಿ ಮಾಡಿ ರಾಜ್ಯಪತ್ರದಲ್ಲಿ ಪ್ರಕಟಿಸಲಾಗಿದೆ. ಪರಿಶಿಷ್ಟ ಜಾತಿ ಮತ್ತು ಪಂಗಡಗಳಿಗೆ ಮಂಜೂರು ಮಾಡಿದ ಭೂಮಿಗಳನ್ನು ಮಾರಾಟ ಇಲ್ಲವೇ ವರ್ಗಾವಣೆ ಮಾಡಲು ಕೋರಿ ಬಂದ ಅರ್ಜಿಗಳನ್ನು ಹಲವು ಹಂತದಲ್ಲಿ ಪರಿಶೀಲನೆ ನಂತರವೇ ಅನುಮತಿ ನೀಡಲು ಅವಕಾಶವಾಗುವಂತೆ ಬಿಗಿ ನಿಯಮಗಳನ್ನು ಕಾಯ್ದೆಯಲ್ಲಿ ಸೇರ್ಪಡೆ ಮಾಡಲಾಗಿದೆ.

ಮಂಜೂರಾದ ಭೂಮಿಯ ವರ್ಗಾವಣೆ ಅನುಮತಿ ಕೋರುವ ಮಂಜೂರಾತಿ ಪಡೆದವನು ಅಥವಾ ಆತನ ಕಾನೂನು ಸಮ್ಮತ ವಾರಸುದಾರನು ನಿಗದಿಪಡಿಸಿದ ನಮೂನೆಯಲ್ಲಿ ಅರ್ಜಿಯನ್ನು ಭರ್ತಿ ಮಾಡಿ ತಾಲ್ಲೂಕು ತಹಶೀಲ್ದಾರನಿಗೆ ಖುದ್ದಾಗಿ ಸಲ್ಲಿಸಬೇಕು. ತಹಶೀಲ್ದಾರನು ಸೂಕ್ತವಾದ ವಿಚಾರಣೆ ಮಾಡಿ ಸಲ್ಲಿಸಿದ ದಾಖಲೆ ಪರಿಶೀಲನೆ ತನ್ನ ಅಭಿಪ್ರಾಯಗಳನ್ನು ದಾಖಲಿಸಿ ಉಪವಿಭಾಗಾಧಿಕಾರಿಗೆ ಸಲ್ಲಿಸಬೇಕು.

ನಂತರ ಉಪವಿಭಾಗಾಧಿಕಾರಿ ಈ ವರದಿಯನ್ನು ಸಂಪೂರ್ಣವಾಗಿ ಪರಿಶೀಲಿಸಿದ ನಂತರ ಭೂಮಿಯ ವರ್ಗಾವಣೆಗೆ ಅನುಮತಿ ನೀಡಬಹುದು ಎಂಬ ಬಗ್ಗೆ ಜಿಲ್ಲಾಧಿಕಾರಿಗೆ ಶಿಫಾರಸು ಮಾಡಬೇಕಾಗುತ್ತದೆ.

ಪರಿಶೀಲನೆ ವೇಳೆ ದಬ್ಬಾಳಿಕೆ, ತಪ್ಪು ನಿರೂಪಣೆ, ಮೋಸ ಅಥವಾ ಭೂಮಿಯ ತಪ್ಪು ಮೌಲ್ಯ ನಿರ್ಧಾರ ಇರುವುದನ್ನು ಖಚಿತಪಡಿಸಿಕೊಳ್ಳುವ ವಿಚಾರಣೆ ನಡೆಸುವ ಅಧಿಕಾರ ಹೊಂದಿರುತ್ತಾರೆ. ಇಂತಹ ಯಾವುದೇ ತಪ್ಪು ಕಂಡು ಬಂದಲ್ಲಿ ಭೂಮಿಯ ವರ್ಗಾವಣೆಗಾಗಿ ಅನುಮತಿ ನಿರಾಕರಿಸುವಂತೆ ಶಿಫಾರಸ್ಸು ಮಾಡತಕ್ಕದ್ದು ಎಂಬ ನಿಯಮ ಸೇರ್ಪಡೆ ಮಾಡಲಾಗಿದೆ.

ಉಪವಿಭಾಗಾಧಿಕಾರಿಯಿಂದ ಬಂದ ದಸ್ತಾವೇಜು ಮತ್ತು ವರದಿ ಪರಿಶೀಲಿಸಿದ ನಂತರ ಕಂದಾಯ ಆಯುಕ್ತರಿಗೆ ಭೂಮಿ ವರ್ಗಾವಣೆ ಕುರಿತು ಅನುಮತಿ ಅರ್ಜಿಯನ್ನು ತಮ್ಮ ಶಿಫಾರಸಿನೊಂದಿಗೆ ಕಂದಾಯ ಆಯುಕ್ತರಿಗೆ ಅರ್ಜಿಯನ್ನು ಪರಿಷ್ಕರಿಸಿ ಭೂಮಿಯ ವರ್ಗಾವಣೆಗೆ ಸರ್ಕಾರದ ಅನುಮತಿ ಅಥವಾ ನಿರ್ಧಾರಕ್ಕಾಗಿ ಅಪರ ಮುಖ್ಯ ಕಾರ್ಯದರ್ಶಿ/ಪ್ರಧಾನ ಕಾರ್ಯದರ್ಶಿ/ಕಾರ್ಯದರ್ಶಿ(ಕಂದಾಯ) ಅವರಿಗೆ ಭೂಮಿ ವರ್ಗಾವಣೆ ಕುರಿತ ಎಲ್ಲ ಅರ್ಜಿಗಳನ್ನು ತಮ್ಮ ಶಿಫಾರಸ್ಸುಗಳೊಂದಿಗೆ ಸಲ್ಲಿಸಬೇಕು.

ಆ ಅಧಿಕಾರಿಗಳು ಕೆಳ ಹಂತದ ಅಧಿಕಾರಿಗಳು ಸಲ್ಲಿಸಿದ ಶಿಫಾರಸ್ಸುಗಳನ್ನು ಪರಿಶೀಲಿಸಿ ಸರ್ಕಾರದ ಅನುಮತಿ/ನಿರ್ಧಾರವನ್ನು ಕಂದಾಯ ಆಯುಕ್ತರಿಗೆ ತಿಳಿಸಬೇಕು. ಭೂಮಿ ವರ್ಗಾವಣೆಗೆ ಅನುಮೋದನೆ ಪಡೆದ ನಂತರ ಕಂದಾಯ ಆಯುಕ್ತರು ಅನುಮತಿ ನೀಡಿ ಆದೇಶ ಹೊರಡಿಸಬೇಕು. ಸರ್ಕಾರದಿಂದ ಅನುಮತಿ ದೊರೆತ ನಂತರ ಉಪವಿಭಾಗಾಧಿಕಾರಿ ವರ್ಗಾವಣೆಗೆ ಅನುವಾಗುವಂತೆ ಸದರಿ ಭೂಮಿಯಿಂದ ಪಿಟಿಸಿಎಲ್ ನಿಶಾನೆಯನ್ನು ತೆಗೆದು ಹಾಕಲಿದ್ದಾರೆ ಎಂದು ನಿಯಮದಲ್ಲಿ ವಿವರಿಸಲಾಗಿದೆ.

**ಆಧಾರ**: ಕನ್ನಡ ಪ್ರಭ, ದಿನಾಂಕ: 27.06.2024

# ಭಾಗ–6

# ನ್ಯಾಯಾಲಯ ಸುದ್ದಿ

## 1. ನಾಡಗೀತೆ ಖಾಸಗಿ ಶಾಲೆಗೂ ಕಡ್ಡಾಯ: ಸರ್ಕಾರ

ದಿವಂಗತ ಮೈಸೂರು ಅನಂತಸ್ವಾಮಿ ಸಂಯೋಜಿಸಿದ್ದ ಧಾಟಿಯಲ್ಲಿ ನಾಡಗೀತೆ ಹಾಡುವುದನ್ನು ಕಡ್ಡಾಯಗೊಳಿಸಿ ಹೊರಡಿಸಿರುವ ಆದೇಶ ರಾಜ್ಯದ ಖಾಸಗಿ ಶಾಲೆಗಳಿಗೂ ಅನ್ವಯಿಸಲಿದೆ ಎಂದು ಸರ್ಕಾರ ಹೈಕೋರ್ಟ್‌ಗೆ ಸ್ಪಷ್ಟೀಕರಣ ನೀಡಿದೆ.

ದಿವಂಗತ ಮೈಸೂರು ಅನಂತಸ್ವಾಮಿ ಸಂಯೋಜಿಸಿದ್ದ ಧಾಟಿಯಲ್ಲಿ 2 ನಿಮಿಷ 30 ಸೆಕೆಂಡ್‌ಗಳ ನಾಡಗೀತೆ ಹಾಡುವುದನ್ನು ಕಡ್ಡಾಯಗೊಳಿಸಿ ರಾಜ್ಯ ಸರ್ಕಾರ 2023ರ ಸೆ.25ರಂದು ಹೊರಡಿಸಿರುವ ಆದೇಶ ರದ್ದುಪಡಿಸುವಂತೆ ಕೋರಿ ಗಾಯಕ ಕಿಕ್ಕೇರಿ ಕೃಷ್ಣಮೂರ್ತಿ ಸಲ್ಲಿಸಿರುವ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಕೃಷ್ಣ ಎಸ್. ದೀಕ್ಷಿತ್ ಅವರ ಪೀಠಕ್ಕೆ ಸರ್ಕಾರಿ ವಕೀಲರು ಈ ಸ್ಪಷ್ಟನೆ ನೀಡಿದರು.

ಸಕಾರದ ಸ್ಪಷ್ಟೀಕರಣ ಆಲಿಸಿದ ಬಳಿಕ ಪ್ರತಿಕ್ರಿಯಿಸದ ನ್ಯಾಯಪೀಠ, ನಾಡಗೀತೆಯನ್ನು ನಿರ್ದಿಷ್ಟ ರಾಗದಲ್ಲಿ ಹಾಡುವುದನ್ನು ಕಡ್ಡಾಯ ಮಾಡಿ ಸರ್ಕಾರ ಹೊರಡಿಸಿರುವ ಆದೇಶಕ್ಕೆ ಯಾವುದೇ ಶಾಸನವಿಲ್ಲ ಎಂಬುದಾಗಿ ಅರ್ಜಿದಾರರು ಆಕ್ಷೇಪಿಸಿದ್ದಾರೆ. ಹಾಗಾದರೆ, ಇಂತಹ ಆದೇಶ ಹೊರಡಿಸಲು ಸರ್ಕಾರ ಯಾವ ಶಾಸನಾತ್ಮಕ ಅಧಿಕಾರ ಹೊಂದಿದೆ ಎಂದು ಪ್ರಶ್ನಿಸಿತು. ಸರ್ಕಾರದ ವಕೀಲರು, ಈ ಕುರಿತು ರಾಜ್ಯ ಸರ್ಕಾರದಿಂದ ಅಗತ್ಯ ಮಾಹಿತಿ ಪಡೆದು ವಿವರಣೆ ನೀಡಲಾಗುವುದು ಎಂದು ಭರವಸೆ ನೀಡಿದರು.

ಅದಕ್ಕೆ ಅತೃಪ್ತಿ ವ್ಯಕ್ತಪಡಿಸಿದ ಹೈಕೋರ್ಟ್, ನಾಡಗೀತೆ ಸಾಂವಿಧಾನಿಕವಾಗಿ ಅತ್ಯಂತ ಸೂಕ್ಷ್ಮ ವಿಚಾರವಾಗಿದೆ. ನಾಡಗೀತೆ ವಿಚಾರದಲ್ಲಿ ರಾಜ್ಯ ಸರ್ಕಾರ ಏಕೆ ಹೀಗೆ ಗೊಂದಲ ಆದೇಶಗಳನ್ನು ಹೊರಡಿಸುತ್ತಿದೆ? ಒಂದು ಆದೇಶ ಹೊರಡಿಸಿ ನಂತರ ಅದನ್ನು ಹಿಂಪಡೆದು ತಿದ್ದುಪಡಿ ಆದೇಶ ಹೊರಡಿಸುತ್ತಿದೆ. ಇನ್ನೂ ನಿರ್ದಿಷ್ಟ ರಾಗದಲ್ಲಿ ನಾಡಗೀತೆ ಹಾಡುವುದನ್ನು ಕಡ್ಡಾಯಗೊಳಿಸಲು ಸಂವಿಧಾನದ ಅಥವಾ ಇತರೆ ಶಾಸನದ ಬೆಂಬಲವಿರಬೇಕು. ಸರ್ಕಾರ ವಿವೇಚನಾಧಿಕಾರ ಬಳಸಿ ಕಾರ್ಯಕಾರಿ ಆದೇಶ ಹೊರಡಿಸಲಾಗದು. ಈ ಬಗ್ಗೆ ಸಮಗ್ರವಾದ ವಿವರಣೆ ಎಂದು ಸೂಚಿಸಿ ವಿಚಾರಣೆಯನ್ನು ಮುಂದೂಡಿತು.

ಅಲ್ಲದೆ, ಮುಂದಿನ ವಿಚಾರಣೆ ವೇಳೆ ನ್ಯಾಯಾಲಯ ಕೇಳಿರುವ ಪ್ರಶ್ನೆಗಳಿಗೆ ಹಾಗೂ ಅರ್ಜಿದಾರರು ಎತ್ತಿರುವ ಆಕ್ಷೇಪಣೆಗಳಿಗೆ ಸರ್ಕಾರ ಕಾನೂನಿನ ನೆಲಗಟ್ಟಿನಲ್ಲಿ ಸಮರ್ಪಕ ಉತ್ತರ ನೀಡಬೇಕು. ಹೆಚ್ಚುಕಾಲ ಈ ಅರ್ಜಿ ವಿಚಾರಣೆ ಮುಂದೂಡುತ್ತಾ ಹೋಗಲು ಸಾಧ್ಯವಿಲ್ಲ. ನ್ಯಾಯಾಲಯ ತ್ವರಿತವಾಗಿ ತನ್ನ ನಿರ್ಧಾರ ಪ್ರಕಟಿಸುವ ಮೂಲಕ ಅರ್ಜಿ ವಿಲೇವಾರಿ ಮಾಡಬೇಕಿದೆ. ಸರ್ಕಾರವು ವಿವರಣೆ ನೀಡಿದ ಬಳಿಕ ನ್ಯಾಯಾಲಯ ತೀರ್ಪು ಪ್ರಕಟಿಸಲಿದೆ. ನ್ಯಾಯಾಲಯದಲ್ಲಿ ವಾದ ಮಂಡಿಸುವ ಮುನ್ನ ಸರ್ಕಾರಿ ವಕೀಲರು ವಿಚಾರಕ್ಕೆ ಸಂಬಂಧಿಸದ ಎಲ್ಲಾ ವಿವರಗಳು, ಕಾನೂನುಗಳನ್ನು ಪರಿಶೋಧಿಸಿ, ಮಾಹಿತಿ ನೀಡಬೇಕು ಎಂದು ಮೌಖಿಕವಾಗಿ ಸೂಚಿಸಿತು.

**ಆಧಾರ:** ಕನ್ನಡ ಪ್ರಭ, ದಿನಾಂಕ: 04.04.2024

## 2. Several States are coming to court against Centre:SC

The Supreme Court said a steady stream of states are compelled to approach it against the Centre while cautioning the Union government against entering into a contest with water- starved Karnataka over its request for drought relief.

"Let there be no contest here between the Union and the State. We are seeing Various State governments having to appear in court, Justice B.R.Gavai heading the Bench, addressed Attorney Genral R Venkataramani and Solicitor-General Tushar Mehta, both appearing for the Union government.

Recently, the Tamil Nadu Government accused the Centre in the Supreme Court of treating the people of the State in a " step motherly" fashion by delaying the release of disaster relief funds to the tune of nearly Rs.38,000 crore to help tide over the twin calamities of cyclone Michaung and unprecedented floods in the State's southern districts. Like wise, Kerala filed a first of its-kind suit directly in the top court, blaming the Centre for arbitrarily interfering in is net borrowing limits, pushing the state to the brink of a financial emergency.

**Courtesy:** The Hindu, Date: 09.04.2024.

## 3. ನಕಲಿ ಜಾತಿ ಪ್ರಮಾಣಪತ್ರ ಪ್ರಶ್ನಿಸಲು ಕಾಲಮಿತಿ ಇಲ್ಲವೆಂದ ಹೈಕೋರ್ಟ್

ನಕಲಿ ಜಾತಿ ಪ್ರಮಾಣ ಪತ್ರದಿಂದ ಪಡೆದಿರುವ ಪ್ರಯೋಜನಗಳನ್ನು ಪ್ರಶ್ನಿಸಲು ಯಾವುದೇ ಕಾಲಮಿತಿಯ ಗಡುವು ಇಲ್ಲ ಎಂದು ಹೈಕೋರ್ಟ್ ಆದೇಶ ನೀಡಿದೆ. ನಕಲಿ ಜಾತಿ ಪ್ರಮಾಣ ಪತ್ರ ಪಡೆದು ಆಯುಷ್ ವೈದ್ಯಾಧಿಕಾರಿ ಹುದ್ದೆ ಗಿಟ್ಟಿಸಿಕೊಂಡು ಸೇವೆ ಸಲ್ಲಿಸುತ್ತಿದ್ದ ಡಾ.ಗುಡ್ಡದೇವ್ ಗೊಲ್ಲಪ್ಪ ಯಡ್ರಾಮಿ ಅವರು ಸಲ್ಲಿಸಿದ್ದ ಅರ್ಜಿಯನ್ನು ಕಲಬುರಗಿ ಪೀಠದಲ್ಲಿ ಆಲಿಸಿದ ನ್ಯಾ.ವಿ.ಶ್ರೀಷಾನಂದ ಅವರಿದ್ದ ಏಕಸದಸ್ಯಪೀಠ ಈ ಆದೇಶ ನೀಡಿದೆ.

ಅರ್ಜಿದಾರರು ತಮ್ಮ ಜಾತಿ ಪ್ರಮಾಣಪತ್ರ ರದ್ದುಗೊಳಿಸಿರುವ ಆದೇಶವನ್ನು ಅನೂರ್ಜಿತಗೊಳಿಸಬೇಕು ಹಾಗೂ ತಮ್ಮನ್ನು ಮತ್ತೆ ಸೇವೆಗೆ ಸೇರ್ಪಡೆ ಮಾಡಿಕೊಳ್ಳಬೇಕೆಂದು ನ್ಯಾಯಾಲಯದ ಮೊರೆ ಹೋಗಿದ್ದರು.

ಅರ್ಜಿದಾರರ ದಾಖಲೆಗಳನ್ನು ಪರಿಶೀಲಿಸಿದ ಬಳಿಕ ನ್ಯಾಯಾಲಯ, "ವಿಜಯಪುರದಲ್ಲಿ ಕಾಲೇಜಿಗೆ ಸೇರುವಾಗ ಭರ್ತಿ ಮಾಡಿದ್ದ ನಮೂನೆಯಲ್ಲಿ ಅರ್ಜಿದಾರರು ತಾನು ಹಿಂದೂ (ಕುರುಬ), ಹಿಂದುಳಿದ ವರ್ಗಕ್ಕೆ ಸೇರಿದವನು ಎಂದು ಉಲ್ಲೇಖಿಸಿದ್ದಾರೆ. ಆದರೆ, ಉದ್ಯೋಗಕ್ಕೆ ಸೇರುವ ವೇಳೆಗೆ ಪರಿಶಿಷ್ಟ ಪಂಗಡದ ಗೊಂಡಾ ಜಾತಿಗೆ ಸೇರಿದವರು ಎಂದು ಬದಲಾಗಲು ಹೇಗೆ ಸಾಧ್ಯ" ಎಂದು ಪ್ರಶ್ನಿಸಿದೆ.

ಅರ್ಜಿದಾರರು ನಿಜವಾಗಿಯೂ ಎಸ್‌ಟಿ ವರ್ಗಕ್ಕೆ ಸೇರಿದ್ದರೆ ಅವರು 1975ರಲ್ಲಿ ಕಾಲೇಜಿಗೆ ಸೇರುವಾಗ ಕುರುಬ ಜಾತಿ ಎಂದು ಉಲ್ಲೇಖಿಸುತ್ತಿರಲಿಲ್ಲ. ಹಾಗಾಗಿ ಅರ್ಜಿದಾರರು ಶುದ್ಧಹಸ್ತದಿಂದ ನ್ಯಾಯಾಲಯದ ಮೊರೆ ಹೋಗಿಲ್ಲ, ತಮ್ಮ ಪರವಾಗಿ ಆದೇಶ ಪಡೆಯಲು ಅವರು ಹಲವು ಸಂಗತಿ ಮುಚ್ಚಿಟ್ಟಿದ್ದಾರೆ ಎಂದು ನ್ಯಾಯಾಲಯ ಹೇಳಿದೆ.

ಜೊತೆಗೆ, ಅವರು ನೇಮಕ ಪ್ರಾಧಿಕಾರದ ಮುಂದೆ ನಕಲಿ ಜಾತಿ ಪ್ರಮಾಣಪತ್ರ ಸಲ್ಲಿಸಿ ಉದ್ಯೋಗ ಪಡೆದು ಸಾಕಷ್ಟು ಪ್ರಯೋಜನ ಪಡೆದಿದ್ದಾರೆ. ಹಾಗಾಗಿ, ಅರ್ಜಿಯನ್ನು ವಜಾಗೊಳಿಸುತ್ತಿರುವುದಾಗಿ ನ್ಯಾಯಪೀಠ ಹೇಳಿದೆ.

ಅರ್ಜಿದಾರರು, ಕಲಬುರಗಿ ಜಿಲ್ಲೆಯಲ್ಲಿ ಕುರುಬ ಹಾಗೂ ಗೂಂಡಾ ಸುಮುದಾಯ ಒಂದೇ ಎಂದು ಕರೆಯಲಾಗುತ್ತಿದೆ. ಎರಡೂ ಒಂದೇ ಅರ್ಥ ನೀಡುತ್ತವೆ. 1993ರಲ್ಲಿ ಎರಡೂ ಒಂದೇ ಸಮುದಾಯಗಳೆಂಬ ಬಗ್ಗೆ ವ್ಯಾಪಕ ಚರ್ಚೆ ನಡೆದಿತ್ತು. 1997ರಲ್ಲಿ ಸರಕಾರ ಕಲಬುರಗಿ ಜಿಲ್ಲೆಯಲ್ಲಿನ ಗೊಂಡಾ ಸಮುದಾಯವನ್ನು ಎಸ್‌ಟಿ ಪಟ್ಟಿಯಲ್ಲಿ ಸೇರಿಸುವಂತೆ ಕೇಂದ್ರಕ್ಕೆ ಶಿಫಾರಸು ಮಾಡಿತ್ತು ಎಂದು ವಾದಿಸಿದ್ದರು.

ಆದರೆ. ಅದನ್ನು ಅಲ್ಲಗಳೆದ ಸರಕಾರದ ಪರ ವಿಶೇಷ ವಕೀಲ ಸಿ. ಜಗದೀಶ್ ಈ ವಿಷಯಕ್ಕೆ ಸಂಬಂಧಿಸಿದಂತೆ 1986ರ ಆದೇಶವನ್ನು ಹಲವು ಪೀಠಗಳಲ್ಲಿ ಪ್ರಶ್ನಿಸಲಾಗಿದೆ. ಆ ಆದೇಶದ ಲಾಭ ಪಡೆಯಲು ಸಾಧ್ಯವಿಲ್ಲ. ಗೊಂಡಾ ಮತ್ತು ಕುರುಬ ಎರಡೂ ಬೇರೆ ಬೇರೆ ಜಾತಿಗಳು ಅರ್ಜಿದಾರರು ನಕಲು ಜಾತಿ ಪ್ರಮಾಣಪತ್ರ ಪಡೆದಿದ್ದಾರೆ. ಹಾಗಾಗಿ, ಅದನ್ನು ಪರಿಶೀಲಿಸಿ ರದ್ದು ಮಾಡಲಾಗಿದೆ ಎಂದು ನ್ಯಾಯಪೀಠಕ್ಕೆ ತಿಳಿಸಿದ್ದರು.

**ಆಧಾರ**: ವಿಜಯ ಕರ್ನಾಟಕ, ದಿನಾಂಕ: 14.04.2024

## 4. ಶಾಸಕ ಉದಯ್ ಗರುಡಾಚಾರ್‌ಗೆ ವಿಧಿಸಿದ್ದ ಶಿಕ್ಷೆ ರದ್ದು

ಕಳೆದ 2018ರ ವಿಧಾನಸಭಾ ಚುನಾವಣಾ ಸಂದರ್ಭದಲ್ಲಿ ಸಲ್ಲಿಸಿದ್ದ ಪ್ರಮಾಣ ಪತ್ರದಲ್ಲಿ ತಮ್ಮ ಮೇಲಿನ ಕ್ರಿಮಿನಲ್ ಪ್ರಕರಣಗಳ ಮಾಹಿತಿ ಮರೆಮಾಚಿದ ಆರೋಪ ಹೊತ್ತಿದ್ದ ಚಿಕ್ಕಪೇಟೆ ಬಿಜೆಪಿ ಶಾಸಕ ಉದಯ್ ಗರುಡಾಚಾರ್ ಅವರನ್ನು ಹೈಕೋರ್ಟ್ ದೋಷಮುಕ್ತಗೊಳಿಸಿದೆ.

ಪ್ರಕರಣದಲ್ಲಿ ಶಾಸಕ ಉದಯ್ ಗರುಡಾಚಾರ್ ಅವರಿಗೆ ಎರಡು ತಿಂಗಳು ಜೈಲು ಮತ್ತು ರೂ. 10ಸಾವಿರ ದಂಡ ವಿಧಿಸಿದ್ದ ಬೆಂಗಳೂರಿನ 42ನೇ ಎಸಿಎಂಎಂ ನ್ಯಾಯಾಲಯದ ಆದೇಶವನ್ನು ಹೈಕೋರ್ಟ್ ರದ್ದುಪಡಿಸಿದೆ. ಅಲ್ಲದೆ, ಶಾಸಕರು ಪಾವತಿಸಿದ್ದ ದಂಡದ ಮೊತ್ತವನ್ನು ವಾಪಸ್ ನೀಡುವಂತೆ ಆದೇಶಿಸಿದೆ.

ಅಧೀನ ನ್ಯಾಯಾಲಯದ ಆದೇಶ ಪ್ರಶ್ನಿಸಿ ಶಾಸಕ ಉದಯ್ ಗರುಡಚಾರ್ ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿದ್ದ ಹೈಕೋರ್ಟ್ ನ್ಯಾಯಮೂರ್ತಿ ಕೃಷ್ಣ ಎಸ್.ದೀಕ್ಷಿತ್ ಅವರಿದ್ದ ಏಕಸದಸ್ಯ ಪೀಠ ತೀರ್ಪು ಪ್ರಕಟಿಸಿದೆ.

ಆದೇಶದಲ್ಲಿ ಸುಪ್ರಿಂ ಕೋರ್ಟ್ ಹಲವು ತೀರ್ಪುಗಳನ್ನು ಉಲ್ಲೇಖಿಸಿರುವ ನ್ಯಾಯಪೀಠ, ಎಲ್ಲಾ ನಾಲ್ಕು ತೀರ್ಪುಗಳು ಅರ್ಜಿದಾರರ ಪರವಾಗಿವೆ ಮತ್ತು ಅವರು ಒಮ್ಮೆಲೆ ಕ್ರಿಮಿನಲ್ ವಿಚಾರಣಾ ಪ್ರಕ್ರಿಯೆಯಿಂದ ಮುಕ್ತರಾಗುತ್ತಾರೆ.

ಅವರಿಗೆ ಕ್ಲೀನ್ ಚಿಟ್ ನೀಡಬೇಕಾಗುತ್ತದೆ. ಅರ್ಜಿದಾರರು ಈ ಕ್ರಿಮಿನಲ್ ಪ್ರಕರಣದ ಕಾರಣಕ್ಕೆ ಇಷ್ಟು ದಿನಗಳ ಕಾಲ ಮಾನಸಿಕ ಯಾತನೆ ಅನುಭವಿಸಿದ್ದಾರೆ ಎಂದು ಹೇಳಿದೆ. ಆರೋಪಿ ಎನ್ನುವ ಪದದ ವ್ಯಾಖ್ಯಾನವನ್ನು ವಿವರಿಸಿರುವ ನ್ಯಾಯಾಲಯ, ವ್ಯಕ್ತಿಯ ವಿರುದ್ಧ ವಿಚಾರಣೆ ಬಾಕಿ ಇದ್ದರೂ ಆರೋಪಿ ಎನ್ನುತ್ತೇವೆ. ಆತನ ವಿರುದ್ಧ ವಿಚಾರಣೆ ಆರಂಭವಾಗಿಲ್ಲದಿದ್ದರೂ ಆರೋಪಿ ಎನ್ನುತ್ತೇವೆ. ಸಾಮಾನ್ಯವಾಗಿ ಕ್ರಿಮಿನಲ್ ಪ್ರಕರಣ ಬಾಕಿ ಇದ್ದರೆ ಆರೋಪಿ ಎನ್ನಲಾಗುವುದು.

ಅಂತೆಯೇ ಕ್ರಿಮಿನಲ್ ಪ್ರಕ್ರಿಯೆ ಹಲವು ಕಾನೂನುಗಳಲ್ಲಿ ವಿಸ್ತಾರವಾದ ವ್ಯಾಪ್ತಿಯನ್ನು ಹೊಂದಿದೆ ಎಂದು ತನ್ನ ಆದೇಶದಲ್ಲಿ ತಿಳಿಸಿದೆ.

**ಆಧಾರ**: ವಿಶ್ವ ವಾಣಿ, ದಿನಾಂಕ: 27.04.2024

## 5. ಸುಳ್ಳು ದೂರು ತಡೆಗೆ ಕ್ರಮ ಕೈಗೊಳ್ಳಿ

ಸುಳ್ಳು ಅಥವಾ ಉತ್ಪ್ರೇಕ್ಷಿತ ದೂರುಗಳನ್ನು ದಾಖಲಿಸುವುದನ್ನು ತಡೆಯುವ ಸಲುವಾಗಿ ಭಾರತೀಯ ನ್ಯಾಯ ಸಂಹಿತೆಯ (ಬಿಎನ್ಎಸ್) ಸೆಕ್ಷನ್ 85 ಹಾಗೂ 86ಕ್ಕೆ ಅಗತ್ಯ ಬದಲಾವಣೆಗಳನ್ನು ಮಾಡಲು ಪರಿಶೀಲಿಸುವಂತೆ ಕೇಂದ್ರ ಸರ್ಕಾರಕ್ಕೆ ಸುಪ್ರೀಂಕೋರ್ಟ್ ಹೇಳಿದೆ.

ವ್ಯಾಪಕ ಪ್ರಮಾಣದಲ್ಲಿ ಉತ್ಪ್ರೇಕ್ಷಿತ ದೂರುಗಳು ದಾಖಲಾಗುತ್ತಿರುವುದು ಕಂಡುಬಂದ ಹಿನ್ನೆಲೆಯಲ್ಲಿ ವರದಕ್ಷಿಣೆ ವಿರೋಧಿ ಕಾನೂನನ್ನು ಪರಿಷ್ಕರಿಸುವಂತೆ 14 ವರ್ಷಗಳ ಹಿಂದೆಯೇ ಕೇಂದ್ರ ಸರ್ಕಾರಕ್ಕೆ ಸೂಚಿಸಲಾಗಿತ್ತು ಎಂದು ಸುಪ್ರೀಂ ಕೋರ್ಟ್ ಹೇಳಿದೆ.

ಮಹಿಳೆಯೊಬ್ಬರು ತನ್ನ ಪತಿ ವಿರುದ್ಧ ದಾಖಲಿಸಿದ್ದ ವರದಕ್ಷಿಣೆ ಕಿರುಕುಳ ಪ್ರಕರಣದ ವಿಚಾರಣೆ ವೇಳೆ ನ್ಯಾಯಪೀಠ ಈ ಅಭಿಪ್ರಾಯ ವ್ಯಕ್ತಪಡಿಸಿದೆ. ನ್ಯಾಯಮೂರ್ತಿಗಳಾದ ಜೆ.ಬಿ. ಪಾರ್ದೀವಾಲಾ ಹಾಗೂ ಮನೋಜ್ ಮಿಶ್ರಾ ಅವರಿದ್ದ ನ್ಯಾಯಾಪೀಠ ಅರ್ಜಿ ವಿಚಾರಣೆ ನಡೆಸಿತು. ಭಾರತೀಯ ನ್ಯಾಯ ಸಂಹಿತೆಯು ಜುಲೈ 1 ರಿಂದ ಜಾರಿಗೆ ಬರಲಿದೆ. ಹೀಗಾಗಿ ಈ ಎರಡು ಸೆಕ್ಷನ್‌ಗಳ ಕುರಿತು ಸಂಸತ್‌ನಿಂದ ಗಂಭೀರ ಪರಾಮರ್ಶೆ ನಡೆದಿದೆಯೇ ಎಂಬುದನ್ನು ಖಚಿತಪಡಿಸಿಕೊಳ್ಳಲು ಈ ಕುರಿತು ಪರಿಶೀಲನೆ ನಡೆಸಿದೆವು ಎಂದು ನ್ಯಾಯಮೂರ್ತಿಗಳು ಹೇಳಿದರು.

ಭಾರತೀಯ ನ್ಯಾಯ ಸಂಹಿತೆಯ ಸೆಕ್ಷನ್ 85 ಮತ್ತು 86 ಮಹಿಳೆ ಮೇಲಿನ ಕ್ರೌರ್ಯಕ್ಕೆ ಸಂಬಂಧಿಸಿದವು. ಮಹಿಳೆಯ ಪತಿ ಅಥವಾ ಪತಿಯ ಸಂಬಂಧಿಕರು ಮಹಿಳೆಯನ್ನು ಕ್ರೂರವಾಗಿ ನಡೆಸಿಕೊಂಡ ಸಂದರ್ಭದಲ್ಲಿ, ಕ್ರೌರ್ಯ ಮೆರೆದವರಿಗೆ ಗರಿಷ್ಠ 3 ವರ್ಷ ಜೈಲು ಶಿಕ್ಷೆ ವಿಧಿಸಬಹುದು. ಜೊತೆಗೆ ದಂಡವನ್ನು ವಿಧಿಸಬಹುದು ಎಂದು ಸೆಕ್ಷನ್ 85 ಹೇಳುತ್ತದೆ.

ಸೆಕ್ಷನ್ 86, ಕ್ರೌರ್ಯವನ್ನು ವ್ಯಾಖ್ಯಾನಿಸುತ್ತದೆ. ಮಹಿಳೆಗೆ ನೀಡುವ ದೈಹಿಕ ಹಾಗೂ ಮಾನಸಿಕವಾಗಿ ಆಗುವ ತೊಂದರೆಯನ್ನು ಕ್ರೌರ್ಯ ಎಂದು ಪರಿಗಣಿಸಲಾಗುತ್ತದೆ. ಭಾರತೀಯ ನ್ಯಾಯ ಸಂಹಿತೆಯ ಸೆಕ್ಷನ್ 85 ಹಾಗೂ 86 ಐಪಿಸಿ ಸೆಕ್ಷನ್ 498ಎ ಗೆ ಯಥಾವತ್ ನಕಲು ಆಗಿದೆ. ಆದರೆ, ಐಪಿಸಿಯ ಸೆಕ್ಷನ್ 498ಎಗೆ ಭಾರತೀಯ ನ್ಯಾಯ ಸಂಹಿತೆಯಲ್ಲಿ ವಿವರಣೆ ನೀಡಲಾಗಿದ್ದು, ಅದನ್ನು ಸೆಕ್ಷನ್ 86 ಎಂದು ಕರೆಯಲಾಗಿದೆ. ಇದೊಂದೇ ಇವುಗಳಲ್ಲಿನ ವ್ಯತ್ಯಾಸ ಎಂದು ನ್ಯಾಯಪೀಠ ಹೇಳಿದೆ.

**ಆಧಾರ**: ಪ್ರಜಾವಾಣಿ, ದಿನಾಂಕ: 04.05.2024

## 6. ಡಿಸಿಆರ್‌ಇಗೆ ಪ್ರಕರಣ ದಾಖಲಿಸುವ ಅಧಿಕಾರ ಇಲ್ಲ

ಜಾತಿ ನಕಲಿ ಪ್ರಮಾಣ ಪತ್ರ ಪಡೆದ ಆರೋಪಿಗಳ ವಿರುದ್ಧ ಜಿಲ್ಲಾ ಜಾತಿ ಪರಿಶೀಲನಾ ಸಮಿತಿ ಶಿಫಾರಸು ಮಾಡದೆ ನಾಗರಿಕ ಹಕ್ಕುಗಳು ಜಾರಿ ನಿರ್ದೇಶನಾಲಯ (ಡಿಸಿಆರ್‌ಇ) ಪ್ರಕರಣ

ದಾಖಲಿಸಲಾಗದು ಎಂದಿರುವ ಹೈಕೋರ್ಟ್, ಜಾರಿ ನಿರ್ದೇಶನಾಲಯ ದಾಖಲಿಸಿದ್ದ ಪ್ರಕರಣ ಮತ್ತು ಅದರ ಕುರಿತು ದಾಖಲಾಗಿದ್ದ ಆರೋಪ ಪಟ್ಟಿಯನ್ನು ರದ್ದುಪಡಿಸಿ ಆದೇಶಿಸಿದೆ.

ಶಿಪ್ಪಿಂಗ್ ಸಚಿವಾಲಯದಲ್ಲಿ ಸಹಾಯಕ ಲೈಟ್ ಕೀಪರ್ ಆಗಿ ಸೇವೆ ಸಲ್ಲಿಸುತ್ತಿದ್ದ ಎ.ಎಸ್.ಪಳನಿ ಎಂಬುವರು ತಮ್ಮ ವಿರುದ್ಧದ ಪ್ರಕರಣ ಮತ್ತು ಆರೋಪಪಟ್ಟಿ ರದ್ದುಪಡಿಸುವಂತೆ ಕೋರಿ ಸಲ್ಲಿಸಿದ್ದ ಅರ್ಜಿಯನ್ನು ನ್ಯಾಯಮೂರ್ತಿ ಹೇಮಂತ್ ಚಂದನಗೌಡರ ಅವರ ಏಕಸದಸ್ಯ ಪೀಠ ವಿಚಾರಣೆ ನಡೆಸಿತು.

ಕೆಲಕಾಲ ವಾದ ಪ್ರತಿವಾದ ಆಲಿಸಿದ ನ್ಯಾಯಪೀಠ, ಕರ್ನಾಟಕ ಪರಿಶಿಷ್ಟ ಜಾತಿ ಮತ್ತು ಪಂಗಡಗಳು ಮತ್ತು ಇತರ ಹಿಂದುಳಿದ ವರ್ಗಗಳ (ಮೀಸಲಾತಿ ಮತ್ತು ನೇಮಕಾತಿ ಇತರೆ) ಕಾಯ್ದೆಯ 1990 ಅಡಿ ಜಾತಿ ನಕಲಿ ಪ್ರಮಾಣಪತ್ರ ಮತ್ತು ಆದಾಯ ಪ್ರಮಾಣ ಪತ್ರ ನೀಡುವವರಿಗೆ ಶಿಕ್ಷೆ ವಿಧಿಸುವ ಸಂಬಂಧ ವಿವರಿಸಿದೆ. ಅದರಂತೆ ತಪ್ಪು ಮಾಹಿತಿ ನೀಡಿ ಪ್ರಮಾಣಪತ್ರ ಪಡೆದವರಿಗೆ 6 ತಿಂಗಳಿಂದ 2 ವರ್ಷಗಳವರೆಗೆ ಶಿಕ್ಷೆ ವಿಧಿಸಲು ಅವಕಾಶವಿರಲಿದೆ. ಆದರೆ, ಇದೇ ಕಾಯ್ದೆಯ ಸೆಕ್ಷನ್ 5ಎ ಪ್ರಕಾರ ಸೆಕ್ಷನ್ 6ರಲ್ಲಿ ತಿಳಿಸಿರುವಂತೆ ಆರೋಪಿಯ ವಿರುದ್ಧ ಕಾನೂನು ಕ್ರಮಕ್ಕೆ ಮುಂದಾಗಬೇಕಾದರೆ ರಾಜ್ಯ ಸರ್ಕಾರದಿಂದ ಪೂರ್ವಾನುಮತಿ ಪಡೆಯಬೇಕಾಗಿದೆ. ಆದರೆ, ಈ ಪ್ರಕರಣದಲ್ಲಿ ರಾಜ್ಯ ಸರ್ಕಾರ ಯಾವುದೇ ರೀತಿಯ ಪೂರ್ವಾನುಮತಿ ಪಡೆಯಲಾಗಿಲ್ಲ ಎಂದು ಪೀಠ ಹೇಳಿದೆ.

ಕರ್ನಾಟಕ ಪರಿಶಿಷ್ಟ ಜಾತಿ ಮತ್ತು ಪಂಗಡಗಳು ಮತ್ತು ಇತರೆ ಹಿಂದುಳಿದ ವರ್ಗಗಳ (ಮೀಸಲಾತಿ ಮತ್ತು ನೇಮಕಾತಿ ಇತರ) ನಿಯಮ 1992ರ ನಿಯಮ 7ರ ಪ್ರಕಾರ ಜಾತಿ ನಕಲಿ ಪ್ರಮಾಣ ಪತ್ರವನ್ನು ಪಡೆದವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳುವುದರ ಕುರಿತು ತಿಳಿಸಿದ್ದು, ಅದರಂತೆ ಜಾತಿ ಪರಿಶೀಲನಾ ಸಮಿತಿ ಅಥವಾ ವಿಭಾಗೀಯ ಅಯುಕ್ತರು ಆರೋಪಿತರು/ಅರ್ಜಿದಾರರು ಸುಳ್ಳು ಜಾತಿ ಪ್ರಮಾಣ ಪತ್ರದ ಸಿಂಧುತ್ವ ಕೋರಿರುವ ಮನವಿ ತಿರಸ್ಕರಿಸಿರುವ ಸಂಬಂಧ ಪ್ರತಿಯನ್ನು ನಾಗರಿಕ ಹಕ್ಕುಗಳ ಜಾರಿ ನಿರ್ದೇಶನಾಲಯಕ್ಕೆ ಕಳುಹಿಸಬೇಕು.

ಇದಾದ ಬಳಿಕ ನಾಗರೀಕರ ಹಕ್ಕುಗಳ ಜಾರಿ ನಿರ್ದೇಶನಾಲಯ ಆರೋಪಿತರ ವಿರುದ್ಧ ಕಾನೂನು ಕ್ರಮ ಜರುಗಿಸಲು ಮುಂದಾಗಬೇಕು. ಆದರೆ, ಈ ಪ್ರಕರಣದಲ್ಲಿ ಅಕ್ರಮವಾಗಿ ಜಾತಿ ಪ್ರಮಾಣ ಪತ್ರ ಪಡೆದಿರುವ ಅರ್ಜಿದಾರರ ವಿರುದ್ಧ ಕಾನೂನು ಕ್ರಮ ಜರುಗಿಸುವಂತೆ ಹೆಚ್ಚುವರಿ ಪೊಲೀಸ್ ಮಹಾನಿರ್ದೇಶಕರು ಶಿಫಾರಸು ಮಾಡಿದ್ದಾರೆ. ಆದರೆ ಜಿಲ್ಲಾ ಜಾತಿ ಪರಿಶೀಲನಾ ಸಮಿತಿ ಅರ್ಜಿದಾರರ ವಿರುದ್ಧ ಕಾನೂನು ಕ್ರಮ ಕೈಗೊಳ್ಳುವ ಸಂಬಂಧ ಯಾವುದೇ ಶಿಫಾರಸು ಮಾಡಿಲ್ಲ. ಆದ್ದರಿಂದ ನಾಗರಿಕ ಹಕ್ಕುಗಳ ಜಾರಿ ನಿರ್ದೇಶನಾಲಯ ದಾಖಲಿಸಿರುವ ಎಫ್‌ಐಆರ್ ಮತ್ತು ಅದರ ಆಧಾರದಲ್ಲಿ ದಾಖಲಿಸಿರುವ ಆರೋಪಪಟ್ಟಿ ಅಮಾನ್ಯಗೊಳ್ಳಲಿದೆ ಎಂದು ನ್ಯಾಯಪೀಠ ತಿಳಿಸಿದೆ.

ಅರ್ಜಿದಾರರ ಜಾತಿಪ್ರಮಾಣ ಪತ್ರ ರದ್ದುಪಡಿಸಿರುವ ಕ್ರಮವನ್ನು ಪ್ರಶ್ನಿಸಿ ಮೇಲ್ಮನವಿ ಪ್ರಾಧಿಕಾರದ ಮುಂದೆ ಸಲ್ಲಿಸಿರುವ ಅರ್ಜಿ ವಿಚಾರಣಾ ಹಂತದಲ್ಲಿರುವಾಗಲೇ ನಾಗರಿಕ ಹಕ್ಕುಗಳ ಜಾರಿ ನಿರ್ದೇಶನಾಲಯದ ಅಧಿಕಾರವನ್ನು ಮೀರಿ ಎಫ್‌ಐಆರ್ ದಾಖಲಿಸಿದೆ ಎಂದು ನ್ಯಾಯಪೀಠ ತನ್ನ ಆದೇಶದಲ್ಲಿ ಉಲ್ಲೇಖಿಸಿದೆ.

**ಆಧಾರ**: ವಿಜಯ ವಾಣಿ, ದಿನಾಂಕ: 14.05.2024

## 7. Lawyers can’t be held liable under consumer law: SC

In a major decision, the Supreme Court held that the services provided by layers don’t fall under the purview of the Consumer protection (CP) Act and they cannot be held liable for deficiency of services under the law.

A bench of Justices Bela M. Trivedia and Pankaj Mithal said that legal profession is suigeneris (unique) and can’t be compared with any other profession. The court set aside a 2007 ruling by the National Consumer Disputes Redressal Commission (NCDRC) which stated that a complaint of deficiency of services was maintainable against lawyers.

The SC said that a profession cannot be treated as a business or trade. The services provided by professionals cannot be treated on par with the services provided by businessmen or traders so as to bring them under the purview of the Act.

The very purpose of the CP Act 1986 as re-enacted in 2019 was to protect consumers from unfair and unethical business practices, and the legislature never intended to include either the professions or the services rendered within the purview of the said Act, the bench said.

In his separate judgment justice Mithal said the services of professionals, particularly lawyers, have to be excluded from the consumer protection law.

“The legislature in India as in some other countries had not intended to include the services rendered by professionals, especially lawyers to their clients, within the purview of the Consumer Protection Act, 1986, he said.

The court also opined that the decision of a three-judge bench in the 1995 case of Indian Medical Association Vs VP Shantha and Others’-which brought the services rendered by medical practitioners with in the definition of services under the CP Act-should be revisited by a larger bench.

**Courtesy:** Deccan Harold , Date: 15.05.2024.

## 8. ಅವಿಶ್ವಾಸ ನಿರ್ಣಯಕ್ಕೆ 15 ತಿಂಗಳಾಗಿರಬೇಕು

ಗ್ರಾಮ ಪಂಚಾಯತ್ ಅಧ್ಯಕ್ಷರು/ಉಪಾಧ್ಯಕ್ಷರು ತಮ್ಮ ಹುದ್ದೆಗೆ ರಾಜೀನಾಮೆ ನೀಡುವುದು ಅನರ್ಹಗೊಳ್ಳುವುದು ಮತ್ತು ಮರಣವನ್ನಪ್ಪಿದಲ್ಲಿ ಅದೇ ಹುದ್ದೆಗೆ ಆಯ್ಕೆಯಾದವರ ವಿರುದ್ಧ ಅವಿಶ್ವಾಸ ನಿರ್ಣಯ ಮಾಡಿಸಲು ಕನಿಷ್ಠ 15 ತಿಂಗಳು ಕಳೆದಿರಬೇಕು ಎಂದು ಹೈಕೋರ್ಟ್ ಸ್ಪಷ್ಟಪಡಿಸಿದೆ.

ಅಲ್ಲದೆ, ಪಂಚಾಯತ್‌ರಾಜ್‌ನಂತಹ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಅವಿಶ್ವಾಸವೆಂಬ ಅಸ್ತ್ರವು ಅಧಿಕಾರ ಕೂಗುಮಾರಿಗಳಿಂದ ಅಪಾಯಕ್ಕೆ ಸಿಲುಕಿದೆ ಎಂದು ಅಭಿಪ್ರಾಯಪಟ್ಟಿದೆ. ಯಲಹಂಕ ತಾಲೂಕಿನ ಬಾಗಲೂರು ಗ್ರಾಮ ಪಂಚಾಯಿತಿ ಅಧ್ಯಕ್ಷರಾಗಿದ್ದ ಪ್ರೀತಿ ಮುನೇಗೌಡ ಸಲ್ಲಿಸಿದ್ದ ಮೇಲ್ಮನವಿ ವಿಚಾರಣೆ ನಡೆಸಿದ ಮುಖ್ಯ ನ್ಯಾಯಮೂರ್ತಿ ಎನ್.ವಿ.ಅಂಜಾರಿಯಾ ಮತ್ತು ನ್ಯಾಯಮೂರ್ತಿ ಕೃಷ್ಣ ಎಸ್.ದೀಕ್ಷಿತ್ ಅವರಿದ್ದ ವಿಭಾಗೀಯ ಪೀಠ ಈ ಆದೇಶ ನೀಡಿದೆ.

ಅಲ್ಲದೆ, ಅನೈತಿಕ ರಾಜಕೀಯ ಹಿತಾಸಕ್ತಿ ಈಡೇರಿಸುವುದು ಮತ್ತು ಕ್ಷುಲಕ ಕಾರಣಗಳಿಂದ ಅತೃಪ್ತ ಗುಂಪುಗಳಿಂದ ಅವಿಶ್ವಾಸ ಗೊತ್ತುವಳಿ ನಿರ್ಣಯ ಮಂಡಿಸುವ ಪ್ರವೃತ್ತಿಯನ್ನು ನಿಯಂತ್ರಿಸುವುದು

ಪಂಚಾಯತ್‌ರಾಜ್ ಕಾಯಿದೆ ಸೆಕ್ಷನ್ 49(2)ರ ಮೂಲ ಉದ್ದೇಶವಾಗಿದೆ. ಹೀಗಾಗಿ 15 ತಿಂಗಳ ಕಾಲ ಅವಿಶ್ವಾಸ ನಿರ್ಣಯ ಮಂಡಿಸುವುದಕ್ಕೆ ಅವಕಾಶವಿರುವುದಿಲ್ಲ. ಆದ್ದರಿಂದ ಅಧ್ಯಕ್ಷರ ಚುನಾವಣೆ ದಿನಾಂಕದಿಂದ ಮೊದಲ 15 ತಿಂಗಳವರೆಗೂ ಅವಿಶ್ವಾಸ ನಿರ್ಣಯ ಮಂಡಿಸುವುದಕ್ಕೆ ನಿರ್ಬಂಧವಿರಲಿದೆ ಎಂದು ನ್ಯಾಯಪೀಠ ತಿಳಿಸಿದೆ.

ಹಾಲಿ ಪ್ರಕರಣದಲ್ಲಿ 2023ರ ಮಾರ್ಚ್ 7 ರಂದು ಅಧಿಕಾರ ವಹಿಸಿಕೊಂಡಿದ್ದು, ಪಂಚಾಯತ್‌ರಾಜ್ (ತಿದ್ದುಪಡಿ) ಕಾಯಿದೆ 2021ರ ಸೆಕ್ಷನ್ 49ರಡಿ ತಿಳಿಸಿರುವಂತೆ ಅಧಿಕಾರ ವಹಿಸಿಕೊಂಡ 15 ತಿಂಗಳೊಳಗೆ ಅವಿಶ್ವಾಸ ನಿರ್ಣಯ ಮಂಡಿಸಲು ಅವಕಾಶವಿಲ್ಲ ಎಂದು ಪೀಠ ಹೇಳಿದೆ.

ಅರ್ಜಿದಾರರ ಪರ ವಕೀಲರು, ಪ್ರೀತಿ ಮುನೇಗೌಡ 2023ರ ಮಾರ್ಚ್ ತಿಂಗಳಲ್ಲಿ ಅಧ್ಯಕ್ಷರಾಗಿ ಆಯ್ಕೆಯಾಗಿದ್ದಾರೆ. ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಕಾಯಿದೆಯ ಸೆಕ್ಷನ್ 49ರ ಪ್ರಕಾರ ಅವರ ವಿರುದ್ಧ 15 ತಿಂಗಳ ಮುನ್ನ ಅವಿಶ್ವಾಸ ನಿರ್ಣಯ ಮಂಡಿಸುವುದಕ್ಕೆ ಅವಕಾಶವಿಲ್ಲ. ಅಲ್ಲದೆ, ಅಧ್ಯಕ್ಷರಾಗಿ ಆಯ್ಕಯಾದ ಎಂಟು ತಿಂಗಳೊಳಗೆ ಅವಿಶ್ವಾಸ ನಿರ್ಣಯ ಮಂಡಿಸಲಾಗಿದೆ. ಅದನ್ನು ಪರಿಗಣಿಸುವುದ ಮತ್ತು ಚುನಾವಣಾ ಸಭೆಗೆ ನೋಟಿಸ್ ನೀಡುವುದು ನಿಯಮ ಬಾಹಿರ ಎಂದು ನ್ಯಾಯಪೀಠಕ್ಕೆ ವಿವರಿಸಿದ್ದರು.

**ಆಧಾರ**: ವಿಜಯ ಕರ್ನಾಟಕ, ದಿನಾಂಕ: 21.06.2024

# ಭಾಗ–7

# ಹೊರ ರಾಜ್ಯ ಸುದ್ದಿಗಳು

## 1. ಶಿಕ್ಷಕರ ನೇಮಕ ಅಸಿಂಧು ಆದೇಶಕ್ಕೆ ತಡೆ

ಪಶ್ಚಿಮ ಬಂಗಾಳದ ಸರ್ಕಾರಿ ಶಾಲೆಗಳು ಹಾಗೂ ಅನುದಾನಿತ ಶಾಲೆಗಳ ಒಟ್ಟು 25,753 ಹುದ್ದೆಗಳಿಗೆ ನಡೆದ ಶಿಕ್ಷಕರು ಹಾಗೂ ಶಿಕ್ಷಕೇತರರ ನೇಮಕಾತಿ ಪ್ರಕ್ರಿಯೆಯನ್ನು ಅಸಿಂಧುಗೊಳಿಸಿದ್ದ ಕಲ್ಕತ್ತ ಹೈಕೋರ್ಟ್ ಕ್ರಮಕ್ಕೆ ತಡೆಯಾಜ್ಞೆ ನೀಡಿದೆ.

ಆದರೆ ಈ ವಿಚಾರಕ್ಕೆ ಸಂಬಂಧಿಸಿ ಸಿಬಿಐ ತನಿಖೆ ಮುಂದುವರಿಯಬಹುದು ರಾಜ್ಯ ಸಂಪುಟದ ಸದಸ್ಯರನ್ನೂ ವಿಚಾರಣೆಗೆ ಗುರಿಪಡಿಸಬಹುದು ಎಂದು ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ (ಸಿಜೆಐ) ಡಿ.ವೈ.ಚಂದ್ರಚೂಡ್ ಹಾಗೂ ನ್ಯಾಯಮೂರ್ತಿಗಳಾದ ಜೆ.ಬಿ. ಪಾರ್ದೀವಾಲಾ ಮತ್ತು ಮನೋಜ್ ಮಿಶ್ರಾ ಅವರು ಇದ್ದ ತ್ರಿಸದಸ್ಯ ಪೀಠವು ಹೇಳಿದೆ. ಆದರೆ, ತನಿಖೆ ಸಂದರ್ಭದಲ್ಲಿ ಬಂಧಿಸುವ ಕೆಲಸ ಬೇಡ ಎಂದು ಪೀಠವು ಸಿಬಿಐಗೆ ಸೂಚನೆ ನೀಡಿದೆ.

ಇದಕ್ಕೂ ಮೊದಲು ನಡೆದ ವಿಚಾರಣೆ ಸಂದರ್ಭದಲ್ಲಿ ಪೀಠವು, ನೇಮಕಾತಿಯಲ್ಲಿನ ಹಗರಣವು ಸಮಾಜವನ್ನು ಬಾಧಿಸುವಂತಹ ಆರ್ಥಿಕ ಅಪರಾಧ ಎಂದು ಹೇಳಿತ್ತು. ನೇಮಕಾತಿಗಳಿಗೆ ಸಂಬಂಧಿಸಿದ ಡಿಜಿಟಲ್ ದಾಖಲೆಗಳನ್ನು ಕಾಡುವ ಹೊಣೆಯು ಸಂಬಂಧಪಟ್ಟ ಅಧಿಕಾರಿಗಳ ಮೇಲಿದೆ ಎಂದು ಹೇಳಿತ್ತು. ಸರ್ಕಾರದ ಶಾಲೆಗಳು ಹಾಗೂ ಅನುದಾನಿತ ಶಾಲೆಗಳ ಶಿಕ್ಷಕಕರು ಮತ್ತು ಶಿಕ್ಷಕೇತರ ಹುದ್ದೆಗಳಿಗೆ ನಡೆದ ನೇಮಕಾತಿಯನ್ನು ಕಲ್ಕತ್ತ ಹೈಕೋರ್ಟ್ ಏಪ್ರಿಲ್ 22 ರಂದು ಅಸಿಂಧುಗೊಳಿಸಿದೆ. ಇದನ್ನು ಪ್ರಶ್ನಿಸಿ ಸಲ್ಲಿಸಿರುವ ಅರ್ಜಿಗಳ ವಿಚಾರಣೆಯನ್ನು ತ್ರಿಸದಸ್ಯ ಪೀಠ ನಡೆಸುತ್ತಿದೆ.

ಸರ್ಕಾರಿ ಉದ್ಯೋಗಗಳ ಸಂಖ್ಯೆ ಬಹಳ ಕಡಿಮೆ ಇದೆ. ಜನರು ಇರಿಸಿರುವ ವಿಶ್ವಾಸ ಕೊನೆಗೊಂಡರೆ ಇನ್ನೇನೂ ಉಳಿದುಕೊಳ್ಳುವುದಿಲ್ಲ. ಇದು ಇಡೀ ಸಮಾಜಕ್ಕೆ ಮಾಡಿದ ವಂಚನೆ. ಇಂದು ಸರ್ಕಾರಿ ಹುದ್ದೆಗಳು ಬಹಳ ಕಡಿಮೆ ಇವೆ. ಎಲ್ಲರೂ ಸಾಮಾಜಿಕ ಚಲನೆಯ ಉದ್ದೇಶದಿಂದ ಅವುಗಳತ್ತ ಗಮನ ಇಟ್ಟಿರುತ್ತಾರೆ. ನೇಮಕಾತಿಗಳು ಕಳಂಕಿತವಾದರೆ ವ್ಯವಸ್ಥೆಯಲ್ಲಿ ಇನ್ನೇನು ಉಳಿಯುತ್ತದೆ? ಜನರು ವಿಶ್ವಾಸ ಕಳೆದುಕೊಳ್ಳುತ್ತಾರೆ. ಇದನ್ನು ನೀವು ಹೇಗೆ ನಿಭಾಯಿಸುತ್ತೀರಿ ಎಂದು ಪಶ್ಚಿಮ ಬಂಗಾಳ ಸರ್ಕಾರವನ್ನು ಪ್ರತಿನಿಧಿಸುವ ವಕೀಲರನ್ನು ಉದ್ದೇಶಿಸಿ ಮುಖ್ಯ ನ್ಯಾಯಮೂರ್ತಿ ಚಂದ್ರಚೂಡ್ ಕೇಳಿದರು.

ಅಧಿಕಾರಿಗಳು ಅಗತ್ಯ ದತ್ತಾಂಶವನ್ನು ಕಾಯ್ದಿಟ್ಟುಕೊಂಡಿದ್ದಾರೆ ಎಂಬುದನ್ನು ತೋರಿಸಲು ಸರ್ಕಾರದ ಬಳಿ ಏನೂ ಇಲ್ಲ ಎಂದು ಪೀಠವು ಹೇಳಿತು. ದತ್ತಾಂಶ ಇಲ್ಲ ಎಂಬುದು ಸ್ಪಷ್ಟವಾಗಿದೆ ಎಂದು ಹೇಳಿತು.

**ಆಧಾರ**: ಪ್ರಜಾವಾಣಿ, ದಿನಾಂಕ: 08.05.2024

## 2. JJP, INLD seek floor test, say BJP govt, lost majority

After three Independent MLAS with-drew support to the Bharatiya Janata Party government in Haryana earlier this week, the Jannayak Janta Party (JJP) and the Indian National Lok Dal (INLD) on Thursday wrote to the Governor seeking an immediate floor test to determine whether the government has a majority or President's Rule should be imposed.

JJP leader and former Deputy Chief Minister Dushyant Chautala, whose party had remained absent during the voting on a confidence motion for the BJP government in March, said in his letter to the Governor that his party did not support the government and was open to backing any political party in the State for forming a new government.

The letter came a day after he offered to "consider" outside support to the Congress to topple the BJP government.

Referring to the withdrawal of support by three Independent MLAs and two vacant Assembly seats, Mr.Chautala said in his letter that "given these developments and the clear stance of my party - i.e. JJP, which does not extend its support to the present government and is open to backing any other political party for government formation, it is evident that the incumbent government no longer commands a majority in the legislative assembly".

Saying that there was an urgent need to “reinstate stability" and "uphold democratic norms" in Haryana, Mr. Chautala sought directions to the present State government under Article 174 of the Constitution to prove its majority on the floor of the House or the imposition of President's Rule.

INLD secretary-general and the party's lone MLA Abhay Chautala too wrote to the Governor seeking directions to the BJP government to prove its majority.

Congress leader and former Chief Minister Bhupinder Singh Hooda said the JJP must parade all 10 of its MLAs before the Governor amid reports that some of them had turned rebels.

Mr.Hooda said that the Congress had sought an appointment for its delegation to meet with the Governor in view of the prevailing political situation, adding that his party would also parade all 30 of its MLAs before the Governor.

Haryana Chief Minister Nayab Saini said that his government had proved its majority just over a month ago and could prove it again if required, but noted that the opposition seem to be in a hurry.

Mr.Saini advised Mr.Chautala to instead worry about the Lok Sabha election as he had lost the faith of the people.

**Courtesy:** Hindu Date:10.05.2024

## 3. TN Govt. did not accord sanction to prosecute Annamalai: Raj Bhavan

In the wake of news reports that the Tamil Nadu government had issued an order (GO) according sanction to prosecute state BJP president K Annamalai for an alleged speech promoting disharmony, Raj Bhavan issued a clarification on Monday saying that it is not aware of the criminal case against Annamalai and it had not issued any sanction order.

Raj Bhavan said it was clarifying after "anxious inquiries" from the public regarding the issue. The clarification came in the backdrop of some people interpreting the wordings "By order of the governor" and "the governor of Tamil Nadu hereby accords sanction" mentioned in the GO to mean that the sanction to prosecute was in fact accorded by the governor.

Official sources said such wordings are customarily mentioned as per the Secretariat Office Manual and the Tamil Nadu Government Business Rules since the governor is the executive head of the state and they do not necessarily mean that all such orders are issued after obtaining approvals from the Raj Bhavan.

The GO, in this case, was issued by the state government based on a complaint filed by activist V Piyush before Salem collector regarding an alleged factually incorrect speech made by Annamalai in September 2023 with reference to a 1956 incident involving late leaders CN Annadurai, PT Rajan, Muthuramaling Thevar.

The GO said that the speech was made with an intention to promote disharmony, enmity, hatred and ill-will between different groups and to disturb public tranquillity.

Hence, the government had accorded sanction to prosecute Annamalai under various sections of the IPC.

**Courtesy**: Indian Express Date:14.05.2024

## 4. Cong's Sofia 1st Muslim Women to be elected MLA in Odisha

Sofia Firdous (32) of Congress has created history by becoming the first Muslim woman to be elected MLA in the state from the Barabati-Cuttack seat. She defeated BJP candidate and noted gynaecologist Dr Purna Chandra Mahapatra (69) by a margin of 8,001 votes. Though 141 women have become MLAs in Odisha since 1937, no Muslim woman had won an assembly seat before Sofia, daughter of Mohammed Moquim, former MLA of Barabati-Cuttack.

"As a Muslim woman, I understand I made history. But women's representation in the assembly is not impressive. Out of 147 MLAs, we have only 11 women members this time. The number should increase. Women should come forward in every field, including politics. Women can see me as a role model. My ideal politician is former chief minister Nandini Satpathy,"said Sofia, an alumnus of IIM Bangalore.

With declared assets worth Rs 3.64 crore, Sofia is the director of a real estate company and president of the Bhubaneswar chapter of Confederation of Real Estate Developers Association of India (Credai). She is the first woman to head the Adai chapter. After completing her BTech in civil engineering from KIIT University, she entered the real estate sector at the age of 24.

"I got the ticket to fight the assembly election on April 24, and the poll was held the next day. "I visited each locality and ward to meet voters. People know my father very well. His reputation helped me get a good response from the voters" she added. Sofia said people have given her the moniker of 'smiling MLA. "I am very cheerful and meet people with a smile. My tagline 'Cuttack's daughter, Cuttack's daughter-in-law caught the attention of voters during the election campaign. I did d not utter a single word against my opponents. In fact, I have immense respect for Mahapatra because he is my doctor too" she added.

**Courtesy**: Times of India, Dated:09.06.2024

## 5. ಸಿಕ್ಕಿಂ ಸಿಎಂ ಆಗಿ ತಮಾಂಗ್ ಪ್ರಮಾಣವಚನ

ಸಿಕ್ಕಿಂ ಕ್ರಾಂತಿಕಾರಿ ಮೋರ್ಚಾ (ಎಸ್‌ಕೆಎಂ) ಮುಖ್ಯಸ್ಥ ಪ್ರೇಮ್‌ಸಿಂಗ್ ತಮಾಂಗ್ ಸತತ ಎರಡನೇ ಬಾರಿಗೆ ಸಿಕ್ಕಿಂ ಮುಖ್ಯಮಂತ್ರಿಯಾಗಿ ಸೋಮವಾರ ಪ್ರಮಾಣವಚನ ಸ್ವೀಕರಿಸಿದರು. ಪಾಲ್ಜೋರ್ ಸ್ಟೇಡಿಯಂನಲ್ಲಿ ನಡೆದ ಸಮಾರಂಭದಲ್ಲಿ ತಮಾಂಗ್ ಅವರಿಗೆ ರಾಜ್ಯಪಾಲ ಲಕ್ಷ್ಮಣ್ ಪ್ರಸಾದ್ ಆಚಾರ್ಯ ಗೋಪ್ಯತೆಯ ಪ್ರತಿಜ್ಞಾವಿಧಿ ಬೋಧಿಸಿದರು. ಅವರೊಂದಿಗೆ 11 ಸಚಿವರೂ ಪ್ರಮಾಣವಚನ ಸ್ವೀಕರಿಸಿದರು. ನೇಪಾಳಿ ಭಾಷೆಯಲ್ಲಿ ತಮಾಂಗ್ ಪ್ರಮಾಣ ಮಾಡುತ್ತಿದ್ದಂತೆ ನೆರೆದಿದ್ದ ಸಾವಿರಾರು ಬೆಂಬಲಿಗರು ಹರ್ಷೋದ್ಗಾರ ಮಾಡಿ, ಪಟಾಕಿ ಸಿಡಿಸಿ ಸಂಭ್ರಮಿಸಿದರು. ಸಿಕ್ಕಿಂನಲ್ಲಿ ಪಟಾಕಿ ನಿಷೇಧಿಸಿರುವುದನ್ನು ಇಲ್ಲಿ ಸ್ಮರಿಸಬಹುದು. ಕಳೆದ ಬಾರಿ ಸಚಿವರಾಗಿದ್ದ ನಾಲ್ವರನ್ನು ಮಾತ್ರ ತಮಾಂಗ್ ಈ ಬಾರಿ ಸಂಪುಟದಲ್ಲಿ ಉಳಿಸಿಕೊಂಡಿದ್ದಾರೆ. ಸಿಎಂ ಪತ್ನಿ ಕೃಷ್ಣಕುಮಾರಿ ಸೇರಿದಂತೆ ನಾಲ್ವರು ಶಾಸಕಿಯರು ಆಯ್ಕೆಯಾಗಿದ್ದರೂ ಮಹಿಳೆಯರಿಗೆ ಸಂಪುಟದಲ್ಲಿ ಪ್ರಾತಿನಿಧ್ಯ ಸಿಕ್ಕಿಲ್ಲ.

**ಆಧಾರ:** ಪ್ರಜಾವಾಣಿ ದಿನಾಂಕ:11.06.2024

## 6. ಮೋಹನ್ ಮಾಝಿ ಒಡಿಶಾ ಮುಖ್ಯಮಂತ್ರಿ

ಒಡಿಶಾದಲ್ಲಿ ಸ್ಪಷ್ಟ ಬಹುಮತದಿಂದ ಅಧಿಕಾರಕ್ಕೆ ಬಂದಿರುವ ಬಿಜೆಪಿಯ ಪ್ರಥಮ ಮುಖ್ಯ ಗಡಿ ಮಂತ್ರಿಯಾಗಿ ಬುಡಕಟ್ಟು ಜನಾಂಗದ ನಾಯಕ ಮೋಹನ್ ಚರಣ್ ಮಾಝಿ ಆಯ್ಕೆಯಾಗಿದ್ದಾರೆ.

ನೂತನ ಸರ್ಕಾರದಲ್ಲಿ ಇಬ್ಬರು ಉಪ ಮುಖ್ಯಮಂತ್ರಿಗಳು ಇರಲಿದ್ದಾರೆ. ಈ ಸ್ಥಾನಕ್ಕಾಗಿ ಕೆ.ವಿ.ಸಿಂಗ್ ದೇವ್ ಮತ್ತು ಪ್ರವತಿ ಪರಿದಾ ಅವರನ್ನು ಬಿಜೆಪಿಯ ಕೇಂದ್ರ ನಾಯಕತ್ವವು ಆಯ್ಕೆ ಮಾಡಿದೆ. 'ಪಕ್ಷದ ವೀಕ್ಷಕರ ಸಮ್ಮುಖದಲ್ಲಿ ನಡೆದ ಬಿಜೆಪಿ ಶಾಸಕಾಂಗ ಪಕ್ಷದ ಸಭೆಯಲ್ಲಿ ಈ ಆಯ್ಕೆ ಅವಿರೋಧವಾಗಿ ನಡೆಯಿತು' ಎಂದು ಕೇಂದ್ರ ರಕ್ಷಣಾ ಸಚಿವ ರಾಜನಾಥ್ ಸಿಂಗ್ ಸಭೆಯಲ್ಲಿ ಪ್ರಕಟಿಸಿದರು.

ರಾಜನಾಥ್ ಸಿಂಗ್ ಹಾಗೂ ಕೇಂದ್ರ ಸಚಿವ ಭೂಪೇಂದರ್ ಯಾದವ್ ಅವರು ವೀಕ್ಷಕರಾಗಿ ಶಾಸಕಾಂಗ ಪಕ್ಷದ ಸಭೆಯಲ್ಲಿ ಪಾಲ್ಗೊಂಡಿದ್ದರು. ಆಯ್ಕೆ ಜನ ಕುರಿತು ಸಿಂಗ್ ಅವರು 'ಎಕ್ಸ್'ನಲ್ಲೂ ಪೋಸ್ಟ್ ಮಾಡಿದ್ದಾರೆ. ಹೊಸ ಸರ್ಕಾರದ ಪ್ರಮಾಣ ವಚನ ಸಮಾರಂಭ ಇಲ್ಲಿನ ಜನತಾ ಮೈದಾನದಲ್ಲಿ ನಡೆಯಲಿದೆ.

52 ವರ್ಷದ ಮಾಝಿ ಅವರು ಕಿಯೊನಿಹರ್ ಕ್ಷೇತ್ರದಿಂದ ವಿಧಾನಸಭೆಗೆ ಆಯ್ಕೆಯಾಗಿದ್ದು, ಬಿಜೆಡಿ ಪಕ್ಷದ ಮಿನಾ ಮಾಝಿ ಅವರ ವಿರದ್ಧ 11,577 ಮತಗಳ ಅಂತರದಿಂದ ಜಯ ಗಳಿಸಿದ್ದರು.

ಡಿಸಿಎಂಗಳಾಗಿ ಆಯ್ಕೆಯಾಗಿರುವ ಕೆ.ವಿ.ಸಿಂಗ್ ದೇವ್ ಅವರು ಪಟ್ನಾಗರ್ ಕ್ಷೇತ್ರದಿಂದ ಬಿಜೆಡಿಯ ಸರೋಜ್ ಕುಮಾರ್, ಮೆಹ್ ವಿರುದ್ಧ 1,357 ಮತಗಳಿಂದ ಜಯಗಳಿಸಿದ್ದರು. ಪ್ರವತಿ ಪರಿದಾ ಅವರು ನಿಮಪರ ಕ್ಷೇತ್ರದಿಂದ ಬಿಜೆಡಿಯ ದಿಲೀಪ್ ಕುಮಾರ್ ನಾಯಕ್ ವಿರುದ್ಧ 4,588 ಮತಗಳಿಂದ ಆಯ್ಕೆಯಾಗಿದ್ದಾರೆ.

ಪಕ್ಷದ ಮೂಲಗಳ ಪ್ರಕಾರ, ನಡೆಯಲಿರುವ ಪ್ರಮಾಣವಚನ ಸ್ವೀಕಾರ ಸಮಾರಂಭದಲ್ಲಿ ಪ್ರಧಾನಿ ನರೇಂದ್ರ ಮೋದಿ, ಇತರೆ ಹಿರಿಯ ನಾಯಕರು ಭಾಗವಹಿಸಲಿದ್ದಾರೆ.

147 ಸದಸ್ಯ ಬಲದ ವಿಧಾನಸಭೆಗೆ ಈಚೆಗೆ ನಡೆದ ಚುನಾವಣೆಯಲ್ಲಿ ಬಿಜೆಪಿ 78 ಸ್ಥಾನಗಳಿಸಿ ಸ್ಪಷ್ಟ ಬಹುಮತ ಪಡೆದರೆ, ಅಧಿಕಾರ ಕಳೆದುಕೊಂಡ ಬಿಜೆಡಿ 51 ಸ್ಥಾನಗಳಿಸಲಷ್ಟೇ ಶಕ್ತವಾಗಿತ್ತು.

**ಆಧಾರ:**ಪ್ರಜಾವಾಣಿ ದಿನಾಂಕ:12.06.2024

## 7. ಬಿಹಾರ: ಮೀಸಲು ಶೇ.65ಕ್ಕೆ ಏರಿಕೆ ಹೈಕೋರ್ಟ್‌ನಿಂದ ರದ್ದು

ಪರಿಶಿಷ್ಟ ಜಾತಿ, ಪಂಗಡ ಮತ್ತು ಇತರೆ ಹಿಂದುಳಿದ ಸಮುದಾಯದವರಿಗೆ ಶಿಕ್ಷಣ ಮತ್ತು ಉದ್ಯೋಗದಲ್ಲಿನ ಮೀಸಲು ಮಿತಿಯನ್ನು ಶೇ.50ರಿಂದ ಶೇ.65ಕ್ಕೆ ಹೆಚ್ಚಳ ಮಾಡಿ ಬಿಹಾರದ ನಿತೀಶ್ ಕುಮಾರ್ ಸರ್ಕಾರ 2023ರಲ್ಲಿ ಹೊರಡಿಸಿದ್ದ ಆದೇಶವನ್ನು ಬಿಹಾರ ಹೈಕೋರ್ಟ್ ವಜಾ ಮಾಡಿದೆ.

'ಮೀಸಲು ಮಿತಿ ಶೇ.50ರ ಗಡಿ ದಾಟುವಂತಿಲ್ಲ' ಎಂದು ಇಂದ್ರಾ ಸಾಹ್ನಿ ಪ್ರಕರಣದಲ್ಲಿ ಸುಪ್ರೀಂಕೋರ್ಟ್ ನೀಡಿದ್ದ ಆದೇಶವನ್ನು ಉಲ್ಲೇಖಿಸಿ ಅರ್ಜಿದಾರರು ಮಾಡಿದ್ದ ವಾದವನ್ನು ಎತ್ತಿಹಿಡಿದ ಹೈಕೋರ್ಟ್ ಈ ಮಹತ್ವದ ಆದೇಶ ಹೊರಡಿಸಿದೆ.

ಹೈಕೋರ್ಟ್‌ನ ಈ ಆದೇಶದಿಂದಾಗಿ 'ನಿತೀಶ್ ಕುಮಾರ್ ನೇತೃತ್ವದ ಜೆಡಿಯು ಸರ್ಕಾರಕ್ಕೆ ಹಿನ್ನಡೆಯಾಗಿದೆ. ಜೊತೆಗೆ ಜಾತಿಗಣತಿ ನಡೆಸಿ ಅದರ ಆಧಾರದಲ್ಲಿ ಮೀಸಲು ಮಿತಿಯನ್ನು ಹೆಚ್ಚಿಸುವಂತೆ ವಿವಿಧ ರಾಜ್ಯಗಳಲ್ಲಿ ವ್ಯಕ್ತವಾಗುತ್ತಿರುವ ಬೇಡಿಕೆಗಳ ಮೇಲೂ ಈ ತೀರ್ಪು ಪರಿಣಾಮ ಬೀರುವ ಸಾಧ್ಯತೆ ಇದೆ.

ಆದರೆ ಹೈಕೋರ್ಟ್ ಆದೇಶ ಪ್ರಶ್ನಿಸಿ ಸುಪ್ರೀಂಕೋರ್ಟ್‌ಗೆ ಹೋಗುವುದಾಗಿ ಬಿಹಾರ ಉಪ ಮುಖ್ಯಮಂತ್ರಿ ಸಾಮ್ರಾಟ್ ಚೌಧರಿ ಹೇಳಿದ್ದಾರೆ.

ಬಿಹಾರ ಸರ್ಕಾರದ ನಿರ್ಧಾರವು ಸಂವಿಧಾನದ 14 (ಕಾನೂನಿನ ಮುಂದೆ ಸಮಾನತೆ), 16 (ಉದ್ಯೋಗದಲ್ಲಿ ಎಲ್ಲಾ ನಾಗರಿಕರಿಗೂ ಸಮಾನ ಅವಕಾಶದ ಹಕ್ಕು) ಮತ್ತು 20 (ಅಪರಾಧ ಪ್ರಕರಣಗಳಲ್ಲಿ ಕೆಲವೊಂದು ಹಕ್ಕುಗಳ ರಕ್ಷಣೆ) ವಿಧಿಗಳ ಉಲ್ಲಂಘನೆಯಾಗಿದೆ ಎಂದು ಹಲವು ಅರ್ಜಿದಾರರು ಹೈಕೋರ್ಟ್ ಮೆಟ್ಟಿಲೇರಿದ್ದರು.

ಅಲ್ಲದೆ, ಇಂದ್ರಾ ಸಾಹ್ನಿ ಪ್ರಕರಣದಲ್ಲಿ ಸುಪ್ರೀಂ ಕೋರ್ಟ್ ಯಾವುದೇ ಕಾರಣಕ್ಕೂ ಒಟ್ಟಾರೆ ಮೀಸಲು ಪ್ರಮಾಣ ಶೇ.50ರ ಮಿತಿ ದಾಟಬಾರದು ಎಂದು ಸ್ಪಷ್ಟಪಡಿಸಿದೆ ಎಂಬ ಅಂಶವನ್ನು ಗಮನಕ್ಕೆ ತಂದಿದ್ದರು.. ಅಲ್ಲದೆ ಇತ್ತೀಚಿನ ಮಹಾರಾಷ್ಟ್ರದ ಮರಾಠ ಮೀಸಲು ಪ್ರಕರಣದಲ್ಲಿ ಕೂಡಾ ಯಾವುದೇ ರಾಜ್ಯ ಸರ್ಕಾರ ಶೇ.50ರ ಮಿತಿ ದಾಟುವಂಥ ಮೀಸಲು ಜಾರಿ ಮಾಡಬಾರದು ಎಂದು ಸುಪ್ರೀಂಕೋರ್ಟ್ ಹೇಳಿದ್ದನ್ನು ನ್ಯಾಯಾಲಯದ ಗಮನಕ್ಕೆ ತಂದಿದ್ದರು. ಈ ಅಂಶಗಳನ್ನು ಪರಿಗಣಿಸಿ ಪಾಟ್ನಾ ಹೈಕೋರ್ಟ್ ಆದೇಶ ನೀಡಿತು.

**ಆಧಾರ:** ಕನ್ನಡ ಪ್ರಭ ದಿನಾಂಕ:12.06.2024

## 8. Naidu is back A.P. Chief Minister

Telugu Desam Party (TDP) national president N. Chandrababu Naidu was on Wednesday sworn in as the Chief Minister of Andhra Pradesh.

This is his second stint as Chief Minister of the State post its bifurcation. He had served as the Chief Minister of undivided Andhra Pradesh for two terms. Governor S. Abdul

Nazeer administered the oath of office to Mr. Naidu at Kesarapalle near Vijayawada. Prime Minister Narendra Modi, Union Home Minister Amit Shah, and Union Ministers J.P.Nadda, G. Kishan Reddy and Bandi Sanjay, former Vice-President M. Venkaiah Naidu, former Chief Justice of India N.V. Ramana, actors K.Chiranjeevi and Rajinikanth, and a host of VVIPs attended the ceremony.

YSRCP president and former Chief Minister Y.S.Jagan Mohan Reddy did not turn up for the swearing-in. According to reports, Mr. Naidu tried to call Mr. Reddy over the phone to invite him for the ceremony. But he could not reach the YSRCP chief. Janasena Party president Pawan Kalyan was among the 24 MLAs from the NDA partners (the TDP, BJP and the JSP) who took oath as Ministers.

The NDA partners won 164 of the 175 Assembly seats in the elections, while the YSRCP won 11 seats. While the TDP won 135 Assembly constituencies, the JSP and the BJP won 21 and eight Assembly seats respectively. Mr.Naidu allocated three berths to the JSP and one to the BJP.

Mr. Naidu adopted a formula to ensure that the NDA partners get their due share in the Cabinet. He selected one Minister for every seven seats won by the alliance partners, As the JSP won 21 seats, it got three berths, while the BJP got one. The remaining were earmarked for the TDP. The Chief Minister will allocate the portfolios to his Cabinet colleagues soon.

It is widely discussed in the political circles that Mr. Pawan Kalyan will be made Deputy Chief Minister with a key portfolio. The actor-turned-politician had played a key role in the formation of the alliance between the TDP and BJP.

Kolusu Parthasarathy, who switched loyalties from the YSRCP to the TDP before the elections, was taken into the Cabinet. K.Atchannaidu and P. Narayana, who were in 2014-19 Cabinet, got a chance in the present Cabinet as well. N.Md Farooq, a senior leader who had been with the TDP since its formation and served as a Minister earlier, was the lone minority face in the Cabinet. The lone Minister from BJP was Satya Kumar Yadav, who won from Dharmavaram Assembly constituency. He is a close aide of Mr.Venkaiah Naidu, and works as BJP national secretary.

**Courtesy:** The Hindu Date:13.06.2024

## 9. ದಿಲ್ಲಿ ಸಿಎಂ ಅರವಿಂದ್ ಕೇಜ್ರಿವಾಲ್‌ಗೆ ಜಾಮೀನು

ಅಬಕಾರಿ ನೀತಿ ಹಗರಣಕ್ಕೆ ಸಂಬಂಧಿಸಿದ ಹಣ ಅಕ್ರಮ ವರ್ಗಾವಣೆ ಪ್ರಕರಣದಲ್ಲಿ ಜೈಲು ಸೇರಿದ್ದ ದಿಲ್ಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರಿಗೆ ಕೊನೆಗೂ ಬಿಡುಗಡೆ ಭಾಗ್ಯ ದೊರೆದಿದೆ. ದಿಲ್ಲಿ ನ್ಯಾಯಾಲಯ ಕೇಜ್ರಿವಾಲ್‌ಗೆ ಮಂಜೂರು ಮಾಡಿದೆ.

ಜಾಮೀನು ಅರ್ಜಿ ಕುರಿತಾಗಿ ಅರ್ಜಿದಾರರು ಮತ್ತು ಜಾರಿ ನಿರ್ದೇಶನಾಲಯದ(ಇ.ಡಿ) ವಾದ–ಪ್ರತಿವಾದ ಆಲಿಸಿದ ವಿಶೇಷ ನ್ಯಾಯಾಧೀಶ ನಿಯಾಯ್ ಬಿಂದು ಅವರು, 1ಲಕ್ಷ ರೂ.ವೈಯಕ್ತಿಕ ಬಾಂಡ್ ಪಡೆದು ಕೇಜ್ರಿವಾಲ್ ಅವರನ್ನು ಬಿಡುಗಡೆ ಮಾಡುವಂತೆ ಆದೇಶಿಸಿದರು.

**ಆಧಾರ**: ವಿಜಯಕರ್ನಾಟಕ, ದಿನಾಂಕ: 21.06.2024

## 10. ರಾಜ್ಯದ ಹೆಸರು 'ಕೇರಳಂ' ಎಂದು ಬದಲು: ಕೇರಳ ವಿಧಾನಸಭೆ ಗೊತ್ತುವಳಿ

ಕೇರಳ ರಾಜ್ಯದ ಹೆಸರನ್ನು 'ಕೇರಳಂ' ಎಂದು ಬದಲಿಸಲು ಕೇಂದ್ರ ಸರ್ಕಾರಕ್ಕೆ ಮನವಿ ಮಾಡುವ ನಿರ್ಣಯವೊಂದನ್ನು ಕೇರಳದ ವಿಧಾನಸಭೆಯಲ್ಲಿ ಸೋಮವಾರ ಅಂಗೀಕರಿಸಲಾಗಿದೆ. ಕಳೆದ ವರ್ಷವೇ ಇಂಥದ್ದೊಂದು ನಿರ್ಣಯ ಅಂಗೀಕರಿಸಿ ಕೇಂದ್ರಕ್ಕೆ ಕಳುಹಿಸಿಕೊಟ್ಟಿತ್ತು. ಆದರೆ ಅದರಲ್ಲಿ ಕೆಲವೊಂದು ಲೋಪ ಇದೆ. ಅದನ್ನು ಸರಿಪಡಿಸಿ ಕಳುಹಿಸಿ ಎಂದು ಕೇಂದ್ರ ಸರ್ಕಾರ ಗೊತ್ತುವಳಿ ಮರಳಿಸಿದ್ದ ಹಿನ್ನೆಲೆಯಲ್ಲಿ ವಿಧಾನ ಸಭೆಯಲ್ಲಿ ಪರಿಷ್ಕೃತ ಗೊತ್ತುವಳಿ ಅಂಗೀಕರಿಸಲಾಗಿದೆ. ಮಲಯಾಳಂ ನಲ್ಲಿ 'ಕೇರಳಂ' ಎಂದೇ ಬಳಸಲಾಗುತ್ತಿದ್ದು, ಕೇಂದ್ರದ ಕಡತಗಳಲ್ಲಿ ಹಾಗೂ ಅನ್ಯ ಭಾಷೆಗಳಲ್ಲೂ ಇದನ್ನೇ ಪಾಲಿಸಬೇಕು ಎಂಬುದು ಕೇರಳ ವಿಧಾನಸಭೆಯ ಆಗ್ರಹವಾಗಿದೆ.

**ಆಧಾರ:**ಕನ್ನಡಪ್ರಭ ದಿನಾಂಕ:25.06.2024

## 11. ರಾಜ್ಯಪಾಲರ ವರ್ತನೆಗೆ ಆಕ್ಷೇಪ

ಚುನಾಯಿತ ಶಾಸಕರು ಅಂಗೀಕರಿಸಿದ ಮಸೂದೆಗಳನ್ನು ಅನಿರ್ದಿಷ್ಟಾವಧಿಯವರೆಗೆ ಹಿಡಿದಿಟ್ಟುಕೊಳ್ಳುವ ರಾಜ್ಯಪಾಲರ ವರ್ತನೆ ಸರಿಯಲ್ಲ ಎಂದು ಸುಪ್ರೀಂಕೋರ್ಟ್ ನ್ಯಾಯಮೂರ್ತಿ ಬಿ.ವಿ. ನಾಗರತ್ನಾ ಎಚ್ಚರಿಸಿದರು. ಅವರು, ಪಂಜಾಬ್ ರಾಜ್ಯಪಾಲರನ್ನು ಒಳಗೊಂಡ ಪ್ರಕರಣವೊಂದನ್ನು ಉಲ್ಲೇಖಿಸಿ ಈ ಕುರಿತು ಹೇಳಿಕೆ ನೀಡಿದರು.

ಇಲ್ಲಿನ ಎನ್‌ಎಎಲ್‌ಎಸ್‌ಎಆರ್ ಕಾನೂನು ವಿಶ್ವವಿದ್ಯಾಲಯದಲ್ಲಿ ಶನಿವಾರ ನಡೆದ ನ್ಯಾಯಾಲಯಗಳು ಮತ್ತು ಸಂವಿಧಾನ ಅಧಿವೇಶನದ ಐದನೇ ಆವೃತ್ತಿಯ ಉದ್ಘಾಟನಾ ಕಾರ್ಯಕ್ರಮದಲ್ಲಿ ಅವರು ಪ್ರಧಾನ ಭಾಷಣ ಮಾಡಿದರು.

ಮಹಾರಾಷ್ಟ್ರ ವಿಧಾನಸಭೆಯ ಪ್ರಕರಣವನ್ನೂ ಉಲ್ಲೇಖಿಸಿದ ಅವರು, ಸಾಕಷ್ಟು ಪುರಾವೆಗಳ ಕೊರತೆಯ ನಡುವೆಯೂ ರಾಜ್ಯಪಾಲರು ಸದನದ ಬಲಾಬಲ ಪರೀಕ್ಷೆಗೆ ಸೂಚಿಸಿದ್ದು. ಅತಿಕ್ರಮಣದ ಮತ್ತೊಂದು ನಿದರ್ಶನ ಎಂದು ಹೇಳಿದರು.

ರಾಜ್ಯಪಾಲರು ತೆಗೆದುಕೊಂಡ ಕ್ರಮಗಳನ್ನು ಅಥವಾ ಅವರಿಂದಾದ ಲೋಪಗಳನ್ನು ಸಾಂವಿಧಾನಿಕ ನ್ಯಾಯಲಯಗಳ ಮುಂದೆ ಪರಿಗಣನೆಗೆ ತರುವುದು, ಸಂವಿಧಾನ ಅಡಿಯಲ್ಲಿ ಆರೋಗ್ಯಕರ ಬೆಳವಣಿಗೆಯಲ್ಲ ಎಂದರು.

₹500 ಮತ್ತು ₹1,000 ಮುಖಬೆಲೆಯ ನೋಟುಗಳನ್ನು ರದ್ದುಪಡಿಸಿದ ಪ್ರಕರಣದಲ್ಲಿ ತಾನು ಅಸಮ್ಮತಿ ಸೂಚಿಸಿದ್ದನ್ನೂ ಅವರು ಈ ವೇಳೆ ಪ್ರಸ್ತಾಪಿಸಿದರು. 2016ರಲ್ಲಿ ಕೇಂದ್ರ ಸರ್ಕಾರ ಈ ನಿರ್ಧಾರ ಪ್ರಕಟಿಸಿದಾಗ, ₹500 ಮತ್ತು 1,000 ಮುಖಬೆಲೆಯ ನೋಟುಗಳು ಒಟ್ಟಾರೆ ಕರೆನ್ಸಿಯಲ್ಲಿ ಶೇ. 86ರಷ್ಟಿದ್ದವು. ಅದರಲ್ಲಿ ಶೇ. 98ರಷ್ಟು ವಾಪಸಾದವು. ಕಪ್ಪು ಹಣವನ್ನು ಸಕ್ರಮವಾಗಿ ಪರಿವರ್ತಿಸುವ ಒಂದು ಉತ್ತಮ ಮಾರ್ಗ ಇದು ಎಂದು ಭಾವಿಸಿದ್ದೆವು. ಆದರೆ, ಸಾಮಾನ್ಯ ವ್ಯಕ್ತಿಯ ಸಂಕಟವು ನಿಜಕ್ಕೂ ನನ್ನ ಮನ ಕಲಕಿತು. ಆದ್ದರಿಂದ ನಾನು ಅಸಮ್ಮತಿ ಸೂಚಿಸಬೇಕಾಯಿತು' ಎಂದು ಅವರು ವಿವರಿಸಿದರು.

**ಆಧಾರ:**ಪ್ರಜಾವಾಣಿ ದಿನಾಂಕ:27.06.2024

## 12. ದೇಶಾದ್ಯಂತ ಜಾತಿ ಗಣತಿಗೆ ಒತ್ತಾಯ

2021 ರಿಂದ ಬಾಕಿ ಆಗಿರುವ ಜನಗಣತಿ ಜತೆಗೆ ಜಾತಿ ಗಣತಿಯನ್ನು ದೇಶಾದ್ಯಂತ ನಡೆಸುವಂತೆ ಕೇಂದ್ರ ಸರಕಾರವನ್ನು ಒತ್ತಾಯಿಸಿ ತಮಿಳುನಾಡು ವಿಧಾನಸಭೆ ಬುಧವಾರ ನಿರ್ಣಯ ಅಂಗೀಕರಿಸಿದೆ.

ಮುಖ್ಯಮಂತ್ರಿ ಎಂ.ಕೆ.ಸ್ಟಾಲಿನ್ ಮಂಡಿಸಿದ ನಿರ್ಣಯವನ್ನು ವಿಧಾನಸಭೆಯಲ್ಲಿ ಸರ್ವಾನುಮತದಿಂದ ಅಂಗೀಕರಿಸಲಾಗಿದೆ.

'ಭಾರತದ ಪ್ರತಿಯೊಬ್ಬ ಪ್ರಜೆಗೂ ಶಿಕ್ಷಣ, ಉದ್ಯೋಗ, ಆರ್ಥಿಕತೆಯಲ್ಲಿ ಸಮಾನತೆ ಸಾಧಿಸುವ ಹಕ್ಕು ಹಾಗೂ ಅವಕಾಶ ಪಡೆಯಲು ನೀತಿಗಳನ್ನು ರೂಪಿಸಲು ಜಾತಿಗಣತಿ ಅತ್ಯಗತ್ಯವಾಗಿದೆ ಎಂದು ಸದನ ಪರಿಗಣಿಸುತ್ತದೆ. ಹೀಗಾಗಿ ಈ ಸದನ ಸರ್ವಾನುಮತದಿಂದ 2021ರಿಂದ ಬಾಕಿ ಉಳಿದಿರುವ ಜನ ಗಣತಿಯನ್ನು ನಡೆಸುವುದರ ಜತೆಗೆ ಜಾತಿ ಗಣತಿಯನ್ನೂ ರಾಷ್ಟ್ರವ್ಯಾಪಿ ನಡೆಸಬೇಕು ಎಂದು ಕೇಂದ್ರ ಸರಕಾರವನ್ನು ಒತ್ತಾಯಿಸುತ್ತದೆ' ಎಂದು ಸ್ಟಾಲಿನ್ ನಿರ್ಣಯ ಮಂಡಿಸಿದರು.

ಜಾತಿ ಗಣತಿಯನ್ನು ನಡೆಸುವ ಅಧಿಕಾರ ರಾಜ್ಯಕ್ಕೆ ಇರುವಾಗ ಈ ನಿರ್ಣಯ ಮಂಡನೆ ಅನಗತ್ಯ ಎಂದು ಪಿಎಂಕೆ ನಾಯಕ ಆರ್.ಅರುಳ್ ಅಭಿಪ್ರಾಯ ವ್ಯಕ್ತಪಡಿಸಿದರು.

ಜನಗಣತಿ ಕಾಯ್ದೆ ಪ್ರಕಾರ ಜಾತಿ ಗಣತಿ ಭಾರತ ಸರಕಾರ ಮಾತ್ರ ಮಾಡಬಹುದಾಗಿದೆ ಎಂದು ಸ್ಟಾಲಿನ್ ಪ್ರತಿಕ್ರಿಯಿಸಿದರು.

**ಆಧಾರ**:ವಿಶ್ವವಾಣಿ ದಿನಾಂಕ:27.06.2024

## 13. ಹೊಸೂರಿನಲ್ಲಿ ಹೊಸ ಏರ್‌ಪೋರ್ಟ್

ಹೊಸೂರನ್ನು ರಾಜ್ಯದ ಪ್ರಮುಖ ಕೈಗಾರಿಕಾ ಕೇಂದ್ರವಾಗಿ ಪರಿವರ್ತಿಸುವುದಕ್ಕೆ ಉತ್ತೇಜನ ನೀಡುವ ಉದ್ದೇಶದಿಂದ ಅಲ್ಲಿ ಹೊಸ ಏರ್‌ಪೋರ್ಟ್ ನಿರ್ಮಿಸಲಾಗುವುದೆಂದು ತಮಿಳುನಾಡು ಮುಖ್ಯಮಂತ್ರಿ ಎಂ.ಕೆ.ಸ್ಟಾಲಿನ್ ಗುರುವಾರ ವಿಧಾನಸಭೆಯಲ್ಲಿ ಪ್ರಕಟಿಸಿದ್ದಾರೆ. 2,000 ಎಕರೆಗೂ ಅಧಿಕ ವಿಸ್ತಾರದ ಪ್ರದೇಶದಲ್ಲಿ ನಿರ್ಮಿಸಲಾಗುವ ಈ ಏರ್‌ಪೋರ್ಟ್, ವಾರ್ಷಿಕ ಮೂರು ಕೋಟಿ ಪ್ರಯಾಣಿಕರನ್ನು ನಿರ್ವಹಿಸುವ ಸಾಮರ್ಥ್ಯ ಹೊಂದಿರುತ್ತದೆ ಎಂದವರು ವಿವರಿಸಿದ್ದಾರೆ.

ಹೊಸೂರು ಮತ್ತು ಸುತ್ತಮುತ್ತ ಇರುವ ಉತ್ಪಾದನೆ ಹಾಗೂ ಕೈಗಾರಿಕಾ ಘಟಕಗಳಿಗೆ ಸಂಪರ್ಕ ವ್ಯವಸ್ಥೆ ಹೆಚ್ಚಿಸುವುದು ಮತ್ತು ಇತರ ಬೆಂಬಲ ನೀಡುವುದು ಅಗತ್ಯವಾಗಿದೆ ಎಂದು ಸ್ಟಾಲಿನ್ ಸದನದಲ್ಲಿ ಹೇಳಿದರು. ಇತ್ತೀಚಿನ ವರ್ಷಗಳಲ್ಲಿ ಹೊಸೂರು ಇಲೆಕ್ಟ್ರಾನಿಕ್ಸ್ ಮತ್ತು ವಿದ್ಯುಚ್ಚಾಲಿತ ವಾಹನಗಳ (ಇ.ವಿ.) ಉತ್ಪಾದನೆ ಕ್ಷೇತ್ರದಲ್ಲಿ ಹೆಚ್ಚು ಬಂಡವಾಳ ಹೂಡಿಕೆಯನ್ನು ಆಕರ್ಷಿಸುತ್ತಿದೆ. ಹೊಸೂರಿಗೆ ಆಧುನಿಕ ಮೂಲಸೌಕರ್ಯಗಳನ್ನು ತರಲು ರಾಜ್ಯ ಸರ್ಕಾರ ಅನೇಕ ದೂರದೃಷ್ಟಿಯ ಕ್ರಮಗಳನ್ನು ಕೈಗೊಳ್ಳುತ್ತಿದೆ ಎಂದು ಸ್ಟಾಲಿನ್ ಹೇಳಿದರು. ಹೊಸೂರಿಗೆ ಹೊಸ ಮಾಸ್ಟರ್ ಪ್ಲಾನ್ ಶೀಘ್ರವೇ ಸಿದ್ದಗೊಳ್ಳಲಿದೆ ಎಂದೂ ಸದನಕ್ಕೆ ತಿಳಿಸಿದರು.

ಕೃಷ್ಣಗಿರಿ, ಧರ್ಮಗಿರಿ ವಲಯಗಳ ಸಾಮಾಜಿಕ-ಆರ್ಥಿಕ ಅಭಿವೃದ್ಧಿಗೆ ನೆರವಾಗಲು ಹೊಸೂರಿನಲ್ಲಿ ಒಂದು ವಿಮಾನ ನಿಲ್ದಾಣವನ್ನು ಸ್ಥಾಪಿಸುವುದು ಅಗತ್ಯವೆಂಬುದು ಸರ್ಕಾರದ ಅಭಿಪ್ರಾಯವಾಗಿದೆ ಎಂದು ಸಿಎಂ ಹೇಳಿದರು.

**ಆಧಾರ**:ವಿಜಯವಾಣಿ ದಿನಾಂಕ:28.06.2024

# ಭಾಗ–8

# ಶ್ರದ್ಧಾಂಜಲಿ

## 1. ಸುನಂದಾ ಪಾಟೀಲ್, ಮಾಜಿ ವಿಧಾನಪರಿಷತ್ ಸದಸ್ಯರು



ಮಾಜಿ ವಿಧಾನ ಪರಿಷತ್ ಸದಸ್ಯರು ಸುನಂದಾ ಲಿಂಗನಗೌಡ ಪಾಟೀಲ(71) ಇವರು ದಿನಾಂಕ:14.04.2024 ರಂದು ನಿಧನರಾದರು.

ಅವರು ನ್ಯಾಯವಾದಿ, ಕಲಘಟಗಿ ತಾಲ್ಲೂಕಿನ ಮಿಶ್ರಿಕೋಟಿ ಗ್ರಾಮದ ಸಹಕಾರ ಶಿಕ್ಷಣ ಸಂಸ್ಥೆಯಲ್ಲಿ ಶಿಕ್ಷಕರಾಗಿ, ಪದವಿ ಪೂರ್ವ ಕಾಲೇಜಿನ ಪ್ರಾಚಾರ್ಯರಾಗಿ ಸೇವೆ ಸಲ್ಲಿಸಿದ್ದರು. 1995ರಂದು ಅವರು ರಾಜಕೀಯದಲ್ಲಿದ್ದರು. ಬಿಜೆಪಿ ವಿವಿಧ ಸ್ತರಗಳಲ್ಲಿ ಸೇವೆ ಸಲ್ಲಿಸಿ ಜನಾನುರಾಗಿಯಾಗಿದ್ದರು. ತಮ್ಮ ಶಾಸಕತ್ವದ ಐದು ವರ್ಷಗಳ ಅವಧಿಯಲ್ಲಿ ವಿಧಾನಸಭೆಯಲ್ಲಿ ಒಂದು ದಿನವೂ ಗೈರಾಗದೆ ದಾಖಲೆ ನಿರ್ಮಿಸಿದ್ದರು.

## 2. ರಮೇಶಕುಮಾರ ಪಾಂಡೆ, ಮಾಜಿ ವಿಧಾನಸಭಾ ಸದಸ್ಯರು



ರಮೇಶಕುಮಾರ ಪಾಂಡೆ, ಮಾಜಿ ವಿಧಾನ ಸಭಾ ಸದಸ್ಯರು(90) ಇವರು ಬೀದರ್ ನಗರದಲ್ಲಿ ದಿನಾಂಕ:17.04.2024 ರಂದು ನಿಧನರಾದರು.

ರಮೇಶಕುಮಾರ ಪಾಂಡೆ ಅವರು ದಿನಾಂಕ:01.07.1947ರಲ್ಲಿ ಬೀದರ್‌ನಲ್ಲಿ ಜನಿಸಿದ್ದರು. ವೃತ್ತಿಯಲ್ಲಿ ವ್ಯಾಪಾರಸ್ಥರಾಗಿದ್ದ ಪಾಂಡೆಯವರು 1990ರಲ್ಲಿ ಬೀದರ್ ನಗರ ಸಭೆಯ ಅಧ್ಯಕ್ಷರಾಗಿ ಹಾಗೂ ವಿವಿಧ ಶಿಕ್ಷಣ ಸಂಸ್ಥೆಗಳಲ್ಲಿ ಪದಾಧಿಕಾರಿಯಾಗಿ ಸೇವೆ ಸಲ್ಲಿಸಿದ್ದರು. 1999 ಆರ್‌ಆರ್‌ಕೆ ಶಿಕ್ಷಣ ಸಂಸ್ಥೆಯ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದರು. 1999ರ ವಿಧಾನಸಭೆ ಚುನಾವಣೆಯಲ್ಲಿ ಬೀದರ್ ಕ್ಷೇತ್ರದಿಂದ ಸ್ಪರ್ಧಿಸಿ ಗೆಲವು ಕಂಡಿದ್ದರು.

## 3. ಶ್ರೀನಿವಾಸ ಪ್ರಸಾದ್. ಮಾಜಿ ಕೇಂದ್ರ ಸಚಿವರು



ಮಾಜಿ ಸಂಸದ ಮತ್ತು ಶಾಸಕರಾಗಿ ರಾಜ್ಯ ಮತ್ತು ಕೇಂದ್ರದ ಸಚಿವರಾಗಿ ಕಾರ್ಯನಿರ್ವಹಿಸಿದ್ದ ಶ್ರೀನಿವಾಸ ಪ್ರಸಾದ್(76) ದಿನಾಂಕ:30.04.2024 ರಂದು ಬೆಂಗಳೂರಿನಲ್ಲಿ ನಿಧನರಾದರು.

ಶ್ರೀನಿವಾಸಪ್ರಸಾದ್‌ರವರು ದಿನಾಂಕ:06.08.1948 ರಂದು ಮೈಸೂರಿನಲ್ಲಿ ಜನಿಸಿದ್ದು, ಬಿಎಸ್ಸಿ, ಎಂ.ಎ. ಪದವೀಧರರಾಗಿದ್ದ ಅವರು 1974 ರಲ್ಲಿ ಕೃಷ್ಣರಾಜ ಕ್ಷೇತ್ರದಿಂದ ಪಕ್ಷೇತರರಾಗಿ ಸ್ಪರ್ಧಿಸುವ ಮೂಲಕ ರಾಜಕೀಯ ಪ್ರವೇಶಿಸಿದ್ದರು. 2008ರಲ್ಲಿ ಪ್ರಥಮ ಬಾರಿಗೆ ವಿಧಾನಸಭೆಗೆ ಪ್ರವೇಶಿಸಿದ್ದ ಅವರು ನಂತರ 2013ರಲ್ಲಿ 14ನೇ ವಿಧಾನಸಭೆಗೆ ಆಯ್ಕೆಗೊಂಡು 2013 ರಿಂದ 2016ರವರೆಗೆ ಕಂದಾಯ ಸಚಿವರಾಗಿ ಸೇವೆ ಸಲ್ಲಿಸಿದರು. 6 ಬಾರಿ ಚಾಮರಾಜನಗರ ಲೋಕಸಭಾ ಕ್ಷೇತ್ರದಿಂದ ಸಂಸದರಾಗಿ ಆಯ್ಕೆಗೊಂಡಿದ್ದ ಅವರು 1999 ರಿಂದ 2004ರವರೆಗೆ ಕೇಂದ್ರ ಗ್ರಾಹಕ ಮತ್ತು ಸಾರ್ವಜನಿಕ ವಿತರಣಾ ಖಾತೆ ರಾಜ್ಯ ಸಚಿವರಾಗಿ ಕಾರ್ಯ ನಿರ್ವಹಿಸಿದ್ದರು.

ತಮ್ಮ 5 ದಶಕಗಳ ಸುದೀರ್ಘ ರಾಜಕೀಯ ಜೀವನದಲ್ಲಿ ಪ್ರಾಮಾಣಿಕತೆ, ಸ್ವಚ್ಛ ಚಿತ್ರಣ, ವೃತ್ತಿಪರತೆಯ ಪ್ರತೀಕವಾಗಿದ್ದ ಅವರು ಅನೇಕ ಸಾಮಾಜಿಕ ಚಳುವಳಿಗಳ ರುವಾರಿಯಾಗಿದ್ದು, ದೀನ ದಲಿತರ, ಹಿಂದುಳಿದವರ ಧ್ವನಿಯಾಗಿದ್ದರು. ಸಾಮಾಜಿಕ ಅಸಮಾನತೆಯನ್ನು ಹೋಗಲಾಡಿಸಲು ಶ್ರಮವಹಿಸಿದ ಅವರು ಬಾಬಾ ಸಾಹೇಬ ಅಂಬೇಡ್ಕರವರ ತತ್ವಗಳನ್ನು ಅಳವಡಿಸಿಕೊಂಡು ಸಾರ್ವಜನಿಕ ಜೀವನವನ್ನು ಮುನ್ನಡೆಸಿದ್ದರು.

ಹೋರಾಟದ ಸ್ವಭಾವಕ್ಕೆ ಹೆಸರುವಾಸಿಯಾಗಿದ್ದ ಅವರು ಹಿಂದುಳಿದವರ ಸಾಮಾಜಿಕ ಆರ್ಥಿಕ ಶ್ರೇಯೋಭಿವೃದ್ಧಿಗೆ ಶ್ರಮಿಸುತ್ತಾ ಸಾಮಾಜಿಕ ನ್ಯಾಯದಲ್ಲಿ ಹಾಗೂ ನಿಷ್ಠೆಯುಳ್ಳವರಾಗಿದ್ದರು. ಅನ್ಯಾಯ, ಅಸಮಾನತೆಯ ವಿರುದ್ಧದ ಹೋರಾಟವನ್ನೇ ತಮ್ಮ ಬದುಕಾಗಿಸಿಕೊಂಡಿದ್ದರು.

## 4. ಡಾ.ನಾಗರೆಡ್ಡಿ ಪಾಟೀಲ್, ಮಾಜಿ ವಿಧಾನಸಭಾ ಸದಸ್ಯರು



ವಿಧಾನ ಸಭೆಯ ಮಾಜಿ ಸದಸ್ಯರಾಗಿದ್ದ ಡಾ.ನಾಗರೆಡ್ಡಿ ಪಾಟೀಲ್(79) ಅವರು ದಿನಾಂಕ: 06.05.2024 ರಂದು ಸೇಡಂನ ತಮ್ಮ ನಿವಾಸದಲ್ಲಿ ನಿಧನರಾದರು.

ಮಾಜಿ ಸದಸ್ಯರಾಗಿದ್ದ ನಾಗರೆಡ್ಡಿ ಪಾಟೀಲ್ ಅವರು ದಿನಾಂಕ:15.05.1946 ರಲ್ಲಿ ಗುಲ್ಬರ್ಗಾ ಜಿಲ್ಲೆಯ ಸೇಡಂನಲ್ಲಿ ಜನಿಸಿದ್ದರು. ಆಯುರ್ವೇದದಲ್ಲಿ ಡಿಪ್ಲೋಮಾ ಪಡೆದಿದ್ದ ಅವರು ವೃತ್ತಿಯಲ್ಲಿ ಕೃಷಿಕರಾದ್ದರು. 1983 ರಲ್ಲಿ 7ನೇ ವಿಧಾನ ಸಭೆಯ ಸದಸ್ಯರಾಗಿ ಆಯ್ಕೆಗೊಂಡಿದ್ದರು. ಅವರು ಕೊತ್ತಲ ಬಸವೇಶ್ವರ ಭಾರತೀಯ ಶಿಕ್ಷಣ ಸಮಿತಿಯ ಅಧ್ಯಕ್ಷರಾಗಿದ್ದರು.


## 5. ಕೆ.ವಸಂತ ಬಂಗೇರ, ಮಾಜಿ ವಿಧಾನಸಭಾ ಸದಸ್ಯರು



ವಿಧಾನ ಸಭೆಯ ಮಾಜಿ ಸದಸ್ಯರು ಹಾಗೂ ಬಡವರ ಧ್ವನಿಯಾಗಿ ನ್ಯಾಯಕ್ಕಾಗಿ ಹೋರಾಟ ಮಾಡಿದ್ದ ಬೆಳ್ತಂಗಡಿಯ ಕೆ.ವಸಂತಬಂಗೇರ(79) ಅವರು ದಿನಾಂಕ:08.05.2024 ರಂದು ಬೆಂಗಳೂರಿನಲ್ಲಿ ನಿಧನರಾದರು.

ವಿಧಾನ ಸಭೆಯ ಮಾಜಿ ಸದಸ್ಯರಾಗಿದ್ದ ಕೆ.ವಸಂತಬಂಗೇರ ಅವರು ದಿನಾಂಕ:15.01.1946 ರಂದು ದಕ್ಷಿಣ ಕನ್ನಡ ಜಿಲ್ಲೆಯ ಬೆಳ್ತಂಗಡಿ ತಾಲ್ಲೂಕಿನ ಕೇದೆಯಲ್ಲಿ ಜನಿಸಿದ್ದು, ಕುವೆಟ್ಟು ಗ್ರಾಮ ಪಂಚಾಯತ್‌ನ ಅಧ್ಯಕ್ಷರಾಗಿದ್ದರು. 1983 ರಲ್ಲಿ ಪ್ರಥಮ ಬಾರಿಗೆ 07 ನೇ ವಿಧಾನ ಸಭೆಗೆ ಪ್ರವೇಶಿಸಿದ್ದ ಅವರು 8,10,13 ಹಾಗೂ 14ನೇ ವಿಧಾನ ಸಭೆಗೆ ಸದಸ್ಯರಾಗಿ ಆಯ್ಕೆಗೊಂಡಿದ್ದರು. 06 ಬಾರಿ ಶಾಸಕಾರಾಗಿದ್ದ ಅವರು ಬಡವರ ಪರವಾಗಿ ತುಂಬಾ ಕಾಳಜಿ ಇದ್ದಂಥ ಮನುಷ್ಯ ಹಾಗೂ ಯಾವಾಗಲೂ ನ್ಯಾಯಕ್ಕಾಗಿ ಹೋರಾಟ ಮಾಡುತ್ತಿದ್ದ ಅವರು ಸಮಾಜದಲ್ಲಿ ಯಾರೇ ಅನ್ಯಾಯ ಮಾಡಿದರೂ ಅದನ್ನು ಸರಿಪಡಿಸುವಂಥ ಮನೋಭಾವವುಳ್ಳವರಾಗಿದ್ದರು.

## 6. ಟಿ.ಕೆ.ಚಿನ್ನಸ್ವಾಮಿ, ಮಾಜಿ ವಿಧಾನಪರಿಷತ್ ಸದಸ್ಯರು



ವಿಧಾನ ಪರಿಷತ್‌ನ ಮಾಜಿ ಸದಸ್ಯರಾದ ಶ್ರೀ ಟಿ.ಕೆ.ಚಿನ್ನಸ್ವಾಮಿ(94) ಅವರು ದಿನಾಂಕ:10.05.2024 ರಂದು ನಿಧನರಾದರು.

ವಿಧಾನ ಸಭೆಯ ಮಾಜಿ ಸದಸ್ಯರಾಗಿದ್ದ ಟಿ.ಕೆ.ಚಿನ್ನಸ್ವಾಮಿ ಅವರು ದಿನಾಂಕ:15.01.1946 ರಂದು ದಕ್ಷಿಣ ಕನ್ನಡ ಜಿಲ್ಲೆಯ ಬೆಳ್ತಂಗಡಿ ತಾಲ್ಲೂಕಿನ ಕೇದೆಯಲ್ಲಿ ಜನಿಸಿದ್ದು, ವೃತ್ತಿಯಲ್ಲಿ ಶಿಕ್ಷಕರಾಗಿದ್ದ ಅವರು ಪ್ರಾಥಮಿಕ ಹಾಗೂ ಪ್ರೌಢಶಾಲಾ ಶಿಕ್ಷಕರಾಗಿ ಸೇವೆ ಸಲ್ಲಿಸಿ, ಸರ್ಕಾರಿ ನೌಕರರ ಸಂಘದ ನಿರ್ದೇಶಕರಾಗಿ ಹಾಗೂ ನಾನಾ ಸಂಘ ಸಂಸ್ಥೆಗಳಲ್ಲಿ ಸೇವೆ ಸಲ್ಲಿಸಿದ್ದರು. 1988 ರಲ್ಲಿ ವಿಧಾನ ಪರಿಷತ್‌ಗೆ ನಡೆದ ದಕ್ಷಿಣ ಪದವೀಧರ ಶಿಕ್ಷಕರ ಕ್ಷೇತ್ರದಿಂದ ಪಕ್ಷೇತರ ಅಭ್ಯರ್ಥಿಯಾಗಿ ಚುನಾವಣೆ ಎದುರಿಸಿ ವಿಧಾನಪರಿಷತ್ ಪ್ರವೇಶಿಸಿದರು. ಶಿಕ್ಷಕರ ಪರವಾಗಿ ಹಲವು ಹೋರಾಟ ಮಾಡಿದ್ದರು.

## 7. ಇಕ್ಬಾಲ್‌ಅಹ್ಮದ್ ಸರಡಗಿ, ಮಾಜಿ ಸಂಸತ್ ಸದಸ್ಯರು



ಮಾಜಿ ಸಂಸದ, ಕಾಂಗ್ರೆಸ್ ಪಕ್ಷದ ಹಿರಿಯ ಮುಖಂಡ ಇಕ್ಬಾಲ್‌ಅಹ್ಮದ್ ಸರಡಗಿ(81) ಅವರು ದಿನಾಂಕ:08.05.2024 ರಂದು ನಿಧನರಾದರು.

ಮಾಜಿ ಸಂಸದರಾಗಿದ್ದ ಇಕ್ಬಾಲ್‌ಅಹ್ಮದ್ ಸರಡಗಿ ಅವರು ದಿನಾಂಕ:05.06.1944 ರಂದು ಕಲ್ಬುರ್ಗಿ ನಗರದಲ್ಲಿ ಜನಿಸಿದ್ದು, ಕಾನೂನು ಪದವೀಧರರಾಗಿದ್ದರು. ವೃತ್ತಿಯಲ್ಲಿ ವಕೀಲರಾಗಿದ್ದ ಅವರು 1978ರಲ್ಲಿ ನಗರ ಅಭಿವೃದ್ಧಿ ಯೋಜನಾ ಪ್ರಾಧಿಕಾರದ ಅಧ್ಯಕ್ಷರಾಗಿ ಹಾಗೂ 1992ರಲ್ಲಿ ಗುಲ್ಬರ್ಗಾ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದರು. ಗುಲ್ಬರ್ಗಾ ಸಾಮಾನ್ಯ ಲೋಕಸಭಾ

ಮತಕ್ಷೇತ್ರದಿಂದ 1999 ರಿಂದ 2009 ರವರೆಗೆ ಎರಡು ಬಾರಿ ಸಂಸದರಾಗಿ ಆಯ್ಕೆಯಾಗಿದ್ದರು. ಸಾಮಾನ್ಯ ಕ್ಷೇತ್ರದಲ್ಲಿ ಮುಸ್ಲೀಂ ವ್ಯಕ್ತಿಯೊಬ್ಬ ಸಂಸದನಾಗಿ ಆಯ್ಕೆಯಾಗಿ, ಜನಮನ್ನಣೆ ಗಳಿಸಿದ್ದರು. ಅಖಿಲ ಭಾರತ ಹಜ್ ಕಮಿಟಿಯ ಸದಸ್ಯರಾಗಿ ಕರ್ತವ್ಯ ನಿರ್ವಹಿಸಿದ್ದರು. 2014 ರಿಂದ 2020 ರವರೆಗೆ ಕರ್ನಾಟಕ ವಿಧಾನ ಪರಿಷತ್ ಸದಸ್ಯರಾಗಿ ಆಯ್ಕೆಯಾಗಿ ಸೇವೆ ಸಲ್ಲಿಸಿದ್ದರು.

**ಆಧಾರ: ವಿಶ್ವವಾಣಿ,** ದಿನಾಂಕ:23.05.2024


## 8. ಎಂ.ಪಿ.ಕೇಶವಮೂರ್ತಿ, ಮಾಜಿ ಸಚಿವರು



ಮಾಜಿ ಸಚಿವರು ಹಾಗೂ ನಿರ್ದೇಶಕರು ಸ್ಟೇಟ್ ಬ್ಯಾಂಕ್ ಆಫ್ ಮೈಸೂರು ಅವರು ಎಂ.ಪಿ.ಕೇಶವಮೂರ್ತಿ(85) ಅವರು ದಿನಾಂಕ:03.06.2024 ರಂದು ನಿಧನರಾದರು.

ಮಾಜಿ ಸಚಿವರಾಗಿದ್ದ ಎಂ.ಪಿ.ಕೇಶವಮೂರ್ತಿ ಅವರು ದಿನಾಂಕ:03.06.1939 ರಲ್ಲಿ ಮರಸೂರಿನಲ್ಲಿ ಜನಿಸಿದ್ದು, ಕಾನೂನು ಪದವೀಧರರಾಗಿದ್ದರು. ವೃತ್ತಿಯಲ್ಲಿ ವಕೀಲರಾಗಿದ್ದ ಅವರು ಸಾಮಾಜಿಕ ಕಾರ್ಯಕರ್ತರಾಗಿ ಸೇವೆ ಸಲ್ಲಿಸಿದ್ದರು. 1985 ರಲ್ಲಿ ಅನೇಕಲ್ ವಿಧಾನಸಭಾ ಕ್ಷೇತ್ರದಿಂದ ಮೊದಲ ಬಾರಿಗೆ 08ನೇ ವಿಧಾನಸಭೆಯನ್ನು ಪ್ರವೇಶಿದ್ದ ಅವರು 09ನೇ ವಿಧಾನಸಭೆಗೆ ಪುನರಾಯ್ಕೆಗೊಂಡಿದ್ದರು. ಅರಣ್ಯ ಮತ್ತು ನೀರಾವರಿ ಸಚಿವರಾಗಿ ಸೇವೆ ಸಲ್ಲಿಸಿದ್ದ ಅವರು ಗ್ರಾಮಗಳಿಗೆ ಕುಡಿಯುವ ನೀರು, ಆಸ್ಪತ್ರೆ, ರಸ್ತೆ ಸೇರಿದಂತೆ ವಿವಿಧ ಮೂಲಭೂತ ಸೌಲಭ್ಯಗಳನ್ನು ಕಲ್ಪಿಸಲು ಶ್ರಮಿಸಿದ್ದರು.


## 9. ಡಾ.ಪಾಟೀಲ ಬಸನಗೌಡ ಗುರನಗೌಡ, ಮಾಜಿ ವಿಧಾನಸಭಾ ಸದಸ್ಯರು



ಮಾಜಿ ಸದಸ್ಯರು ಡಾ.ಪಾಟೀಲ ಬಸನಗೌಡ ಗುರನಗೌಡ(90) ಅವರು ದಿನಾಂಕ:15.06.2024 ರಂದು ನಿಧನರಾದರು.

ಮಾಜಿ ವಿಧಾನಸಭಾ ಸದಸ್ಯರಾಗಿದ್ದ ಡಾ.ಪಾಟೀಲ ಬಸನಗೌಡ ಗುರನಗೌಡ ಅವರು ದಿನಾಂಕ:31.03.1935 ರಂದು ರಾಣಿಬೆನ್ನೂರಿನಲ್ಲಿ ಜನಿಸಿದ್ದು, ಎಲ್.ಎ.ಎಂ.ಎಸ್. ವಿದ್ಯಾರ್ಹತೆ ಹೊಂದಿದ್ದ ಅವರು ವೃತ್ತಿಯಲ್ಲಿ ವೈದ್ಯರಾಗಿದ್ದರು. ಅವರು ಬಡವರಿಗೆ ಉಚಿತ ಚಿಕಿತ್ಸೆ ನೀಡುವ ಮೂಲಕ ಜನಾನುರಾಗಿಯಾಗಿದ್ದ ಅವರು ತಾಲ್ಲೂಕು ಬೋರ್ಡ್ ಸದಸ್ಯರಾಗಿ ರಾಜಕೀಯ ಪ್ರವೇಶಿಸಿ, 1983ರಲ್ಲಿ 07ನೇ ವಿಧಾನಸಭೆಗೆ ಆಯ್ಕೆಗೊಂಡಿದ್ದರು. ಎಂಜಿನಿಯರ್ ನೇಮಕಾತಿ ಮಂಡಳಿ ಸದಸ್ಯರಾಗಿ ಹಾಗೂ 1985ರಲ್ಲಿ ಧಾರವಾಡ ಜಿಲ್ಲಾ ಪರಿಷತ್ ಅಧ್ಯಕ್ಷರಾಗಿಯೂ ಕಾರ್ಯನಿರ್ವಹಿಸಿದರು.

## 5. ಎಂ.ಬಿ.ಭಾನುಪ್ರಕಾಶ್, ಮಾಜಿ ವಿಧಾನ ಪರಿಷತ್ ಸದಸ್ಯರು



ಮಾಜಿ ವಿಧಾನ ಪರಿಷತ್ ಸದಸ್ಯ ಎಂ.ಬಿ.ಭಾನುಪ್ರಕಾಶ್(69) ಅವರು ದಿನಾಂಕ:08.05.2024 ರಂದು ಬೆಂಗಳೂರಿನಲ್ಲಿ ನಿಧನರಾದರು.

ಮಾಜಿ ವಿಧಾನ ಪರಿಷತ್ ಸದಸ್ಯರಾಗಿದ್ದ ಎಂ.ಬಿ.ಭಾನುಪ್ರಕಾಶ್ ಅವರು ದಿನಾಂಕ:27.03.1953ರಲ್ಲಿ ಜನಿಸಿದ್ದು, ಅವರು 2001–2005 ರ ಅವಧಿಯಲ್ಲಿ ಗಾಜನೂರು ಜಿಲ್ಲಾ ಪಂಚಾಯಿತಿ ಸದಸ್ಯರಾಗಿ, ರಾಜ್ಯ ಬಿಜೆಪಿ ಉಪಾಧ್ಯಕ್ಷರಾಗಿ ಕಾರ್ಯನಿರ್ವಹಿಸಿದ್ದರು. 2013 ರಿಂದ 2019 ರವರೆಗೆ ವಿಧಾನ ಪರಿಷತ್ ಸದಸ್ಯರಾಗಿದ್ದರು.

# ಭಾಗ–9

# ಪ್ರಮುಖ ಲೇಖನಗಳು

## 1. The case for the second house State Legislative Councils

As elections to six Legislative Council seats commence in Karnataka, there are debates around the efficacy of the bicameral system. In the current scenario, there are also questions regarding the choice of specialized segment and whether the categories of teachers and graduates are meaningful and still relevant in representation.

The structure of the Indian legislature took shape during the British period, through various Acts of the British Parliament. In the early part of the 20th century, the British government came to realize the need to have greater participation of Indians in the administration, as well as in lawmaking.

Accordingly, the central legislature was expanded and provincial legislatures were also established. Under the Montague Chelmsford report the Government of India. Act of 1919 provided for a bicameral legislature, or the Centre, as well as the provinces. For the first time in the legislative history of India, the legislature at the Centre and those in the provinces became bicameral, with the Legislative Assembly and the Legislative Council from 1919.

The same pattern was adopted by free India when the Constitution was made. However, only six states, which includes Andhra Pradesh, Telangana, Karnataka, Maharashtra, Bihar and Uttar Pradesh, have the second chamber, namely, the Legislative Council. The rest of the states are unicameral, having only one legislative house.

This lack of uniformity in the structure of the state legislature is rather odd. It only shows that there is no definite policy with regard to the second chamber in the state legislature. In popular parlance, the Legislative Council is called the Upper House. But the Constitution of India does not use such an expression to describe the Council does not possess the financial powers of the Assembly, which is the House directly elected by the people.

The only justification for calling the council the Upper House is that the age of entry in the Council is 30 years, whereas that in the Assembly is 25 years.

Author:PDT Acharya

**Courtesy:** Deccan Herald, Date: 19.05.2024.

## 2. ಸ್ಪೀಕರ್ ಸ್ಥಾನದ ಮಹತ್ವ

ಸ್ಪಷ್ಟ ಬಹುಮತವಿರುವ ಸರ್ಕಾರಗಳ ನಿರ್ವಹಣೆಯಲ್ಲಿ ವಿಧಾನಸಭೆ ಅಥವಾ ಲೋಕಸಭೆಯ ಸ್ಪೀಕರ್ ಸ್ಥಾನಕ್ಕೆ ಸಾಮಾನ್ಯವಾಗಿ ಅಂತಹ ಮಹತ್ವ ಇರುವುದಿಲ್ಲ. ಸಂಪ್ರದಾಯ ಹಾಗೂ ನಿಯಮಾವಳಿಗಳ ಬೆಳಕಿನಲ್ಲಿ ಸದನದ ಕಲಾಪವನ್ನು ತೂಗಿಸಿಕೊಂಡು ಹೋಗುವುದಷ್ಟೇ ಸ್ಪೀಕರ್ ಆದವರ ಜವಾಬ್ದಾರಿ. ಆದರೆ ಸಮಿಶ್ರ ಸರ್ಕಾರಗಳ ನಿರ್ವಹಣೆಯಲ್ಲಿ ಸ್ಪೀಕರ್ ಸ್ಥಾನಕ್ಕೆ ಇರುವ ಮಹತ್ವವೇ ಬೇರೆ. ಏಕೆಂದರೆ ಸರ್ಕಾರದ ಬಹುಮತ ನಿಷ್ಕರ್ಷೆಯಾಗುವುದು ಸದನದಲ್ಲಿ. ಬಹುಮತದ ನಿರ್ಣಯವೂ ಸೇರಿದಂತೆ ಹಲವಾರು ಪ್ರಸ್ತಾಪಗಳ ಬಗ್ಗೆ ತೀರ್ಪುಗಳನ್ನು ಕೊಡುವಾಗ ಸ್ಪೀಕರ್ ಆದವರು ಕೊಂಚ ಎಡವಿದರೂ ಸಾಕು. ಸರ್ಕಾರ ಉರುಳುವ ಸಾಧ್ಯತೆಯನ್ನು ತಳ್ಳಿಹಾಕುವಂತಿಲ್ಲ. ಇದು ಭಾರತದ

ಸಂಸದೀಯ ಕಲಾಪದಲ್ಲಿ ನಡೆದುಕೊಂಡು ಬಂದಿರುವ ನಿದರ್ಶನಗಳ ಪಾಠ. ನರೇಂದ್ರ ಮೋದಿ ನೇತೃತ್ವದಲ್ಲಿ ಅಧಿಕಾರಕ್ಕೆ ಬರಲಿರುವ ಬಿಜೆಪಿ ನೇತೃತ್ವದ ಎನ್‌ಡಿಎ ಸಮ್ಮಿಶ್ರ ಸರ್ಕಾರದಲ್ಲಿಯೂ ಕೂಡಾ ಸ್ಪೀಕರ್ ಸ್ಥಾನಕ್ಕೆ ಹೆಚ್ಚಿನ ಮಹತ್ವ ಇರುವುದು ಖಂಡಿತಾ. ಬಹುಶ: ಈ ಸೂಕ್ಷ್ಮವನ್ನು ಗುರುತಿಸಿರುವ ಆಂಧ್ರಪ್ರದೇಶದ ತೆಲುಗುದೇಶಂ ಮುಖಂಡ ಚಂದ್ರಬಾಬು ನಾಯ್ಡು ತಮ್ಮ ಪಕ್ಷಕ್ಕೆ ಸ್ಪೀಕರ್ ಸ್ಥಾನವನ್ನು ಕೊಡಬೇಕು ಎಂಬ ಪ್ರಸ್ತಾಪವಿಟ್ಟಿರುವುದು. ಸ್ಪೀಕರ್ ಸ್ಥಾನವನ್ನು ಸಮ್ಮಿಶ್ರ ಸರ್ಕಾರದ ಪ್ರಧಾನ ಅಂಗಪಕ್ಷ ಬೇರೆ ಪಕ್ಷಗಳಿಗೆ ಬಿಟ್ಟುಕೊಡುವ ಸಾಧ್ಯತೆಗಳು ವಿರಳ. ಈ ಹಿಂದೆ 1996ರ ನಂತರ ವಾಜಪೇಯಿ ನೇತೃತ್ವ ಎನ್‌ಡಿಎ ಸಮ್ಮಿಶ್ರ ಸರ್ಕಾರದಲ್ಲಿ ತೆಲುಗುದೇಶಂನ ಜಿಎಂಸಿ ಬಾಲಯೋಗಿ ಸ್ಪೀಕರ್ ಆಗಿದ್ದರು. ಹಾಗೆಯೇ ಮನಮೋಹನ್‌ಸಿಂಗ್ ನೇತೃತ್ವದ ಯುಪಿಎ ಸಮ್ಮಿಶ್ರ ಸರ್ಕಾರದಲ್ಲಿ ಸಿಪಿಎಂನ ಸೋಮನಾಥ ಚಟರ್ಜಿ ಸ್ಪೀಕರ್ ಆಗಿದ್ದರು. ಈ ಇಬ್ಬರು ಸ್ಪೀಕರ್ ಆಗಿದ್ದಾಗ ಸದನದಲ್ಲಿ ಕೈಗೊಂಡ ಕೆಲವು ತೀರ್ಪುಗಳು ಸರ್ಕಾರಕ್ಕೆ ಇರುಸುಮುರುಸು ಮಾಡಿದ್ದನ್ನು ಮರೆಯುವಂತಿಲ್ಲ. ಬಹುಶ: ಇಂತಹ ಸೂಕ್ಷ್ಮಗಳನ್ನು ಗುರುತಿಸಿರುವ ಚಂದ್ರಬಾಬು ನಾಯ್ಡು ಸ್ಪೀಕರ್ ಸ್ಥಾನ ತಮ್ಮ ಪಕ್ಷಕ್ಕೆ ಬೇಕು ಎಂದು ಪಟ್ಟು ಹಾಕಿರುವುದು ನಿಜವಾಗಿಯೂ ಒಂದು ರಾಜಕೀಯ ಜಾಣ್ಮೆ. ಸಮ್ಮಿಶ್ರ ಸರ್ಕಾರಗಳು ಆಡಳಿತದಲ್ಲಿರುವಾಗ ಅಧಿವೇಶನದ ಸಂದರ್ಭಗಳಲ್ಲಿ ಅವಿಶ್ವಾಸ ನಿರ್ಣಯಗಳು ಹಾಗೂ ಸರ್ಕಾರವನ್ನು ಇಕ್ಕಟ್ಟಿಗೆ ಸಿಕ್ಕಿಸುವ ಛೀಮಾರಿ ನಿರ್ಣಯಗಳು ಮಂಡನೆಯಾಗುವುದು ವಾಡಿಕೆ. ಸ್ಥಿತಪ್ರಜ್ಞತೆಯಿಂದ ನಡೆದುಕೊಳ್ಳುವ ಸ್ಪೀಕರ್ ಆಗಿದ್ದರೆ ಈ ನಿರ್ಣಯಗಳ ಪ್ರಸ್ತಾದ ಪೂರ್ವಭಾವಿ ಚರ್ಚೆಯಲ್ಲಿಯೇ ಅವುಗಳ ಗುಣಾವಗುಣಗಳನ್ನು ವಿಶ್ಲೇಷಿಸಿ ಸಾಮಾನ್ಯವಾಗಿ ಅನುಮತಿ ನಿರಾಕರಿಸುವುದು ವಾಡಿಕೆ. ಹಾಗಾಗದಿದ್ದರೆ ಸರ್ಕಾರಕ್ಕೆ ಇಕ್ಕಟ್ಟು. ಕೊಂಚ ವಾಲು ಮನೋಧರ್ಮದವರು ಸ್ಪೀಕರ್ ಆದರೆ ಇಂತಹ ಫಜೀತಿ ಎದುರಿಸುವ ಪರಿಸ್ಥಿತಿ ಉದ್ಭವಿಸಲಾರದು. ಇನ್ನು ಮೈತ್ರಿಕೂಟಕ್ಕೆ ಬಹುಮತವಿದ್ದರೂ ಮೈತ್ರಿಕೂಟದ ಪ್ರಧಾನ ಪಕ್ಷಕ್ಕೆ ಬಹುಮತ ಇಲ್ಲದೇ ಇರುವ ಸಂದರ್ಭದಲ್ಲಿ ಪಕ್ಷಾಂತರದ ಬೆಳವಣಿಗೆಗಳು ಸರ್ವೇಸಾಮಾನ್ಯ ಸಂಬಂಧಿಸಿದ ರಾಜಕೀಯ ಪಕ್ಷಗಳ ಅಧ್ಯಕ್ಷ ಮನವಿಯ ಮೇರೆಗೆ ಸ್ಪೀಕರ್ ಪಕ್ಷಾಂತರಕ್ಕೆ ಸಂಬಂಧಿಸಿದ ದೂರಗಳ ಬಗ್ಗೆ ನಿರ್ಣಯ ಕೈಗೊಂಡರೆ, ವಿವಾದಿತ ಸದಸ್ಯರು ಅನರ್ಹತೆಗೆ ಒಳಗಾಗುತ್ತಾರೆ. ಉದಾರ ನಿಲುವು ತಳೆದರೆ ಅನರ್ಹತೆಯಿಂದ ಪಾರಾಗುತ್ತಾರೆ. ಇಂತಹ ಸಂದರ್ಭಗಳಲ್ಲಿ ಸ್ಪೀಕರ್ ಕೈಗೊಳ್ಳುವ ನಿರ್ಧಾರ ಪ್ರಶ್ನಾತೀತ. ಯಾಕೆಂದರೆ ಈ ನಿರ್ಧಾರಗಳನ್ನು ನ್ಯಾಯಾಲಯದಲ್ಲಿಯೂ ಕೂಡಾ ಪ್ರಶ್ನಿಸಲು ಸಾಧ್ಯವಾಗುವುದಿಲ್ಲ. ನಿರ್ಧಾರದ ವಿಧಾನವನ್ನು ಮಾತ್ರ ಪ್ರಶ್ನಿಸಬಹುದೇ ವಿನ: ನಿರ್ಧಾರವನ್ನು ಪ್ರಶ್ನಿಸುವುದು ನಿಷಿದ್ಧ. ಹೀಗಾಗಿಯೇ ಸ್ಪೀಕರ್ ಸ್ಥಾನ ಸಮ್ಮಿಶ್ರ ರಾಜಕೀಯ ವ್ಯವಸ್ಥೆಯಲ್ಲಿ ತುಂಬಾ ಆಯಕಟ್ಟಿನದು.

ಈಗಿನ ನೂತನ ಲೋಕಸಭೆಯ ಸಂರಚನೆಯಲ್ಲಿ ಆಡಳಿತ ಹಾಗೂ ಪ್ರತಿಪಕ್ಷಗಳ ನಡುವಿನ ಅಂತರ ಕೇವಲ 60 ಮಾತ್ರ ಯಾವುದೇ ಒಂದು ಅಂಗಪಕ್ಷ ಸೆಡ್ಡುಹೊಡೆದು ನಿಂತರೂ ಸರ್ಕಾರಕ್ಕೆ ಸಂಚಕಾರ. ವಾಜಪೇಯಿ ಸರ್ಕಾರ 1990ರ ದಶಕದ ಮಧ್ಯಭಾಗದಲ್ಲಿ ಎರಡನೆಯ ಬಾರಿಗೆ ವಿಶ್ವಾಸಮತವನ್ನು ಯಾಚಿಸಿದಾಗ ಸಂಸತ್ತಿನಲ್ಲಿ ನಡೆದ ಕಲಾಪ ಅತ್ಯಂತ ಅಪರೂಪದ ಗುಣಮಟ್ಟದಿಂದ ಕೂಡಿದ್ದನ್ನು ಸ್ಮರಿಸಬಹುದು. ಆಗ ಒಡಿಸ್ಸಾದ ಮುಖ್ಯಮಂತ್ರಿಯಾಗಿದ್ದ ಗಿರಿಧರ್ ಗಮಾಂಗ್ ಇವರು ಇನ್ನೂ ಲೋಕಸಭಾ ಸ್ಥಾನಕ್ಕೆ ಕೊಟ್ಟಿದ್ದ ರಾಜೀನಾಮೆ ಇನ್ನೂ ಅಂಗೀಕಾರವಾಗಿರಲಿಲ್ಲ. ವಿಶ್ವಾಸಮತ ಗೆಲುವು ಹಾಗೂ ಸೋಲಿಗೆ ಕೇವಲ ಒಂದು ಮತ ಮಾತ್ರ ನಿರ್ಣಾಯಕವಾಗಿತ್ತು. ಈ ಸಂದರ್ಭದಲ್ಲಿ ಸಾಕಷ್ಟು ವ್ಯವಧಾನ ಸಮಚಿತ್ತ ಹಾಗೂ ಕಾನೂನು ತಜ್ಞರ ಸಮಾಲೋಚನೆಯ ನಂತರ ಸ್ಪೀಕರ್ ಬಾಲಯೋಗಿ ಅವರು ಗಿರಿಧರ್ ಗಮಾಂಗ್ ಅವರು ರಾಜೀನಾಮೆ ಕೊಟ್ಟಿರುವುದನ್ನು ಒಪ್ಪಿ ವಿಶ್ವಾಸಮತಕ್ಕೆ ಗೆಲುವಾಗಿದೆ ಎಂದು ಘೋಷಿಸಿದ್ದು ಒಂದು ಐತಿಹಾಸಿಕ ತೀರ್ಪು. ಇದಾದ ನಂತರ ವಾಜಪೇಯಿ

ಸರ್ಕಾರ ಸುಸೂತ್ರವಾಗಿ ಆಡಳಿತವನ್ನು ನಿರ್ವಹಿಸಿತು ಎಂಬುದು ಪ್ರತ್ಯೇಕ ವಿಚಾರ. ಸೋಮನಾಥ ಚಟರ್ಜಿ ಅವರು ಕೂಡಾ ಸ್ಪೀಕರ್ ಆಗಿದ್ದ ಸಂದರ್ಭದಲ್ಲಿ ಪಕ್ಷ ಮರ್ಜಿಯಿಲ್ಲದೇ ನಿರ್ದಾಕ್ಷಿಣ್ಯ ತೀರ್ಪುಗಳನ್ನು ಕೊಟ್ಟ ಪರಿಣಾಮವಾಗಿ ಮುಂದೆ ಅವರು ಚುನಾವಣೆಗೆ ಸ್ಪರ್ಧಿಸಲು ಕೂಡಾ ಅವಕಾಶವಾಗಲಿಲ್ಲ ಎಂಬುದರಲ್ಲಿ ಸ್ಪೀಕರ್ ಸ್ಥಾನ ಮತ್ತು ಚಟರ್ಜಿ ಅವರ ವ್ಯಕ್ತಿತ್ವದ ಕುರುಹುಗಳನ್ನು ಗುರುತಿಸಬಹುದು. ಪಕ್ಷಾಂತರ ನಿಷೇಧ ಶಾಸನ ರಾಜಕೀಯ ಬಿಕ್ಕಟ್ಟುಗಳ ಸಂದರ್ಭದಲ್ಲಿ ಬ್ರಹ್ಮಾಸ್ತ್ರದಂತೆ ಪ್ರಯೋಗವಾಗುತ್ತದೆ. ಈ ಬ್ರಹ್ಮಾಸ್ತ್ರವನ್ನು ಶಮನಗೊಳಿಸುವ ಇಲ್ಲವೇ ಅದನ್ನು ಬಳಸಿ ನಿರ್ನಾಮ ಮಾಡುವ ಪರಮಾಧಿಕಾರವಿರುವುದು ಸ್ಪೀಕರ್‌ಗೆ ಮಾತ್ರ. ಈ ಹಿನ್ನೆಲೆಯಲ್ಲಿ ನರೇಂದ್ರ ಮೋದಿ ನೇತೃತ್ವದಲ್ಲಿ ಅಧಿಕಾರಕ್ಕೆ ಬರಲಿರುವ ಸರ್ಕಾರದ ಅವಧಿಯಲ್ಲಿ ಯಾರು ಸ್ಪೀಕರ್ ಸ್ಥಾನಕ್ಕೆ ಬರುತ್ತಾರೆ ಎಂಬುದು ಮುಂದಿನ ಬೆಳವಣಿಗೆಯ ದೃಷ್ಟಿಯಿಂದ ನಿರ್ಣಾಯಕ.

**ಆಧಾರ:** ಸಂಯುಕ್ತ ಕರ್ನಾಟಕ, ದಿನಾಂಕ: 07.06.2024

## 3. ಮೇಲ್ಮನೆ ರಚನೆ ಸ್ವಾರಸ್ಯ

ವಿಧಾನಪರಿಷತ್ ಅಥವಾ ವಾಡಿಕೆಯಲ್ಲಿ ಕರೆಯುವ ಮೇಲ್ಮನೆ ಭಾರತದ ಎಲ್ಲಾ ರಾಜ್ಯಗಳಲ್ಲಿಲ್ಲ ಕರ್ನಾಟಕದಲ್ಲಿ ಇದೆ. ಇದು ಬ್ರಿಟಿಷ್ ಪರಿಕಲ್ಪನೆಯ ಬೈಕ್ಯಾಮರಾ ಪದ್ಧತಿ. ನೇರ ಚುನಾವಣೆಯ ಮೂಲಕ ಆಯ್ಕೆಯಾದ ಸದಸ್ಯರ ಒಕ್ಕೂಟವಾದ ವಿಧಾನಸಭೆಯಲ್ಲಿ ರೂಪಿಸುವ ಆಡಳಿತದ ಧೋರಣೆಗಳ ಮೇಲೆ ಬೆಳಕನ್ನು ಚೆಲ್ಲಿ ಸಮತೋಲನ ಕಾಪಾಡುವ ನಿಟ್ಟಿನಲ್ಲಿ ಸಹಕಾರಿಯಾದ ಸದನ ಈ ಮನೆಗೆ ಸದಸ್ಯರನ್ನು ನೇರ ಚುನಾವಣೆಯ ಮೂಲಕ ಆಯ್ಕೆ ಮಾಡಲಾಗುವುದಿಲ್ಲ. ಬದಲು, ಪ್ರತಿನಿಧೀಕರಣ ರೂಪದಲ್ಲಿ ವಿವಿಧ ಕ್ಷೇತ್ರಗಳಿಂದ ಆಯ್ಕೆ ಮಾಡಲಾಗುವುದು. ವಿಧಾನಸಭಾ ಸದಸ್ಯರ ಕ್ಷೇತ್ರ, ಸ್ಥಳೀಯ ಸಂಸ್ಥೆಗಳ ಕ್ಷೇತ್ರ, ಶಿಕ್ಷಕರ ಕ್ಷೇತ್ರ, ಪದವೀಧರ ಕ್ಷೇತ್ರ ಹಾಗೂ ಕಲೆ, ಕ್ರೀಡೆ, ವಿಜ್ಞಾನ, ಸಾಮಾಜಿಕ ಕ್ಷೇತ್ರಗಳಲ್ಲಿ ಗಣನೀಯ ಸೇವೆ ಸಲ್ಲಿಸಿದವರ ಸಮೂಹದಿಂದ ಸರ್ಕಾರದ ನಾಮನಿರ್ದೇಶನ ನೇಮಕಾತಿಯಿಂದ ಭರ್ತಿ ಮಾಡಲಾಗುತ್ತಿದೆ. ಈ ಮನೆಯ ಸದಸ್ಯ ಬಲ ವಿಧಾನಸಭಾ ಸದಸ್ಯ ಬಲದ ಮೂರನೇ ಒಂದಂಶದಷ್ಟಿರತಕ್ಕದ್ದು ಎಂಬ ನಿರ್ದೇಶನ ಸಂವಿಧಾನದ ಪರಿಚ್ಛೇದ(171)ರಲ್ಲಿ ಅಡಕವಾಗಿದೆ. ಸದಸ್ಯತ್ವದ ಅವಧಿ ಆರು ವರ್ಷ. ಪ್ರತಿ ಎರಡು ವರ್ಷಗಳಿಗೊಮ್ಮೆ ಸದಸ್ಯ ಬಲದ ಮೂರನೇ ಒಂದರಷ್ಟು ಖಾಲಿ ಹಾಗೂ ಭರ್ತಿಯಾಗುವ ವಿಧಾನದಂತೆ ಈ ಮನೆ ವಿಸರ್ಜನೆಗೆ ಒಳಪಟ್ಟಿರುವುದಿಲ್ಲ.

ಚುನಾವಣೆಗೆ ಸಂಬಂಧಿಸಿ ಆಯೋಗಕ್ಕೆ ಯಾವುದೇ ವ್ಯಕ್ತಿ, ಯಾವುದೇ ವಸ್ತು, ವಾಹನ ಅವುಗಳ ಸೇವೆಯನ್ನು ಸೆಳೆಯುವ ವಿಶಿಷ್ಟ ಅಧಿಕಾರದತ್ತವಾಗಿದೆ. ಅದರಂತೆ ಮತದಾರರ ಪಟ್ಟಿ ತಯಾರಿಯಲ್ಲಿ ಒಳಗೊಂಡ ಎಲ್ಲ ಅಧಿಕಾರಿ ಸಿಬ್ಬಂದಿಗಳೂ ಆಯೋಗದಿಂದ ನೇರ ನಿಯೋಜಿತರಾಗಿರುತ್ತಾರೆ. ಪ್ರೌಢ ಮತದಾನ ಪದ್ಧತಿಯಂತೆ ಸಿದ್ದಪಡಿಸಲಾದ ಮತದಾರರ ಪಟ್ಟಿಯನ್ನೇ ಸಾರ್ವತ್ರಿಕ ಚುನಾವಣೆ (ವಿಧಾನಸಭೆ, ಸಂಸತ್–ಜನರಲ್ ಎಲೆಕ್ಷನ್)ಗೆ ಬಳಸುವುದಲ್ಲದೆ ಸ್ಥಳೀಯ ಸಂಸ್ಥೆಗಳ ಚುನಾವಣೆಗೂ ಆಧಾರ.

ಹೀಗೆ ಸಿದ್ಧಪಡಿಸಿದ ಮತದಾರರ ಪಟ್ಟಿಯನ್ನು ಆಗಾಗ ಬರುವ ಚುನಾವಣೆಗೆ ಮುನ್ನ ಪರಿಷ್ಕರಣೆ ಮಾಡುವ ಹೊಣೆಯೂ ಆಯೋಗದ್ದೇ. ಇಲ್ಲಿ ಪರಿಷ್ಕರಣೆ ಎಂದರೆ ಖಾಯಂ ಆಗಿ ಕ್ಷೇತ್ರ ಬಿಟ್ಟು ಹೋದವರ ಹಾಗೂ ಮೃತಪಟ್ಟವರ ಹೆಸರನ್ನು ಪಟ್ಟಿಯಿಂದ ಹೊಡೆದು ಹಾಕಿ, ಅರ್ಹತೆಯುಳ್ಳ

ಹೊಸಬರನ್ನು ಮೂಲಪಟ್ಟಿಗೆ ಸೇರ್ಪಡೆ ಮಾಡುವ ಪ್ರಕ್ರಿಯೆ. ಸರ್ವೇಕ್ಷಣೆಯಲ್ಲಿಯೇ ಖಚಿತಪಡಿಸಿಕೊಳ್ಳಬೇಕಾದ ವಿಚಾರ. ಸರ್ವೇಕ್ಷಣೆಯ ಪ್ರಕ್ರಿಯೆಯನ್ನು ಸರಳಗೊಳಿಸಲು ಆಯೋಗದ ನಿಯೋಜಿತ ಅಧಿಕಾರಿಗಳು ಪತ್ರಿಕಾ ಪ್ರಕಟಣೆ ನೀಡಿ ಅಸಕ್ತ ಅರ್ಹ ವ್ಯಕ್ತಿಗಳ ಸೇರ್ಪಡೆಗೆ ಅವಕಾಶ ಕಲ್ಪಿಸುವ ಪರಿಪಾಠ ಈಗ ಚಾಲ್ತಿಯಲ್ಲಿದೆ. ಆದರೆ ಮೇಲೆ ಹೇಳಿದ ಮಾನದಂಡಗಳನ್ನು ಖಚಿತಪಡಿಸಿಕೊಳ್ಳದೆ ಹಾಲಿ ಇರುವ ಹೆಸರನ್ನು ಹೊಡೆದು ಹಾಕಲು ಅವಕಾಶವಿರುವುದಿಲ್ಲ ನೊಂದಣಿ ಅಧಿಕಾರಿಗಳಿಗೆ ಈ ಸಂಬಂಧದ ಹೊಣೆಗಾರಿಕೆಯನ್ನು ಜನತಾ ಪ್ರಾತಿನಿಧ್ಯ ಕಾಯಿದೆ 1950ರ ಸೆಕ್ಷನ್ 27ರಲ್ಲಿ ವಿಷದಪಡಿಸಲಾಗಿದೆ.

ಸೋಜಿಗವೆಂದರೆ ಪ್ರಸಕ್ತ 2024ರ ಪರಿಷತ್ ಚುನಾವಣೆಗೆ ಬಳಸಲು ಉದ್ದೇಶಿಸಿದ ಮತದಾರ ಪಟ್ಟಿಯಲ್ಲಿ ಹಿಂದೆ ಇದ್ದ ಅನೇಕ ಹೆಸರುಗಳು ಕಣ್ಮರೆಯಾಗಿವೆ. ಈ ವ್ಯಕ್ತಿಗಳು ತಮ್ಮ ಖಾಯಂ ವಾಸ್ತವ್ಯ ಬದಲಾಯಿಸಿಲ್ಲ ಮತ್ತು ಮೃತಪಟ್ಟೂ ಇಲ್ಲ. ಆದರೆ ಹೆಸರು ಕಣ್ಮರೆಯಾಗಿದೆ. ಸಾರ್ವತ್ರಿಕ ಚುನಾವಣೆಯ ಬಗ್ಗೆ ಮತದಾರರ ಪಟ್ಟಿ ಸಿದ್ಧಪಡಿಸಿ ಕಾಪಿಸಲು ತಳಮಟ್ಟದಲ್ಲಿ ಬಿಎಲ್‌ಓ (Booth lever officer)ಗಳನ್ನು ಗುರುತಿಸಿ ಜವಾಬ್ದಾರಿ ನಿಗಧಿಪಡಿಸಲಾಗಿದೆ. ಅವರಿಂದಲೇ ಪರಿಷತ್ ಮತದಾರ ಪಟ್ಟಿ ಪರಿಷ್ಕರಣೆ ಕಾರ್ಯ ಮಾಡಬಹುದಾಗಿದೆ. ಕೇವಲ ಪತ್ರಿಕಾ ಪ್ರಕಟಣೆಯ ಆಧಾರದಲ್ಲಿ ಬಂದ ಅರ್ಜಿಗಳನ್ನು ಕ್ರೋಡೀಕರಿಸಿ ಪ್ರತಿಬಾರಿಯೂ ಹೊಸಪಟ್ಟಿ ತಯಾರಿಸಿ ಪರಿಷತ್ ಚುನಾವಣೆಗೆ ಬಳಸುವ ಕ್ರಮ ಅಸಾಂವಿಧಾನಿಕವೆಂದೇ ಹೇಳದೆ ವಿಧಿಯಿಲ್ಲ.

ಲೇಖಕರು:ಬೇಳೂರು ರಾಘವ ಶೆಟ್ಟಿ

**ಆಧಾರ:** ವಿಜಯ ಕರ್ನಾಟಕ, ದಿನಾಂಕ: 11.06.2024.

## 4. ಹೊರಟ್ಟಿ– @ 44: ಸಂಸದೀಯ ಪಯಣದ ಸಾರ್ಥಕ ಮೈಲಿಗಲ್ಲು

ನಾಡಿನ ಶಿಕ್ಷಣ ಸಮೂಹದ ಸ್ವಾಭಿಮಾನ ಹೆಚ್ಚಿಸಿ ಅವರ ಬದುಕಿಗೊಂದು ದಾರಿ ತೋರಿದ ಬಸವರಾಜ ಹೊರಟ್ಟಿ ಅವರು 1980 ಜೂನ್ 30 ರಿಂದ ಮೇಲ್ಮನೆ ಸದಸ್ಯರಾಗಿದ್ದಾರೆ. ಅಂದಿನಿಂದ ಆರಂಭವಾದ ಅವರ ಈ ಸಂಸದೀಯ ಪಯಣ ಇಂದಿಗೂ ನಿಂತಿಲ್ಲ. ಶಿಕ್ಷಕ ಸಮುದಾಯ ಅವರ ಕೈ ಬಿಡದೇ ನಿರಂತರವಾಗಿ ಆಯ್ಕೆ ಮಾಡು ಕಳಿಸುತ್ತಿರುವುದರಿಂದ ಅವರು ಸೋಲಿಲ್ಲದ ಸರದಾರ.

ಬ್ಯಾಸರಿಲ್ಲದ ಜೀವ ಹೊರಟ್ಟಿಯವರದ್ದು. ಸದಾ ಶಿಕ್ಷಕರ ಹಿತಕ್ಕಾಗಿ ಸ್ಪಂದಿಸುವ ಅವರು ತಮ್ಮ ಜೀವನದ ಬಹುಪಾಲು ಸಮಯವನ್ನು ಶಿಕ್ಷಕರಿಗಾಗಿಯೇ ಸವೆಸಿದವರು. ಅವರ ಬತ್ತದ ಹೋರಾಟ ಇಂದಿಗೂ ನಿಂತಿಲ್ಲ. ಅದೇ ಉತ್ಸಾಹ, ಶಿಕ್ಷಕರೊಂದಿಗೆ ಅದೇ ನಂಟು. ಈ 44 ವರ್ಷಗಳ ಪಯಣದ ದಿನಗಳು ಸಾರ್ವಜನಿಕ ಬದುಕಿಗೆ ಕನ್ನಡಿ ಇದ್ದಂತೆ.

ಹೊರಟ್ಟಿ ಸಾಧಿಸಿದ ಮೈಲುಗಲ್ಲುಗಳು ಸದಾ ಮಾತನಾಡುತ್ತಾ ಇರುತ್ತವೆ. ಹೊರಟ್ಟಿ ನಾಡಿನ ಲಕ್ಷ್ಯಾಂತರ ಶಿಕ್ಷಕರ ಬಾಳಿಗೆ ಬೆಳಕಾದವರು. ಇಂದು ಉದ್ಯಮವಾಗಿರುವ ರಾಜಕೀಯ ಕ್ಷೇತ್ರದಲ್ಲಿ ಶುದ್ಧ ಹಸ್ತರಾಗಿ ರಾಜಕಾರಣ ಮಾಡುವುದೆಂದರೆ ದಿನವೂ ಅಗ್ನಿ ದಿವ್ಯಗಳನ್ನು ಹಾಯುವ, ನೋವು ಸಂಕಟಗಳನ್ನು ಜೀರ್ಣಿಸಿಕೊಳ್ಳುವ ನೈತಿಕ ಶಕ್ತಿ ರಾಜಕಾರಣಿಗಳಿಗೆ ಇರಬೇಕಾಗುತ್ತದೆ. ಅಂಥಹ ನೈತಿಕ ಶಕ್ತಿಯ ಪ್ರತೀಕವೆಂಬಂತೆ ಬಸವರಾಜ ಹೊರಟ್ಟಿ ನಮ್ಮ ನಡುವೆ ಸಮಾಜವನ್ನು ಪ್ರಭಾವಿಸುತ್ತಿದ್ದಾರೆ.

ಹೊರಟ್ಟಿಯವರು ಒಬ್ಬ ಅಪ್ಪಟ ಮನುಷ್ಯ, ಅಂದರೆ ಮಾನವೀಯತೆಯ ಎಲ್ಲ ಮೌಲ್ಯಗಳೊಂದಿಗೆ ಬಾಳುತ್ತಿರುವ ವ್ಯಕ್ತಿಯನ್ನು ನಾವು ಕಾಣಬಹುದು. ಅಧಿಕಾರದ ಮದವಾಗಲಿ, ಜನಪ್ರಿಯತೆಯ ಭ್ರಮೆಯಾಗಲಿ ಅವರನ್ನು ಕಾಡಿಲ್ಲ. ಜಾತಿ, ಕುಲ ಗೋತ್ರದ ಕೆಸರನ್ನು ಎರಚುವವರ ಮಧ್ಯದಲ್ಲಿಯೂ ತಾವು ನಂಬಿದ ಮೌಲ್ಯಗಳಿಗೆ ತಕ್ಕ ಹಾಗೆ ಬದುಕುವ ಬಹುದೊಡ್ಡ ಗುಣ ಅವರಲ್ಲಿ ಗಟ್ಟಿಯಾಗಿದೆ. ಮತೀಯ ರಾಜಕಾರಣ ಮಾಡದ ನಾಡಿನ ಅಪರೂಪದ ರಾಜಕಾರಣಿ ಅವರು.

ಕಳೆದ ಶತಮಾನದ 80ರ ದಶಕವು ಕರ್ನಾಟಕದ ಪಾಲಿಗೆ ಹಲವು ಕಾರಣಗಳಿಂದ ಮನ್ವಂತರದ ಕಾಲವೆಂದು ಕರೆಯಿಸಿಕೊಳ್ಳುತ್ತಿದೆ. ಈ ಕಾಲದಲ್ಲಿ ರಾಜಕೀಯ ರಂಗ ಪ್ರವೇಶಿಸಿದ ಹೊರಟ್ಟಿಯವರು 1980 ರಿಂದ ನಿರಂತರವಾಗಿ ಗೆಲ್ಲುತ್ತಿರುವುದಕ್ಕೆ ಪಕ್ಷ ಕಾರಣವೆಂದು ಹೇಳುವುದು ಅಸತ್ಯವಾದೀತು. ವೈಯಕ್ತಿಕ ವ್ಯಕ್ತಿತ್ವದ ಕಾರಣದಿಂದ ಸೋಲನ್ನು ಮಣಿಸಿ ಗದರಿಸಿ ನಿರಂತರ ಗೆಲುವಿನೊಂದಿಗೆ ಅವರು ದಿಟ್ಟ ಹೆಜ್ಜೆಗಳನ್ನು ಹಾಕುತ್ತಿದ್ದಾರೆನ್ನುವುದು ಹೆಚ್ಚು ಸೂಕ್ತ.

ಒಬ್ಬ ಸಾಮಾನ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಮಗನಾಗಿ ಸ್ವತಃ ಶಿಕ್ಷಕರಾಗಿ, ಶಿಕ್ಷಕ ಸಮುದಾಯದ ಪ್ರತಿನಿಧಿಗಳಾಗಿ ವಿಧಾನ ಪರಿಷತ್ ಪ್ರವೇಶಿಸಿ, ಸಚಿವರಾಗಿ, ಮೂರು ಬಾರಿ ಸಭಾಪತಿಗಳಾಗಿ ಆಯ್ಕೆಗೊಂಡು ಒಂದೇ ಕ್ಷೇತ್ರದಿಂದ ಸತತ 8 ಸಲ ಗೆದ್ದು ವಿಶ್ವ ದಾಖಲೆ ನಿರ್ಮಿಸುವ ಇಂಗ್ಲೆಂಡ್‌ನ ವರ್ಲ್ಡ್ ಬುಕ್ ಆಫ್ ರೆಕಾರ್ಡ್ಸ್‌ನ ಹಾಗೂ ಲಿಮ್ಕಾ ಬುಕ್ ಆಫ್ ರೆಕಾರ್ಡ್ಸ್‌ನ ದಾಖಲೆಯ ಹಿರಿಮೆಗೆ ಪಾತ್ರರಾಗುವುದು ಸಾಮಾನ್ಯ ಸಂಗತಿಯಲ್ಲ.

ಹೊರಟ್ಟಿಯವರದ್ದು ಮಾತೃ ಹೃದಯ. ರಾಜಕೀಯದಲ್ಲಿ ಅಪರೂಪದ ಗುಣವಿದು. ತಮ್ಮ ಜನಪರ ನಿಲುವುಗಳೊಂದಿಗೆ ಜನಮಾನಸದಲ್ಲಿ ರಾಜಕೀಯ ಕ್ಷೇತ್ರದ ದಂತಕಥೆಯಾಗಿರುವ ಬಸವರಾಜ ಎಸ್. ಹೊರಟ್ಟಿಯವರು ಮುಂದಿನ ಪೀಳಿಗೆಗೆ ಮಾದರಿ ರಾಜಕಾರಣಿಯಾಗಿದ್ದಾರೆ.

**ಲೇಖಕರು: ಡಾ:ಬಸವರಾಜ್ ಧಾರವಾಡ**

**ಆಧಾರ:** ಸಂಯುಕ್ತ ಕರ್ನಾಟಕ, ದಿನಾಂಕ: 30.06.2024.